ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 7 ಶನಿವಾರ 2023

ಸಂಪುಟ: 44 | ಸಂಚಿಕೆ: 172 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ರಾಜ್ಯಾದ್ಯಂತ ಹೊಸದಾಗಿ 188 ಇಂದಿರಾ ಕ್ಯಾಂಟೀನ್ ಆರಂಭ



ಬೆಳಗಾವಿ, ಅ.6– ರಾಜ್ಯಾದ್ಯಂತ



ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ವ್ಯಾಪ್ತಿಯಲ್ಲಿ ಹೊಸದಾಗಿ 188 ಇಂದಿರಾ ಕ್ಯಾಂಟೀನ್ ತೆರೆಯಲಿದ್ದೇವೆ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ತಿಳಿಸಿದ್ದಾರೆ. **ಬೆಳಗಾವಿಯಲ್ಲಿ ಶುಕ್ರವಾರ ರಾಣಿ ಚೆನ್ನಮ್ಮ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜೊತೆ ಅವರು ಮಾತನಾಡಿದರು.**

ಇಂದಿರಾ ಕ್ಯಾಂಟೀನ್‌ಗಳು ತುಂಬಾ ಆರ್ಥಿಕ ಸಂಕಷ್ಟದಲ್ಲಿವೆಯಂತಲ್ಲ ಎಂಬ ಪ್ರಶ್ನೆಗೆ, ಹಿಂದಿನ ಬಿಜೆಪಿ ಸರ್ಕಾರ ಸಿದ್ದರಾಮಯ್ಯನವರ ಮಹತ್ವಾಕಾಂಕ್ಷಿ ಯೋಜನೆಗೆ ಕೆಟ್ಟ ಹೆಸರು ತರಲು ಸರಿಯಾಗಿ ನಿರ್ವಹಣೆ ಮಾಡದೇ ಕ್ಯಾಂಟೀನ್‌ಗಳನ್ನು ಮುಚ್ಚುವ ಸ್ಥಿತಿಗೆ ತಂದಿದ್ದಾರೆ. ಈ ಯೋಜನೆಯನ್ನು ಯಾವುದೇ ಕಾರಣಕ್ಕೂ ಕೈ ಬಿಡುವ ಪ್ರಶ್ನೆಯೇ ಇಲ್ಲ. ಕ್ಯಾಂಟೀನ್‌ಗಳ ಪುನಶ್ಚೇತನಕ್ಕೆ 240 ಕೋಟಿ ರೂ. ಖರ್ಚು ಮಾಡುತ್ತಿದ್ದೇವೆ. ಪ್ರಾದೇಶಿಕವಾಗಿ **ಬೆಳಗಾವಿ ಭಾಗದಲ್ಲಿ ರೊಟ್ಟಿ ಊಟ, ಮೈಸೂರು ಭಾಗದಲ್ಲಿ ರಾಗಿ ಮುದ್ದೆ ಬೆಂಗಳೂರಿನಲ್ಲಿ** ಅನ್ನ, ಇಡ್ಲಿ ವಿತರಿಸುವ ಮೆನು ಸಿದ್ಧಪಡಿಸಿ ಜಾರಿಗೊಳಿಸುತ್ತೇವೆ. ಈಗಾಗಲೇ 24 ಜಿಲ್ಲೆಯಲ್ಲಿ ಸಮೀಕ್ಷೆಯಾಗಿದ್ದು ಸಭೆ ನಡೆಸಿದ್ದೇವೆ ಎಂದರು.

ಸಿಎಂ ಸಿದ್ದರಾಮಯ್ಯ ನಾಲಾ ಯಕ್ ಎಂಬ ಬಿಜೆಪಿ ಶಾಸಕ ಯತ್ನಾಳ್ ಹೇಳಿಕೆ ವಿಚಾರಕ್ಕೆ, ಇಡೀ ಪ್ರಪಂಚ, ದೇಶ, ರಾಜ್ಯಕ್ಕೆ ಸಿದ್ದರಾಮಯ್ಯ ಎಂತಹ ಲಾಯಕ್ ವ್ಯಕ್ತಿ ಅಂತಾ ತಿಳಿದಿದೆ. ಮುಖ್ಯಮಂತ್ರಿ ಯಾಗಿ ಉತ್ತಮ ಆಡಳಿತ ನೀಡುತ್ತಿದ್ದಾರೆ ಎಂಬುದೂ ಎಲ್ಲರಿಗೂ ಗೊತ್ತಿದೆ. ಬಿಜೆಪಿ ಯಂಥ ನಾಲಾಯಕರಿಗೆ ಉತ್ತರಿಸುವ ಅಗತ್ಯವಿಲ್ಲ ಎಂದು ತಿರುಗೇಟು ಕೊಟ್ಟರು. ಪೌರ ಕಾರ್ಮಿಕರನ್ನು ಖಾಯಂಗೊಳಿಸಿ ಆದೇಶ ಪತ್ರಗಳನ್ನು ಈಗಾಗಲೇ ನಾನು ಮತ್ತು ಸಚಿವ ರಹೀಂ ಖಾನ್ ವಿತರಿಸುತ್ತಿದ್ದೇವೆ. ಎಲ್ಲೆಲ್ಲಿ ಕಡಿಮೆ ಇದ್ದಾರೋ, ಅಲ್ಲೆಲ್ಲಾ ಪೌರಕಾರ್ಮಿಕರನ್ನು ತುಂಬಿಕೊಳ್ಳುತ್ತೇವೆ ಎಂದರು.

ನಾಡಿನ ದೊರೆ ನಾಲ್ವಡಿ ನಮನದೊಂದಿಗೆ ದಸರಾ 'ಯುವ ಸಂಭ್ರಮ'ಕ್ಕೆ ಸಂತಸದ ಚಾಲನೆ








ಮೈಸೂರು, ಅ.6(ಎಸ್‌ಬಿಡಿ)–ಮೈಸೂರು ದಸರಾ ಮಹೋತ್ಸವದ ಸಾಂಸ್ಕೃತಿಕ ವೈಭವದ ಮುನ್ನುಡಿ 'ಯುವ ಸಂಭ್ರಮ'ಕ್ಕೆ ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ಶುಕ್ರವಾರ ಅದ್ಧೂರಿ ಚಾಲನೆ ದೊರಕಿತು. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಮರಣೆಯೊಂದಿಗೆ ಈ ಬಾರಿಯ ಎಂಟು ದಿನಗಳ 'ಯುವ ಸಂಭ್ರಮ' ಸಾಂಸ್ಕೃತಿಕ ವೈಭವ ಆರಂಭವಾಯಿತು. ಹೆಚ್.ಡಿ.ಕೋಟೆ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ತಂಡ 'ಮೈಸೂರು ದಸರಾ ವೈಭವ ಮತ್ತು ಮಾದರಿ ಕರ್ನಾಟಕವಾಗುವಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪಾತ್ರ' ಥೀಮ್‌ನೊಂದಿಗೆ ಅತ್ಯಾಕರ್ಷಕ ನೃತ್ಯ ರೂಪಕ ಪ್ರಸ್ತುತಪಡಿಸಿದರು. 'ನಮ್ಮೂರ ಕಾಯೋ ದೊರೆಯೇ..' 'ಮರೆಯೋದುಂಟೇ ಮೈಸೂರು ದೊರೆಯಾ...' ಇನ್ನಿತರ ಗೀತೆಗಳಿಗೆ ಹೆಜ್ಜೆ ಹಾಕಿ ನಾಲ್ವಡಿ ಅವರ ಸಾಧನೆಗಳನ್ನು ಕಣ್ಣಿಗೆ ಕಟ್ಟಿದರು.

ನಂಜನಗೂಡು ಪರಶುರಾಮ ಟೆಂಪಲ್ ಸ್ಟ್ರೀಟ್‌ನ ಶ್ರೀಕಂಠೇಶ್ವರ ಕೈಗಾರಿಕಾ ತರಬೇತಿ ಸಂಸ್ಥೆ ವಿದ್ಯಾರ್ಥಿಗಳ ತಂಡ, 'ನಂಜನಗೂಡಿನಿಂದ ಹುಲಿಯನೇರಿ ಬಂದ ಏಳು ಮಲೆಯ ಮಾದಪ್ಪ' ಥೀಮ್‌ನೊಂದಿಗೆ ಭಕ್ತಿ ಸಿಂಚನ ಉಂಟು ಮಾಡಿದರು. ವಾಗ್ದೇವಿನಗರದ ಶ್ರೀಮತಿ ಪುಟ್ಟೀರಮ್ಮ ಕಿವುಡು ಹೆಣ್ಣುಮಕ್ಕಳ ವಸತಿ ಶಾಲೆ ವಿದ್ಯಾರ್ಥಿನಿಯರ 'ಮಹಿಳಾ ಸಬಲೀಕರಣ' ಪ್ರಸ್ತುತಿ ನೆರೆದಿದ್ದವರನ್ನು ಭಾವುಕಗೊಳಿಸಿತು. ಹೀಗೆ 20ಕ್ಕೂ ಹೆಚ್ಚು ತಂಡಗಳು ತಮ್ಮ ಪ್ರತಿಭೆ ಅನಾವರಣ ಮಾಡಿದವು. ಅ.13ರವರೆಗೆ ▶ 6ನೇ ಪುಟಕ್ಕೆ

ಮೈಸೂರಲ್ಲಿ ದಸರಾ ಏರ್ ಶೋಗೆ ಸಿದ್ಧತೆ

ಕೇಂದ್ರದ ಅನುಮತಿ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ, ಭಾರತೀಯ ವಾಯುಪಡೆ ಅಧಿಕಾರಿಗಳಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಸ್ಥಳ ಪರಿಶೀಲನೆ; ಶೀಘ್ರ ದಿನಾಂಕ, ಸಮಯ ನಿಗದಿ



ಮೈಸೂರು, ಅ.6(ಆರ್‌ಕೆ)– ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ, ವೈಮಾನಿಕ ಪ್ರದರ್ಶನಕ್ಕೆ (ಏರ್ ಶೋ) ಕೇಂದ್ರ ಸರ್ಕಾರ ಅನುಮತಿ ನೀಡಿದೆ.

ಕಳೆದ ಮೂರು ವರ್ಷಗಳಿಂದ ಕೊರೊನಾ ಹಾಗೂ ಇನ್ನಿತರ ಕಾರಣಗಳಿಂದಾಗಿ ದಸರಾ ಏರ್ ಶೋ ನಡೆದಿರಲಿಲ್ಲ. ಇದೀಗ ರಾಜ್ಯ ಸರ್ಕಾರದ ಮನವಿಗೆ ಸ್ಪಂದಿಸಿರುವ ಕೇಂದ್ರ ಸರ್ಕಾರವು 2023ರ ದಸರಾ ಮಹೋತ್ಸವದಲ್ಲಿ ಏರ್ ಶೋ ನಡೆಸಲು ಅನುಮತಿ ನೀಡಿದೆ. ಈ ಹಿನ್ನೆಲೆಯಲ್ಲಿ ಶುಕ್ರವಾರ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಭಾರತೀಯ ವಾಯುಪಡೆ (ಇಂಡಿಯನ್ ಏರ್ ಫೋರ್ಸ್)ಯ ಗ್ರೂಪ್ ಕ್ಯಾಪ್ಟನ್ ಡಿ.ಕೆ.ಓಜಾ ಅವರೊಂದಿಗೆ ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ವತಃ ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಅವರನ್ನು ಇತ್ತೀಚೆಗೆ ನವದೆಹಲಿಯಲ್ಲಿ ಭೇಟಿ ಮಾಡಿ ದಸರಾದಲ್ಲಿ ಭಾರತೀಯ ವಾಯುಪಡೆಯಿಂದ ಏರ್ ಶೋ ನಡೆಸಲು ಉದ್ದೇಶಿಸಿರುವುದಾಗಿ ತಿಳಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ▶ 6ನೇ ಪುಟಕ್ಕೆ

ಕರ್ನಾಟಕ ಗಾಂಧಿ ತಗಡೂರು ರಾಮಚಂದ್ರ ರಾಯರ ಸ್ಮರಣೆ



ಮೈಸೂರು, ಅ. 6– ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ ಹಾಗೂ ಅಪೂರ್ವ ಸ್ನೇಹ ಬಳಗದ ವತಿಯಿಂದ ಚಾಮುಂಡಿಪುರಂ ನಲ್ಲಿರುವ ತಗಡೂರು ರಾಮಚಂದ್ರರಾವ್ ಉದ್ಯಾನವನದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಜಮ್ನಾಲಾಲ್ ಪ್ರಶಸ್ತಿ ಪುರಸ್ಕೃತರು ಮತ್ತು ಕರ್ನಾಟಕದ ಗಾಂಧಿ ಎಂದೇ ಪ್ರಖ್ಯಾತರಾದ ದಿವಂಗತ ತಗಡೂರು ರಾಮಚಂದ್ರ ರಾವ್ ಅವರ 125ನೇ ಜನ್ಮದಿನದ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮುಖಾಂತರ ಅವರ ಸ್ವತಂತ್ರ ಕಾಲದ ಕೊಡುಗೆಗಳನ್ನು ಸ್ಮರಿಸಲಾಯಿತು.

ಈ ವೇಳೆ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ಮಾತನಾಡಿ, ಮಹಾತ್ಮ ಗಾಂಧೀಜಿ ಅವರು ಸ್ವಾತಂತ್ರ್ಯ ಚಳವಳಿಯನ್ನು ದೇಶಾದ್ಯಂತ ತೀವ್ರಗೊಳಿಸಿದ್ದ ಸಂದರ್ಭದಲ್ಲಿ ಕರ್ನಾಟಕದಿಂದಲೂ ಅನೇಕ ಮಂದಿ ಗಾಂಧಿ ಅನುಯಾಯಿಗಳು ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಗಾಂಧೀಜಿ ಅವರ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿ ರಾಜ್ಯದಲ್ಲೂ ಸ್ವಾತಂತ್ರ್ಯ ಚಳವಳಿಯನ್ನು ತೀವ್ರಗೊಳಿಸಿದ್ದರು. ಅಂತಹ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಕರ್ನಾಟಕದ ಗಾಂಧಿ ಎಂದೇ ಖ್ಯಾತರಾಗಿದ್ದ ಶ್ರೀ ತಗಡೂರು ರಾಮಚಂದ್ರ ರಾವ್ ಪ್ರಮುಖರು ಎಂದು ಸ್ಮರಿಸಿದರು.

ನಗರಪಾಲಿಕೆ ಸದಸ್ಯ ಮಾ.ವಿ.ರಾಮ್ ಪ್ರಸಾದ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಅಜಯ್ ಶಾಸ್ತ್ರಿ, ಸುಚೇಂದ್ರ, ವರುಣ ಮಹಾದೇವ್, ರಾಘವೇಂದ್ರ ಮಠದ ಮುಖ್ಯ ಸಂಚಾಲಕರಾದ ನಾಗರಾಜ್, ಅಕ್ಷಯ್, ಎಸ್.ಎನ್. ರಾಜೇಶ್, ರಾಕೇಶ್ ಇನ್ನಿತರರಿದ್ದರು.

ಸಿಂಹಾಸನ ಜೋಡಣೆ ಹಿನ್ನೆಲೆ ಅ.9ರಂದು

ಅರಮನೆಗೆ ಪ್ರವಾಸಿಗರ ಪ್ರವೇಶಕ್ಕೆ ನಿರ್ಬಂಧ

- ಅ.15ರ ಖಾಸಗಿ ದರ್ಬಾರ್ ದಿನ ಮಧ್ಯಾಹ್ನದ ತನಕ ನಿರ್ಬಂಧ
- ಅ.23ರ ಆಯುಧ ಪೂಜೆ ದಿನ ಮಧ್ಯಾಹ್ನದ ತನಕ ನಿರ್ಬಂಧ
- ಅ.24ರ ಜಂಬೂ ಸವಾರಿ ದಿನ ಪೂರ್ಣ ದಿನ ಪ್ರವೇಶವಿಲ್ಲ
- ನ.8ರ ಸಿಂಹಾಸನ ವಿಸರ್ಜನೆ ದಿನ ಮಧ್ಯಾಹ್ನದ ತನಕ ನಿರ್ಬಂಧ

ಮೈಸೂರು, ಅ.6(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಸಿಂಹಾಸನ ಜೋಡಣೆ ಕಾರಣ ಅ.9ರಂದು ಮಧ್ಯಾಹ್ನದ ತನಕ ಮೈಸೂರು ಅರಮನೆಗೆ ಪ್ರವಾಸಿಗರ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

ಸಿಂಹಾಸನ ಜೋಡಣೆ ಹಿನ್ನೆಲೆಯಲ್ಲಿ ಅಕ್ಟೋಬರ್ 9 ರಂದು ಅರಮನೆ ಒಳಗೆ ರಾಜಮನೆತನದವರು ಮುಂಜಾನೆಯಿಂದಲೇ ವಿಶೇಷ ಪೂಜಾ ಕಾರ್ಯ ನೆರವೇರಿಸಲಿದ್ದಾರೆ. ತರುವಾಯ ಅರಮನೆ ಮಂಡಳಿ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಹಾಗೂ ರಾಜಮನೆತನದವರ ಸಮಕ್ಷಮದಲ್ಲಿ ಸ್ಟ್ರಾಂಗ್ ರೂಂ ಬೀಗ ತೆರೆಯಲಾಗುವುದು. ನಂತರ ಸ್ಟ್ರಾಂಗ್ ರೂಂನಿಂದ ಸಿಂಹಾಸನದ ಬಿಡಿ ಭಾಗಗಳನ್ನು ಹೊರಗೆ ತರಲಾಗುವುದು.

ಪೊಲೀಸರ ಬಿಗಿ ಬಂದೋಬಸ್ತ್‌ನಲ್ಲಿ ಅಂದು ಬೆಳಿಗ್ಗೆ 8 ಗಂಟೆಗೆ ಸಿಂಹಾಸನ ಜೋಡಣಾ ಕಾರ್ಯ ಆರಂಭಿಸಲಾಗುವುದು. ಅರಮನೆಯ ನುರಿತ ಸಿಬ್ಬಂದಿ ಸಿಂಹಾಸನ ಜೋಡಣೆ ಮಾಡಲಿದ್ದಾರೆ.

ಈ ಹಿನ್ನೆಲೆಯಲ್ಲಿ ಅಕ್ಟೋಬರ್ 9 ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ಗಂಟೆ ತನಕ ಮೈಸೂರು ಅರಮನೆಗೆ ಪ್ರವಾಸಿಗರ ಪ್ರವೇಶವನ್ನು ನಿರ್ಬಂಧಿಸಲಾಗಿದೆ ಎಂದು ಮೈಸೂರು ಅರಮನೆ ಮಂಡಳಿಯ ಕಾರ್ಯ ನಿರ್ವಾಹಕ ಅಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ರಾಜೇಂದ್ರ ತಿಳಿಸಿದ್ದಾರೆ.

ಶರನ್ನವರಾತ್ರಿಯ ಮೊದಲ ದಿನದಿಂದ ದಸರಾ ಆರಂಭವಾಗಲಿದೆ. ಈ ಹಿನ್ನೆಲೆ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಖಾಸಗಿ ದರ್ಬಾರ್ ನಡೆಸಲಿದ್ದಾರೆ. ಅಂದು ಅರಮನೆಯಲ್ಲಿ ಯದುವೀರ್ ಅವರು ಹೋಮ ಸೇರಿದಂತೆ ಹಲವು ಧಾರ್ಮಿಕ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಲಿದ್ದಾರೆ. ಈ ಕಾರಣ ಅಕ್ಟೋಬರ್ 15 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆ ತನಕ ಅರಮನೆಗೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ಹೇಳಿದ್ದಾರೆ. ಅಕ್ಟೋಬರ್ 23 ರಂದು ಆಯುಧ ಪೂಜೆ ಹಿನ್ನೆಲೆ ಅರಮನೆಯಲ್ಲಿ



ರಾಜವಂಶಸ್ಥರ ಆಯುಧ ಪೂಜಾ ವಿಧಿ ವಿಧಾನಗಳು ನೆರವೇರುವ ಕಾರಣ ಅಂದು ಬೆಳಿಗ್ಗೆ 10 ರಿಂದ 2 ಗಂಟೆ ತನಕ ಅರಮನೆಗೆ ಪ್ರವಾಸಿಗರ ಪ್ರವೇಶ ಇರುವುದಿಲ್ಲ ಎಂದು ಡಾ.ರಾಜೇಂದ್ರ ತಿಳಿಸಿದ್ದಾರೆ.

ದಸರಾ ಮಹೋತ್ಸವದ ಕೊನೆಯ ದಿನವಾದ ಅಕ್ಟೋಬರ್ 24 ರಂದು ವಿಜಯ ದಶಮಿ ಕಾರ್ಯಕ್ರಮಗಳು ನಡೆಯುವ ಕಾರಣ ಅಂದು ಅರಮನೆಗೆ ಇಡೀ ದಿನ ಪ್ರವಾಸಿಗರಿಗೆ ಪ್ರವೇಶ ಇರುವುದಿಲ್ಲ ಎಂದು ಮಾಹಿತಿ ನೀಡಿದ್ದಾರೆ. ದಸರಾ ಮಹೋತ್ಸವದ ಎಲ್ಲಾ ಕಾರ್ಯಕ್ರಮಗಳು ಸಮಾಪ್ತಿಗೊಂಡ ನಂತರ ನವೆಂಬರ್ 8ರಂದು ಸಿಂಹಾಸನ ವಿಸರ್ಜನೆ ಮಾಡಲಾಗುವುದು. ಈ ಹಿನ್ನೆಲೆ ಅಂದು ಬೆಳಿಗ್ಗೆ 10ರಿಂದ 1 ಗಂಟೆ ತನಕ ಅರಮನೆಗೆ ಪ್ರವಾಸಿಗರ ಪ್ರವೇಶ ಇರುವುದಿಲ್ಲ ಎಂದು ಕಾರ್ಯನಿರ್ವಾಹಕ ಅಧಿಕಾರಿಗಳು ಡಾ.ರಾಜೇಂದ್ರ ತಿಳಿಸಿದ್ದಾರೆ.

ಇಂದು 'ಗಾನಾಮೃತ' ಸಂಗೀತ ಸಂಜೆ

ಮೈಸೂರು, ಅ.6(ಜಿಎ)–ಮೈಸೂರಿನ ಸ್ಟ್ಯಾನ್ಲಿ ಪಾರ್ಕರ್ ಸ್ಕೂಲ್ ಆಫ್ ಮ್ಯೂಸಿಕ್ ವತಿಯಿಂದ ಅ.7ರಂದು ಸಂಜೆ 4 ಗಂಟೆಗೆ ನಗರದ ಕುವೆಂಪು ನಗರದಲ್ಲಿರುವ ಗಾನ ಭಾರತೀ ವೀಣೆ ಶೇಷಣ್ಣ ಭವನದಲ್ಲಿ ಕನ್ನಡ ಚಲನ ಚಿತ್ರಗೀತೆ ಮತ್ತು ಭಾವಗೀತೆಗಳ ಸಂಗೀತ ಸಂಜೆ ಗಾನಾಮೃತ 5ನೇ ಆವೃತ್ತಿ ಆಯೋಜಿಸಲಾಗಿದೆ ಎಂದು ಸಂಸ್ಥೆ ಮುಖ್ಯ ಸ್ಟ್ಯಾನ್ಲಿ ಪಾರ್ಕರ್ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಸಂಗೀತ ಕಾರ್ಯಕ್ರಮದಲ್ಲಿ 40ರಿಂದ 50 ಗೀತೆಗಳನ್ನು ನುರಿತ ಮತ್ತು ಹವ್ಯಾಸಿ ಗಾಯಕ ಗಾಯಕಿಯರು ಹಾಡಲಿದ್ದಾರೆ. ಪ್ರವೇಶ ಉಚಿತವಿದ್ದು, ಹೆಚ್ಚಿನ ಮಾಹಿತಿಗೆ 8884208793 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರೊ.ದೇವಪ್ಪ, ಸಂಪತ್ ಕುಮಾರ್ ಮತ್ತು ಜಿ.ಪಿ.ಚೇತನ್ ಉಪಸ್ಥಿತರಿದ್ದರು.



ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಅ. 6– ಮೈಸೂರಿನ ಎನ್‌ಜೆಎಸ್ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತಾಶ್ರಯದಲ್ಲಿ ಅ. 10ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 94487 53597, 99161 55453 ಸಂಪರ್ಕಿಸಬಹುದು.

ಪಿ.ಪಟ್ಟಣ್ಣ ತಾ. ಶ್ರೀ ಯೋಗಿ ನಾರಾಯಣ ಬಲಿಜ(ಬಣಜಿಗ) ಸಂಘ ಅಸ್ತಿತ್ವಕ್ಕೆ

ಮೈಸೂರು, ಅ.6(ಜಿಎ)–ಪಿರಿಯಾಪಟ್ಟಣ ತಾಲೂಕು ಶ್ರೀ ಯೋಗಿ ನಾರಾಯಣ ಬಲಿಜ(ಬಣಜಿಗ) ಸಂಘ ಅಸ್ತಿತ್ವಕ್ಕೆ ಬಂದಿದ್ದು, ಅ.8ರಂದು ಉದ್ಘಾಟನೆ ಮತ್ತು ತಾಲೂಕು ಮಟ್ಟದ ವಿಭಾಗೀಯ ಸಮಾವೇಶ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಜಗದೀಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಗೆ ಪಿರಿಯಾಪಟ್ಟಣ ಟೌನ್‌ನಲ್ಲಿರುವ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಪಶುಸಂಗೋಪನ ಹಾಗೂ ರೇಷ್ಮೆ ಇಲಾಖೆ ಮತ್ತು ಚಾಮರಾಜನಗರ ಉಸ್ತುವಾರಿ ಸಚಿವರೂ ಆದ ಕೆ.ವೆಂಕಟೇಶ್ ಅವರು ಉದ್ಘಾಟಿಸಲಿದ್ದಾರೆ. ಸಮಾವೇಶಕ್ಕೆ ಲೋಕಸಭಾ ಸದಸ್ಯರಾದ ಪಿ.ಸಿ.ಮೋಹನ್ ಚಾಲನೆ ನೀಡಲಿದ್ದಾರೆ ಎಂದರು.

ಶ್ರೀ ಯೋಗಿ ನಾರಾಯಣ ಗುರುಗಳ ಭಾವಚಿತ್ರಕ್ಕೆ ಕರ್ನಾಟಕ ರಾಜ್ಯ ಬಲಿಜ ಸಂಘದ ಅಧ್ಯಕ್ಷ ಡಾ.ಟಿ.ವೇಣುಗೋಪಾಲ್ ಪುಷ್ಪಾರ್ಚನೆ ಮಾಡಲಿದ್ದಾರೆ. ಕರ್ನಾಟಕ ರಾಜ್ಯ ಸಮಗ್ರ ಬಲಿಜ ವೇದಿಕೆ ಗೌರವಾಧ್ಯಕ್ಷ ಡಾ.ಎಸ್.ಕೃಷ್ಣಪ್ಪ ಪ್ರಾಸ್ತಾವಿಕ ನುಡಿ ಆಡಲಿದ್ದು, ಪಿರಿಯಾಪಟ್ಟಣ ತಾಲೂಕು ಸಂಘದ ಅಧ್ಯಕ್ಷನಾದ ನಾನು ಅಧ್ಯಕ್ಷತೆ ವಹಿಸಿಕೊಳ್ಳುತ್ತೇನೆ. ಕಾರ್ಯಕ್ರಮದಲ್ಲಿ ಬಲಿಜ ಸಮಾಜದ ಮುಂಡರಾದ ಮಮತ ದೇವರಾಜ್ ಅವರನ್ನು ಅಭಿನಂದಿಸಲಾಗುತ್ತಿದ್ದು, ಸಮಾಜದ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸೋಣ ಎಂದು ಕರೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ರಮೇಶ್, ನಿರ್ದೇಶಕ ಪ್ರಸನ್ನ ಉಪಸ್ಥಿತರಿದ್ದರು.



ಡಿ.23, 24 ದಾವಣಗೆರೆಯಲ್ಲಿ ಲಿಂಗಾಯತ ಮಹಾ ಅಧಿವೇಶನ



ದಾವಣಗೆರೆ, ಅ.6–ದಾವಣಗೆರೆಯಲ್ಲಿ ಡಿಸೆಂಬರ್ 23 ಮತ್ತು 24ರಂದು ಲಿಂಗಾಯತ ಮಹಾ ಅಧಿವೇಶನ ನಡೆಯಲಿದೆ. ಈ ಸಂಬಂಧ ಇಂದು ದಾವಣಗೆರೆಯ ಬಾಪೂಜಿ ಎಂಬಿಎ ಕಾಲೇಜಿನಲ್ಲಿ ಪೂರ್ವ ಸಿದ್ಧತಾ ಸಭೆ ನಡೆಸಲಾಗಿದೆ.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಮಾಜದ ಹಿರಿಯ ಮುಖಂಡರೂ ಆದ ಮಾಜಿ ಸಚಿವ ಶಾಮನೂರು ಶಿವಶಂಕರಪ್ಪ, ಡಿ. 23, 24ರಂದು ಲಿಂಗಾಯತ ಮಹಾ ಅಧಿವೇಶನ ನಡೆಯುತ್ತದೆ. ಈ ಮಹಾ ಅಧಿವೇಶನ ಶಕ್ತಿ ಪ್ರದರ್ಶನವಲ್ಲ. 10 ಲಕ್ಷಕ್ಕೂ ಹೆಚ್ಚು ಜನರು ಸೇರಿದರೆ ಅದು ಶಕ್ತಿ ಪ್ರದರ್ಶನ ಆಗಲಿದೆ ಎಂದರು.

ಲಿಂಗಾಯತ ಅಧಿಕಾರಿಗಳಿಗೆ ಅನ್ಯಾಯವಾಗುತ್ತಿರುವುದಾಗಿ ತಾವು ನೀಡಿದ ಹೇಳಿಕೆ ವಿಚಾರವಾಗಿ ಹೈಕಮಾಂಡ್‌ನಿಂದಲೂ ನನಗೆ ಯಾವ ನೋಟಿಸ್ ಬಂದಿಲ್ಲ ಎಂದ ಅವರು, ಸಿಎಂ ಸಿದ್ದರಾಮಯ್ಯ ಜೊತೆ ತಾವು ಮಾತನಾಡಿರುವುದನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದರು.

ಇದಕ್ಕೂ ಮುನ್ನ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಪೂರ್ವಭಾವಿ ಸಭೆ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಸಚಿವ ಈಶ್ವರ ಖಂಡ್ರೆ ಮಾತ್ರ ಮಾತನಾಡಿದ್ದು, ಶಾಸಕ ಶಾಮನೂರ ಶಿವಶಂಕರಪ್ಪ ಮೌನಕ್ಕೆ ಶರಣಾಗಿದ್ದರು.

ದಸರಾ ಆಹಾರ ಮೇಳದ ಆನ್‌ಲೈನ್ ಬಿಡ್ಡಿಂಗ್ ರದ್ದು: ಸಿಎಂಗೆ ವ್ಯಾಪಾರಸ್ಥರಿಂದ ಧನ್ಯವಾದ



ಮೈಸೂರು, ಅ.6(ಜಿಎ)–ದಸರಾ ಆಹಾರ ಮೇಳದಲ್ಲಿ ಆನ್‌ಲೈನ್ ಬಿಡ್ಡಿಂಗ್ ಟೆಂಡರ್ ಪದ್ಧತಿ ರದ್ದು ಮಾಡಿದ ಮುಖ್ಯಮಂತ್ರಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಗೆ ಆಹಾರ ಮೇಳದ ವ್ಯಾಪಾರಸ್ಥರ ಸಂಘವು ಧನ್ಯವಾದ ತಿಳಿಸಿದೆ.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ನಾಗಾರಾಜ್ ಮಾತನಾಡಿ, ಈ ಬಾರಿ ಆಹಾರ ಮೇಳದಲ್ಲಿ ಆನ್‌ಲೈನ್ ಬಿಡ್ಡಿಂಗ್ ಟೆಂಡರ್ ಪದ್ಧತಿ ಅಳವಡಿಸಲು ಉಪಸಮಿತಿ ಮುಂದಾಗಿತ್ತು. ಆದರೆ, ಇದರಿಂದ ಎಲ್ಲರಿಗೂ ತೊಂದರೆ ಆಗುತ್ತದೆ ಎಂದು ಈ ಪದ್ಧತಿಯನ್ನು ರದ್ದುಗೊಳಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮತ್ತು ಮುಖ್ಯಮಂತ್ರಿ ಬಳಿ ಸಂಘದ ವತಿಯಿಂದ ಮನವಿ ಸಲ್ಲಿಸಲಾಗಿತು. ಮನವಿಯನ್ನು ಪುರಸ್ಕರಿಸಿದ ಮುಖ್ಯಮಂತ್ರಿಗಳು ಆನ್‌ಲೈನ್ ಪದ್ಧತಿಯನ್ನು ರದ್ದು ಪಡಿದ್ದಾರೆ. ಆದರಿಂದ ಜಿಲ್ಲಾಧಿಕಾರಿ, ಮುಡಾ ಆಯುಕ್ತರು ಮತ್ತು ಆಹಾರ ಉಪಸಮಿತಿಯ ಎಲ್ಲರಿಗೂ ಧನ್ಯವಾದ ಎಂದರು.

ಮೈಸೂರಲ್ಲಿ ಮೊದಲ ಬಾರಿ ಆಹಾರ ಮೇಳ ಆರಂಭವಾದಾಗ 500 ರಿಂದ 3 ಸಾವಿರ ರೂ. ಡಿಡಿ ಕಟ್ಟಿಸಿಕೊಳ್ಳುತ್ತಿದ್ದರು. ಕಾಲಕ್ರಮೇಣ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದ ನಂತರ 5 ಸಾವಿರದಿಂದ 30 ಸಾವಿರ ರೂ. ಡಿಡಿ ಕಟ್ಟಿಸಿಕೊಳ್ಳುವುದು ವಾಡಿಕೆಯಾಗಿತ್ತು. ಆದರೆ, ಈ ಬಾರಿ ಹೆಚ್ಚಿಸುವ ಲಕ್ಷಣಗಳು ಕಾಣುತ್ತಿದ್ದು, ಈ ಬಾರಿಯ ಮೇಳದಲ್ಲಿ 30 ಸಾವಿರ ರೂ. ನಿಂದ 35 ಸಾವಿರ ರೂ. ಕಟ್ಟಿಸಿಕೊಂಡರೆ ಒಳಿತು ಎಂದು ಮನವಿ ಮಾಡಿದರು.

ಈ ಬಾರಿ ಚಾಮರಾಜನಗರ ಜಿಲ್ಲೆ ಮತ್ತು ಹೆಚ್.ಡಿ.ಕೋಟೆ ತಾಲೂಕನ್ನು ಬರ ಪೀಡಿತ ಜಿಲ್ಲೆ ಎಂದು ಈಗಾಗಲೇ ಘೋಷಿಸಿರುವ ಹಿನ್ನೆಲೆಯಲ್ಲಿ ಸರ್ಕಾರದ ವತಿಯಿಂದ ಆಹಾರ ಮೇಳದ ನಿರ್ವಹಣೆಗೆ 30ರಿಂದ 40 ಲಕ್ಷ ರೂ ಅನುದಾನ ನೀಡಬೇಕು. ಎಲ್ಲಾ ಮಳಿಗೆದಾರರಿಗೂ ಐಡಿ ಕಾರ್ಡ್ ವಿತರಿಸಬೇಕು ಜೊತೆಗೆ ಈ ಬಾರಿಯ ಆಹಾರ ಮೇಳ ಅ.15ರಿಂದ 22ರವರೆಗೆ ನಡೆಯಲಿದೆ ಅದನ್ನು ಅ.23 ಮತ್ತು 24ಕ್ಕೂ ವಿಸ್ತರಿಸಬೇಕೆಂದು ನಾಳೆ ಮೈಸೂರಿಗೆ ಬರುವ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಮಾಡುತ್ತೇವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷೆ ಶಾಂತಮ್ಮ, ಪ್ರಧಾನ ಕಾರ್ಯದರ್ಶಿ ಕಂಸಾಳೆ ರವಿ, ಸಂಚಾಲಕರಾದ ಹರೀಶ್, ಭಾಸ್ಕರ್ ಉಪಸ್ಥಿತರಿದ್ದರು.

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 101.08 ಅಡಿ	ಇಂದಿನ ಮಟ್ಟ 2,276.42 ಅಡಿ	ಇಂದಿನ ಮಟ್ಟ 2,855.62 ಅಡಿ
ಹಿಂದಿನ ವರ್ಷದ ಮಟ್ಟ 123.56 ಅಡಿ	ಹಿಂದಿನ ವರ್ಷದ ಮಟ್ಟ 2,282.33 ಅಡಿ	ಹಿಂದಿನ ವರ್ಷದ ಮಟ್ಟ 2,854.32 ಅಡಿ
ನಿನ್ನೆಯ ಮಟ್ಟ 100.82 ಅಡಿ	ನಿನ್ನೆಯ ಮಟ್ಟ 2,276.28 ಅಡಿ	ನಿನ್ನೆಯ ಮಟ್ಟ 2,855.38 ಅಡಿ
ಇಂದಿನ ಒಳಹರಿವು 4,046 ಕ್ಯೂಸೆಕ್	ಇಂದಿನ ಒಳಹರಿವು 1,972 ಕ್ಯೂಸೆಕ್	ಇಂದಿನ ಒಳಹರಿವು 2,122 ಕ್ಯೂಸೆಕ್
ಇಂದಿನ ಹೊರಹರಿವು 1,490 ಕ್ಯೂಸೆಕ್	ಇಂದಿನ ಹೊರಹರಿವು 1,000 ಕ್ಯೂಸೆಕ್	ಇಂದಿನ ಹೊರಹರಿವು 1,150 ಕ್ಯೂಸೆಕ್

ಪ್ರತಿ ತಿಂಗಳ ಮೊದಲ ಶನಿವಾರದಂದು ಪಾರಂಪರಿಕ ನಡಿಗೆ

ಮೈಸೂರು, ಅ.6– ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಪ್ರತಿ ತಿಂಗಳ ಮೊದಲನೇ ಶನಿವಾರದಂದು ವಿದ್ಯಾರ್ಥಿಗಳು, ಇತಿಹಾಸ ಆಸಕ್ತರು ಹಾಗೂ ಸಾರ್ವಜನಿಕರಿಗೆ ನಡಿಗೆ ಮೂಲಕ ಪಾರಂಪರಿಕ ಕಟ್ಟಡಗಳ ಮಹತ್ವ, ಐತಿಹಾಸಿಕ ಹಿನ್ನೆಲೆ ಹಾಗೂ ವಾಸ್ತುಶಿಲ್ಪಗಳ ಕುರಿತು ಜಾಗೃತಿ ಮೂಡಿಸುವ ಸಂಬಂಧ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿಯನ್ನು ತಿಳಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಕಾರ್ಯಕ್ರಮವು ಬೆಳಗ್ಗೆ 6.30ರಿಂದ ಪ್ರಾರಂಭವಾಗಲಿದ್ದು, ಇದಕ್ಕೆ ಯಾವುದೇ ಶುಲ್ಕ ಇರುವುದಿಲ್ಲ. ಆಸಕ್ತರು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಉಪ ನಿರ್ದೇಶಕರ ಕಚೇರಿಯಲ್ಲಿ ಬೆಳಿಗ್ಗೆ 10.30ರಿಂದ ಸಂಜೆ 5.30ರವರೆಗೆ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಸ್ತಾರ ಸಹಸ್ರ ಚಂಡಿ ಮಹಾಯಾಗ

ಮೈಸೂರು, ಅ. 6– ಮೈಸೂರಿನ ಶ್ರೀ ಅಮೃತೇಶ್ವರ ದೇವಸ್ಥಾನದ ಶ್ರೀ ಸಾಮ್ರಾಜ್ಯ ಮಹಾಲಕ್ಷ್ಮಿ ಸನ್ನಿಧಿಯಲ್ಲಿ ಅ. 15ರಿಂದ 23 ಮತ್ತು ಅ. 27ರಂದು ಶರನ್ನವರಾತ್ರಿ ಪ್ರಯುಕ್ತ ವಿಸ್ತಾರ ಸಹಸ್ರ ಚಂಡೀ ಮಹಾಯಾಗನಡೆಯಲಿದೆ.ಅ. 15ರಿಂದ 23ರವರೆಗೆ ಪ್ರತಿದಿನ ಬೆಳಗ್ಗೆ 9 ಗಂಟೆಗೆ ಪ್ರಾರಂಭವಾಗಿ 12.30ಕ್ಕೆ ಪೂರ್ಣಾಹುತಿ ಮತ್ತೇ ಅ. 27ರಂದು ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ ನಡೆಯಲಿದೆ. ವೇದ ಬ್ರಹ್ಮ ಶ್ರೀ ಭಾನುಪ್ರಕಾಶ್ ಶರ್ಮಾ ಮಾರ್ಗದರ್ಶನದಲ್ಲಿ ಮೈ. ಕುಮಾರ್ ನೇತೃತ್ವದಲ್ಲಿ ವೇದಬ್ರಹ್ಮ ಶ್ರೀ ಯಜ್ಞೇಶ್ವರ ಐತಾಳ ಅವರಿಂದ 10 ದಿನ ಶ್ರೀ ಚಕ್ರನವಾರಣ ಪೂಜೆ ಹಾಗೂ ಮೈಸೂರು ಜಿಲ್ಲಾ ಬ್ರಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ಸಹಕಾರದಲ್ಲಿ 73ನೇ ವಿಸ್ತಾರ ಸಹಸ್ರ ಚಂಡೀ ಮಹಾ ಯಾಗ ನಡೆಯಲಿದ್ದು, ಪ್ರತೀದಿನ ಶತಚಂಡಿ ಹೋಮವ ನಡೆಯಲಿದೆ. ಮೊ.9845183392 ಅಥವಾ 9845183399 ಅನ್ನು ಸಂಪರ್ಕಿಸಬಹುದು.

ನಿಧನ



ಶ್ರೀಮತಿ ಜಯಮ್ಮ


ಮೈಸೂರು, ಅ.6–ಮೈಸೂರಿನ ಗಾಂಧಿನಗರದ ಶ್ರೀ ದುರ್ಗಾದೇವಿ ದೇವಸ್ಥಾನದ ರಸ್ತೆಯ ನಿವಾಸಿ ದಿವಂಗತ ಡಿ.ನಾಗೇಂದ್ರ ಅವರ ಪತ್ನಿ ಜಯಮ್ಮ (74) ಬುಧವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಮಕ್ಕಳಾದ ನಾಗಲಕ್ಷ್ಮಿ, ಶಂಕರ ನಾರಾಯಣ, ಅಂಬುಜಾಕ್ಷಿ, ಶಶಿಧರ ಮೂರ್ತಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಸಂಜೆ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ವೆಂಕಟರಮಣ ನಾಯಕ

ಗುಂಡ್ಲುಪೇಟೆ, ಅ. 6– ಗುಂಡ್ಲುಪೇಟೆ ತಾಲೂಕು ಚಿಕ್ಕಾಟಿ ಗ್ರಾಮದ ತಾಪಂ ಮಾಜಿ ಉಪಾಧ್ಯಕ್ಷ ಬಂಗಾರನಾಯಕ ಅವರ ತಂದೆ, ಎಳನೀರು ವ್ಯಾಪಾರಿ ವೆಂಕಟರಮಣ ನಾಯಕ(85) ನಿಧನರಾದರು. ಮೃತರು ಪತ್ನಿ, ಪುತ್ರ ಬಂಗಾರ ನಾಯಕ, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಶನಿವಾರ) ಅವರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.10.2023 ಶನಿವಾರ, ಮಳೆ ನಕ್ಷತ್ರ: ಹಸ್ತ, 28.09.2023 ರಿಂದ 10.10.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಮನೆ ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.
- **ರಂಗಾಯಣ :** ಬಿ.ವಿ. ಕಾರಂತ ಕಾಲೇಜು ರಂಗೋತ್ಸವ, ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಂದ ಪರಿಜು ನಾಟಕ ಪ್ರದರ್ಶನ, ರಚನೆ : ಬೇಲೂರು ರಘುನಂದನ, ನಿರ್ದೇಶನ : ಪ್ರವೀಣ್ ಬೆಳ್ಳಿ, ಸ್ಥಳ: ವನರಂಗ.
- **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ :** ಸ್ಟೂಡೆಂಟ್ಸ್ ಕೌನ್ಸಿಲ್ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅಧ್ಯಕ್ಷತೆ : ಮಹಾವಿದ್ಯಾಲಯ ಪ್ರಿನ್ಸಿಪಾಲ್ ಪ್ರೊ. ಸಾಯಿನಾಥ ಮಲ್ಲಿಗೆಮಾಡು, ಉಪಸ್ಥಿತರು : ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲರಾದ ಪ್ರೊ. ನಯನಕುಮಾರಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.
- **ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು :** ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಗೌರವ ಅತಿಥಿಗಳು : ಖಜಾಂಚಿ ಶ್ರೀಶೈಲ ರಾಮಣ್ಣವರ್, ಪ್ರಿನ್ಸಿಪಾಲ್ ಡಾ. ಎಂ. ಶಿವಲಿಂಗೇಗೌಡ, ಸ್ಥಳ: ಸಾಹುಕಾರ್ ಚೆನ್ನಯ್ಯ ಸಭಾಂಗಣ, ಬೆಳಗ್ಗೆ 10.30ಕ್ಕೆ.
- **ಬಾಸುದೇವ ಸೋಮಾನಿ ಕಾಲೇಜು :** ರಕ್ತದಾನ ಶಿಬಿರ, ಉದ್ಘಾಟನೆ : ಕೆ.ಆರ್. ಆಸ್ಪತ್ರೆ ರಕ್ತನಿಧಿ ಅಧಿಕಾರಿ ಡಾ. ಮಂಜುನಾಥ, ಶಿಬಿರಕ್ಕೆ ಚಾಲನೆ : ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಎಂ. ಪುಟ್ಟಸ್ವಾಮಿ, ಮುಖ್ಯ ಅತಿಥಿಗಳು : ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಕುಬೇರ್ ಪಿ. ಗೌಡ, ಶ್ರೀಮತಿ ಎಸ್. ಪ್ರಭಾ, ನಿಸರ್ಗ ಲಯನ್ಸ್ ಕ್ಲಬ್ ಅಧ್ಯಕ್ಷ ಜಯಕುಮಾರ್, ಶ್ರೀಮತಿ ವಾಣಿಶ್ರೀ, ಲಯನ್ಸ್ ಕ್ಲಬ್ ಮುಖ್ಯಸ್ಥ ಬಸವೇಗೌಡ, ವಿಶೇಷ ಆಹ್ವಾನಿತರು : ಕೆ.ಎಲ್. ರಾಜಶೇಖರ್, ಅಧ್ಯಕ್ಷತೆ : ವಾಸುದೇವ ಸೋಮಾನಿ ಕಾಲೇಜು ಪ್ರಾಂಶುಪಾಲ ಡಾ. ಎಂ. ಮಹದೇವಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.
- **ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ನೂತನವಾಗಿ ನಿರ್ಮಾಣಗೊಂಡಿರುವ ಪ್ರಾರ್ಥನಾ ಮಂದಿರದ ಉದ್ಘಾಟನಾ ಸಮಾರಂಭ, ಸ್ಥಳ: ಶಿವಾಜಿ ಮುಖ್ಯ ರಸ್ತೆ, ಎನ್.ಆರ್. ಮೊಹಲ್ಲಾ, ಬೆಳಗ್ಗೆ 11ಕ್ಕೆ.
- **ಕರ್ನಾಟಕ ಅರಣ್ಯ ಇಲಾಖೆ :** 69ನೇ ವನ್ಯಜೀವಿ ಸಪ್ತಾಹದ ಸಮಾರೋಪ ಸಮಾರಂಭ, ಉಪಸ್ಥಿತರು : ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಶೇಷ ಸಾಧಕರಿಗೆ ಸನ್ಮಾನ ಮತ್ತು ಫಲಾನುಭವಿಗಳಿಗೆ ಚೆಕ್ ವಿತರಣೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಪಶು ಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ. ವೆಂಕಟೇಶ್, ಸಾಕ್ಷ್ಯಚಿತ್ರಗಳ ಬಿಡುಗಡೆ : ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ, ಅಧ್ಯಕ್ಷತೆ : ಶಾಸಕ ತನ್ವೀರ್ ಸೇಠ್, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಶ್ರೀಮತಿ ಸುಮಲತಾ ಅಂಬರೀಷ್, ಸ್ಥಳ:ಕೆಪಿಎ ಸಭಾಂಗಣ, ಮೈಸೂರು, ಮಧ್ಯಾಹ್ನ 3ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಚಿನ್ಮಯ ಮಿಷನ್ :** ಪಂಡಿತ್ ದತ್ತಪಾದಾನಂದ ಅವರಿಂದ ಗೀತಾ ಜ್ಞಾನ ಯಜ್ಞ ಕರ್ಮಸಂನ್ಯಾಸಯೋಗ (ಭಗವದ್ಗೀತೆಯ 5ನೇ ಅಧ್ಯಾಯ) ಕುರಿತು ಪ್ರವಚನ, ಸ್ಥಳ: ಚಿನ್ಮಯ ಮಿಷನ್, ರಾಮಕ್ಷೇತ್ರ, ಸಾರ್ವಜನಿಕ ಹಾಸ್ಟೆಲ್ ರಸ್ತೆ, ವಿದ್ಯಾರಣ್ಯಪುರಂ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ–ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ–ಡಾ. ಮೈಸೂರ್ ಉಮೇಶ್,7.15 ಭಾವಗೀತೆಗಳು–ಡಾ. ರೋಹಿಣಿ ಮೋಹನ್, 10.00 ಕೆ.ಜಿ. ರಾಮಸ್ವಾಮಿ ಹಾಗೂ ಎಸ್. ಶಂಕರ್–ಹಾಡುಗಾರಿಕೆ, 11.00 "ಸ್ವರಾಜ್"–ಭಾರತ ಸ್ವಾತಂತ್ಯ ಸಂಗ್ರಾಮದ ಸಮಗ್ರಗಾಥೆ

ಮಧ್ಯಾಹ್ನ: 12.30 ದೇವರನಾಮ, 1.00 ಪ್ರಗತಿಪಥ, ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 12.45 ಜನಪದಗೀತೆ, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.30 ಮಕ್ಕಳ ಮಂಟಪ–ಶ್ರೀ ಗುರುಮಹಾದೇಶ್ವರ ಆಂಗ್ಲ ಮಾಧ್ಯಮ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ, 4.30 ನೆನಪಿನಂಗಳ, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ–ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.00 ಯುವವಾಣಿ, 9.30 ಭಾರತೀಯ ಅಂಚೆಯ ವಿಶೇಷ ಸೇವೆಗಳು –ಮಾತನಾಡುತ್ತಾರೆ ಮೈಸೂರು ಅಂಚೆ ವಿಭಾಗದ ಉಪ ಅಂಚೆ ಅಧೀಕ್ಷಕರಾದ ಸುನೀಲ್ ಸುರೇಶ ಹಳಪಟ್ಟಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಪಂಡಿತ್ ವೆಂಕಟೇಶ್ ಕುಮಾರ್ – ಗಾಯನ

ನಕ್ಕರೆ ಅದೇ ಸ್ವರ್ಗ

ಪ್ರಯಾಣಿಕ : "ಇನ್ನೂ ಎಷ್ಟು ಹೊತ್ತಿಗ್ರೀ ಬರೋದು ರೈಲು, ಇಂಥಾ ಅನುಭವಕ್ಕೆ ವೇಳಾಪಟ್ಟಿ ಬೇರೆ ಯಾಕೆ ಹಾಕ್ತೀರಿ?"

ಸ್ಟೇಷನ್ ಮಾಸ್ಟರ್ : "ನಿಮಗೋಸ್ಕರ ತಾನೇ ನಾವು ಕಾಯುವ ಕೋಣೆ (ವೈಟಿಂಗ್ ರೂಂ) ಕಟ್ಟಿಸಿರೋದು? ಅದಕ್ಕೇನು ನಾವು ಛಾರ್ಜು ಮಾಡ್ತೀವಾ?!"

ಮೈಸೂರು ಮಿತ್ರ

ಶನಿವಾರ, 7 ಅಕ್ಟೋಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ನಿಜವಾದ ನಂಬಿಕೆ, ನಿಜವಾದ ಜ್ಞಾನ, ನಿಜವಾದ ಆಚರಣೆಯೇ
ನಿಜವಾದ ಮುಕ್ತಿ ಮಾರ್ಗ –ಭಗವಾನ್ ಮಹಾವೀರ

ವೇದ ಸುಳ್ಳಾದರೂ { ಅನ್ನ ಹಾಕಿದ ಮನೆ ಹಾಳಲ್ಲ,
ಗಾದೆ ಸುಳ್ಳಾಗದು { ಗೊಬ್ಬರ ಹಾಕಿದ ಹೊಲ ಹಾಳಲ್ಲ

ನಿಮ್ಮ ಪತ್ರಗಳು

ಮಹಾರಾಜರ ನಾಮ ಫಲಕಗಳನ್ನು ಅಳವಡಿಸಲಿ

ಮಾನ್ಯರೆ,

ವಿಶ್ವ ಪ್ರಸಿದ್ಧ ನಾಡಹಬ್ಬ ದಸರೆಗೆ ಇಡೀ ಮೈಸೂರು ನಗರ ಮಧುವನಗಿತ್ತಿಯಂತೆ ಸಿಂಗಾರಗೊಳ್ಳುತ್ತಿದೆ. ನಾಡ ಹಬ್ಬ ದಸರಾವನ್ನು ನೋಡಲು ದೇಶ ವಿದೇಶಗಳಿಂದ, ನಾಡಿನ ಮೂಲೆ ಮೂಲೆಗಳಿಂದ ಸಾಕಷ್ಟು ಜನ ಸಾಗರೋಪದಿಯಲ್ಲಿ ಬಂದು ಸಿಂಗಾರಗೊಂಡ ಮೈಸೂರನ್ನು ಕಣ್ತುಂಬಿಕೊಂಡು ಸಂಭ್ರಮಿಸುತ್ತಾರೆ. ದೀಪಾಲಂಕಾರ ದಿಂದ ಕಣ್ಮನ ಸೆಳೆಯುವ ಮೈಸೂರಿನ ರಾಜ ಬೀದಿಗಳು, ವಿಶ್ವ ಪ್ರಸಿದ್ದ ಅರಮನೆ ಹಾಗೆಯೇ ಮೈಸೂರಿನ ಸುತ್ತ ಮುತ್ತಲಿನ ಪ್ರದೇಶಗಳಲ್ಲಿರುವ ವಿವಿಧ ಪಾರಂಪರಿಕ ಕಟ್ಟಡಗಳು, ರಾಜ ಮಹಾರಾಜರ ಹಾಗೂ ವಿಶ್ವ ನಾಯಕರ ಭವ್ಯ ಪುತ್ಥಳಿಗಳು ಹೀಗೆ ಎಲ್ಲಿ ನೋಡಿದರಲ್ಲಿ ಇಡೀ ಮೈಸೂರಿಗೆ ಮೈಸೂರೇ ವಿದ್ಯುತ್ ದೀಪಾಲಂಕಾರ ಗಳಿಂದ ಕಂಗೊಳಿಸುತ್ತಾ ನೋಡುಗರ ಮನಸೂರೆಗೊಳ್ಳುತ್ತದೆ.

ಇಂತಹ ಆಕರ್ಷಣೀಯ ಪ್ರವಾಸಿ ಸ್ಥಳವಾದ ಮೈಸೂರನ್ನು ದಸರಾ ಸಮಯದ ಲ್ಲಂತೂ ಲಕ್ಷಾಂತರ ಮಂದಿ ವೀಕ್ಷಿಸಲು ಬರುತ್ತಾರೆ. ಹಾಗಾಗಿ ಅವರುಗಳ ಮಾಹಿತಿಗಾಗಿ ನಗರದ ಪ್ರಮುಖ ವೃತ್ತಗಳಲ್ಲಿ ನಿರ್ಮಿಸಿರುವ ನಮ್ಮ ಮೈಸೂರನ್ನಾಳಿದ ಹಾಗೂ ನಮ್ಮ ಮೈಸೂರಿನ ಶ್ರೇಯಾಭಿವೃದ್ದಿಗಾಗಿ ಶ್ರಮಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್, ಚಿಕ್ಕ ದೇವರಾಜ ಒಡೆಯರ್ ಹೀಗೆ ಅನೇಕ ಮಹಾರಾಜರುಗಳ ಪ್ರತಿಮೆಗಳ ಮುಂದೆ ಅವರ ಹೆಸರುಗಳಿರುವ ನಾಮಫಲಕಗಳನ್ನು ದೊಡ್ಡದಾಗಿ ಅಳವಡಿಸುವ ಮೂಲಕ ಪ್ರವಾಸಿಗರಿಗೆ ಮಹಾರಾಜರ ಹೆಸರು ಹಾಗೂ ಅವರ ಪ್ರತಿಮೆಗಳ ಬಗ್ಗೆ ತಿಳಿಯು ವಂತಾಗಲಿ. ಇದಕ್ಕೆ ಸಂಬಂಧಪಟ್ಟವರು ಇತ್ತ ಗಮನಹರಿಸಿ ಹೇಗೂ ಈಗಷ್ಟೇ ದಸರಾ ಸಿದ್ದತೆ ಆರಂಭಗೊಂಡಿರುವುದರಿಂದ ಸಿದ್ದತೆ ಜೊತೆ ಜೊತೆಯಲ್ಲೇ ಪ್ರಮುಖ ವೃತ್ತಗಳಲ್ಲಿರುವ ರಾಜರುಗಳ ಪ್ರತಿಮೆಗಳ ಮುಂದೆ ರಾಜರುಗಳ ಹೆಸರುಗಳಿರುವ ದೊಡ್ಡ ದೊಡ್ಡ ನಾಮಫಲಕಗಳನ್ನು ಅಳವಡಿಸಲಿ. ಆ ಮೂಲಕ ಮೈಸೂರಿನ ಮೆರುಗನ್ನು ಮತ್ತಷ್ಟು ಹೆಚ್ಚಿಸುವಂತಾಗಲಿ.

–ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ ತಾ.

ಆನ್‌ಲೈನ್ ಕೋರ್ಸ್ ವಿವಿಗಳಿಗೆ ವರದಾನ

ಮಾನ್ಯರೆ,

ಪ್ರಸ್ತುತ ಸನ್ನಿವೇಶದಲ್ಲಿ ವಿದ್ಯಾರ್ಜನೆಯ ಜೊತೆಗೆ ದುಡಿಮೆಯು ಮುಖ್ಯವಾಗಿದ್ದು, ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗಕ್ಕೆ ಬರುವ ಪ್ರತಿಯೊಬ್ಬರು ಆರ್ಥಿಕವಾಗಿ ಸಧೃಡರಾಗಿಲ್ಲದ ಕಾರಣ, ತರಗತಿಗಳಲ್ಲಿ ಕುಳಿತು ವ್ಯಾಸಂಗ ಮಾಡುವ ಬದಲು ದುಡಿದು ವ್ಯಾಸಂಗ ಮಾಡಲು ಆನ್‌ಲೈನ್ ಕೋರ್ಸ್‌ಗಳು ಯುವ ಜನಾಂಗಕ್ಕೆ ವರದಾನವಾಗಿದ್ದು, ಜೊತೆಗೆ ವಿಶ್ವವಿದ್ಯಾಲಯಗಳಿಗೆ ಹಣ ಕ್ರೋಢೀಕರಿಸಲು ಅನುವು ಮಾಡಿಕೊಡುತ್ತದೆ.

ಕಾಲದಿಂದ ಕಾಲಕ್ಕೆ ಕೇಂದ್ರ ಸರ್ಕಾರಗಳು ವಿಶ್ವವಿದ್ಯಾಲಯಗಳ ಆರ್ಥಿಕ ಸ್ಥಿತಿ ಉತ್ತಮ ಪಡಿಸಲು ಹಲವಾರು ಯೋಜನೆಗಳನ್ನು ಜಾರಿಗೆ ತಂದಿವೆ. ಇದರ ಒಂದು ಭಾಗವೇ ಆನ್‌ಲೈನ್ ಕೋರ್ಸ್‌ಗಳ ಪ್ರಾರಂಭ. ಸರ್ಕಾರದ ಅನುದಾನದ ಕೊರತೆ ವಿಶ್ವವಿದ್ಯಾಲಯಗಳ ಅಭಿವೃದ್ಧಿಗೆ ತೊಡಕಾಗಿರುವುದು ಇದಕ್ಕೆ ಮುಖ್ಯ ಕಾರಣ.

ಪ್ರಸ್ತುತ ಯುಜಿಸಿ ರಾಜ್ಯದ 9 ವಿಶ್ವವಿದ್ಯಾಲಯಗಳಿಗೆ ಆನ್‌ಲೈನ್ ಕೋರ್ಸ್ ಆರಂಭಿಸಲು ಅನುಮತಿ ನೀಡಿರುವುದು ಉತ್ತಮ ಬೆಳವಣಿಗೆಯಾಗಿದ್ದು, ವಿಶ್ವವಿದ್ಯಾಲಯ ಗಳು ಆರ್ಥಿಕವಾಗಿ ಸದೃಢವಾಗಲು ಅನುವು ಮಾಡಿಕೊಟ್ಟಂತಾಗುತ್ತದೆ. ಆನ್‌ಲೈನ್ ಕೋರ್ಸ್ ಆರಂಭಿಸಲು ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಪರಿಷತ್ (ನ್ಯಾಕ್) ಕೆಲವು ಮಾನದಂಡಗಳನ್ನು ವಿಧಿಸಿದ್ದು ಉದಾಹರಣೆಗೆ : ಉತ್ತಮ ರ್‍ಯಾಂಕ್ (ಸಿಜಿಪಿಯಲ್ಲಿ 3.6 ಅಂಕಗಳು), ಎನ್‌ಐಆರ್‌ಎಫ್ ರ್‍ಯಾಂಕ್‌ನಲ್ಲಿ 1–100 ರೊಳಗೆ ಮಾನ್ಯತೆ ಹೊಂದಿರುವ ವಿವಿಗಳಿಗೆ ಮಾತ್ರ ಆನ್‌ಲೈನ್ ಕೋರ್ಸ್ ಆರಂಭಿಸಲು ಅವಕಾಶವಿರುತ್ತದೆ. ಆನ್‌ಲೈನ್ ವ್ಯಾಸಂಗ ಈ ತಲೆಮಾರಿನ ಯುವಕರ ಬೇಡಿಕೆಯಾಗಿದ್ದು, ಕೊರೊನಾ ಇನ್ನೂ ಮುಂತಾದ ತುರ್ತು ಪರಿಸ್ಥಿತಿಯ ಸಮಯದಲ್ಲಿ ಆನ್‌ಲೈನ್ ಶಿಕ್ಷಣ ಸೂಕ್ತವಾಗಿರುತ್ತದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಆನ್‌ಲೈನ್ ಕೋರ್ಸ್‌ಗೆ ಪ್ರಾಮುಖ್ಯತೆ ನೀಡಲಾಗುತ್ತಿದೆ.

ಆನ್‌ಲೈನ್ ಶಿಕ್ಷಣ ಪಡೆಯುವವರು 21 ವರ್ಷದವರಾಗಿದ್ದು, ದುಡಿಯುವ ವರ್ಗದವರಾಗಿರುತ್ತಾರೆ. ಆನ್‌ಲೈನ್ ಶಿಕ್ಷಣದಿಂದ ದುಡಿಮೆಯ ಜೊತೆಗೆ ಹಣದ ಸಂಪಾದನೆಯು ಆಗುವ ಕಾರಣ ದೇಶದ ಅರ್ಥಿಕತೆಯ ಬೆಳವಣಿಗೆಯ ಜೊತೆಗೆ ವಿಶ್ವವಿದ್ಯಾಲಯಗಳ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿರುತ್ತದೆ.

–ರಾಸುಮ ಭಟ್, ಚಿಕ್ಕಮಗಳೂರು.

ಮಕ್ಕಳ ದಸರಾ ರಜೆಯ ಮಜಾ ಹೀಗಿರಲಿ!

ಮಾನ್ಯರೆ,

ಈ ಬಾರಿಯ 2023–24ರ ಶೈಕ್ಷಣಿಕ ವರ್ಷದಲ್ಲಿ ಸರ್ಕಾರ ಹದಿನೇಳು ದಿನಗಳ ದಸರಾ ರಜೆಯನ್ನು ಮಕ್ಕಳಿಗೆ ನೀಡಿದೆ. ಶಾಲೆಯಲ್ಲಿ ಮಕ್ಕಳು ಇದ್ದಾಗ ಶಾಲಾ ಪಠ್ಯ ವಿಷಯಕ್ಕೆ ಸಂಬಂಧಪಟ್ಟಂತೆ ಮಕ್ಕಳ ನಿರಂತರ ಕಲಿಕೆ ಇದ್ದೇ ಇರುತ್ತದೆ. ಆದರೆ ದಸರಾ ರಜೆಯ ಮಜಾವನ್ನು ಮಕ್ಕಳು ಅರ್ಥಪೂರ್ಣವಾಗಿ ಆಚರಿಸದೆ ಇದ್ದರೆ ಹೇಗೆ?

ಇಂದಿನ ಆಧುನಿಕ ಯುಗದಲ್ಲಿ ಮೊಬೈಲ್, ದೂರದರ್ಶನ ಹಾಗೂ ಕಂಪ್ಯೂಟರ್ ಗಳ ಹಾವಳಿ ಪ್ರತಿ ಮನೆ ಮನಗಳನ್ನು ಆವರಿಸಿದೆ. ಮಕ್ಕಳು ರಜಾ ಅವಧಿಯಲ್ಲಿ ಇವುಗಳ ಮುಂದೆ ಕೂತು ಗೇಮ್‌ಗಳನ್ನು ಆಡುತ್ತಾ ಮತ್ತಷ್ಟು ಮಾನಸಿಕ ಒತ್ತಡಕ್ಕೆ ಸಿಲುಕುತ್ತಿದ್ದಾರೆ. ಇದು ತಪ್ಪಬೇಕು. ರಜಾ ಅವಧಿಯಲ್ಲಿ ಮಕ್ಕಳಿಗೆ ಒಳಾಂಗಣ ಕ್ರೀಡೆಗಳಿಗಿಂತ ಹೊರಾಂಗಣ ಕ್ರೀಡೆಗಳಿಗೆ ಹೆಚ್ಚಿನ ಒತ್ತನ್ನು ನೀಡಬೇಕು. ಗಾಳಿಪಟ ಹಾರಿಸುವುದು, ಗೋಲಿ, ಗಜಗ ಆಡುವುದು, ಚಿನ್ನಿದಾಂಡು, ಸಂಬಂಧಿಕರ ಊರು ಗಳಿಗೆ ಸುತ್ತಾಟ, ಅಜ್ಜ ಅಜ್ಜಿಯರಿಂದ ಕಥೆ ಕಲಿಯುವುದು, ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವುದು, ಜಾತ್ರೆ ಹಾಗೂ ಉತ್ಸವಗಳಲ್ಲಿ ನಾಟಕವನ್ನು ನೋಡಿ ಸಂಭ್ರಮಿಸುವುದು... ಈ ರೀತಿಯ ಹತ್ತು ಹಲವು ಕಾರ್ಯ ಚಟುವಟಿಕೆಗಳಲ್ಲಿ ಮಕ್ಕಳು ರಜಾ ಅವಧಿಯಲ್ಲಿ ಭಾಗಿಯಾದರೆ ಎಷ್ಟೊಂದು ಚೆಂದ ಅಲ್ಲವೇ?

ಇದರಿಂದ ಮಕ್ಕಳು ಒತ್ತಡ ರಹಿತವಾಗಿ ಮೋಜಿನ ಜೊತೆ ರಜೆಯ ಮಜವನ್ನು ಅನುಭವಿಸಿದಂತಾಗುತ್ತದೆ. ಮಕ್ಕಳ ಚಿಂತನಾಲಹರಿ ಬದಲಾಗಿ ಅವರ ಜ್ಞಾನ ಯೋಜನೆಯು ಮತ್ತಷ್ಟು ವಿಸ್ತಾರವಾಗುತ್ತದೆ. ಸ್ನೇಹ ಬಾಂಧವ್ಯ ಹೆಚ್ಚಾಗಿ ಮಕ್ಕಳ ಏಕಾಂಗಿತನ ದೂರವಾಗುತ್ತದೆ. ಇಷ್ಟೇ ಅಲ್ಲದೆ ಕೂಡು ಕುಟುಂಬದ ಜೊತೆ ಅನೇಕ ಸಂಬಂಧಿಕರ ಊರುಗಳಿಗೆ ಹೋಗುವುದರ ಪರಿಣಾಮ ವಿವಿಧ ಸ್ಥಳಗಳ ಪರಿಚಯ ಹಾಗೂ ವಿವಿಧ ಕುಟುಂಬಗಳ ಆರ್ಥಿಕ ಸ್ಥಿತಿಗತಿಗಳು ಮತ್ತು ಬದುಕಿನ ವೃತ್ತಿಗಳ ಅರಿವು ಮಕ್ಕಳಿಗೆ ಸಿಕ್ಕಂತಾಗುತ್ತದೆ. ಈ ರೀತಿ ರಜಾ ಅವಧಿಯಲ್ಲಿ ಮಕ್ಕಳ ಮನಸ್ಸನ್ನು ಪ್ರಫುಲ್ಲಿತಗೊಳಿಸಲು ಪ್ರತಿಯೊಬ್ಬ ಪೋಷಕರು ಮುಂದಾಗಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಭುವನದ ಭಾಗ್ಯ ಬಸವೇಶ್ವರ



ಹನ್ನೆರಡನೆಯ ಶತಮಾನದ ಮಧ್ಯಭಾಗ, ಅದಾಗಲೆ ಭಗವಾನ್ ಬುದ್ಧ ಆಗಿ ಹೋಗಿ ಹದಿನೆಂಟು ಶತಮಾನಗಳು ಕಳೆದು ಹೋಗಿದ್ದವು. ಈ ನಡುವೆ ಹಲವಾರು ದಾರ್ಶನಿಕರು, ಸಂತರು, ಸಾಧಕರು, ಸಿದ್ಧರು, ಪವಾಡ ಪುರುಷರು, ಆಚಾರ್ಯರು, ಪ್ರವಾದಿಗಳು ಬಂದು ಹೋಗಿ ತಮ್ಮದೇ ಆದ ತತ್ವಾದರ್ಶಗಳಿಂದ ಜಗವನ್ನು ಬೆಳಗಿದ್ದರು. ಕತ್ತಲೆಯ ಕೂಪದಲ್ಲಿದ್ದ ಜಗದ ಜನಕೆ ತಮ್ಮ ತೋರುಬೆರಳಿನಿಂದ ಬೆಳಕಿನ ಪಥ ಕಾಣುವಂತೆ ಮಾಡಿದ್ದರು. ಕರುಣೆಯ ಕಡಲಾಗಿ ಬಂದು ಬುದ್ಧ ಮನುಷ್ಯತ್ವದ ಮಹಾನದಿ ಹರಿಸಿದ್ದ. ಜ್ಞಾನದ ಶಿಖರವಾಗಿ ಶಂಕರಾಚಾರ್ಯರು ಬಂದು ಆತ್ಮ ಜ್ಞಾನದ ಮಹದಾನಂದವನ್ನು ತುಂಬಿ ತುಳುಕಿಸಿದ್ದರು. ಶಾಂತಿ ದೂತ ಯೇಸುಕ್ರಿಸ್ತ ಬಂದು ಶಾಂತಿ ಮಂತ್ರವನ್ನು, ಪ್ರೇಮ ತತ್ವವನ್ನು ಸಾರಿ ಹೋಗಿದ್ದ. ಮಹಮ್ಮದ, ಮಹಾವೀರ.... ಹೀಗೆ ಅನೇಕ ಮಂದಿ ಮಹಾಪುರುಷರು ಬಂದು ತಮ್ಮ ಸಂದೇಶಗಳನ್ನು ಪ್ರಪಂಚಕ್ಕೆ ಸಾರಿ ಹೋಗಿದ್ದರು.

ಆದರೂ ಅರ್ಥಹೀನ ಸಂಪ್ರದಾಯದಿಂದ, ಮೌಢ್ಯದ ಕೂಪದಿಂದ, ಕಂದಾಚಾರದ ಕಟ್ಟಳೆಗಳಿಂದ ಜಡ್ಡುಗಟ್ಟಿದ್ದ ಜಗತ್ತು ಅಷ್ಟು ಸುಲಭವಾಗಿ ಜಾಗೃತಿಗೊಂಡಿರಲಿಲ್ಲ. ಇಂಥ ಸಂದರ್ಭದಲ್ಲಿ ಜಗತ್ತಿನ ಮಹಾಬೆಳಕಾಗಿ ಭಾರತ ದೇಶದ ಕರ್ನಾಟಕದ ಬಿಜಾಪುರ ಜಿಲ್ಲೆಯ ಬಾಗೇವಾಡಿಯ ಅಗ್ರಹಾರದಲ್ಲಿ "ಇವನಾರವ ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ..." ಎನ್ನುತ್ತಾ ಮಾನವತೆಯ ಮಹಾ ಪರ್ವವಾಗಿ ಜಗಜ್ಯೋತಿ ಬಸವೇಶ್ವರು ಮಾದರಸ ಮತ್ತು ಮಾದಲಾಂಬೆ ದಂಪತಿಗಳ ಸುಪುತ್ರರಾಗಿ ಅವತರಿಸಿದರು. ಅವರ ಅವತಾರವೆಂಬುದು ಸಾಮಾನ್ಯವಲ್ಲ. ವಚನ ಚಳವಳಿಯ ಅಸ್ತ್ರದಿಂದ ಬಸವ ಬೆಳಕು ಚೆಲ್ಲಿ ಮಾನವತೆಯ ಜ್ಯೋತಿ ಹಚ್ಚುವ ಪರಿ ಇದೆಯಲ್ಲ ಅದು ಇಂದಿಗೂ ವಿಶ್ವವ್ಯಾಪಿ ಇತಿಹಾಸವಾಗಿದೆ. ಅದಕ್ಕೇ ಅವರು 'ಜಗಜ್ಯೋತಿ' ಎನಿಸಿದ್ದು!

ಭಾರತ ದೇಶದಲ್ಲಿ ಅಷ್ಟೇ ಏಕೆ ಇಡೀ ವಿಶ್ವದಲ್ಲಿ ಹನ್ನೆರಡನೆಯ ಶತಮಾನ, ಅದೊಂದು ಮಹಾಕ್ರಾಂತಿ ಯುಗ. ಬಸವ ಬೆಳಕಿನ ಭಾಗ್ಯಯುಗ. ಕಾಯಕವೇ ಕೈಲಾಸವೆಂದು ಕಾಯಕಗಳಿಂದ, ಜ್ಞಾನ ದಾಸೋಹಗಳಿಂದ, ವಚನಸಾಹಿತ್ಯ ರಚನೆಗಳಿಂದ ಅರಿವಿನ ರಥ ಚಲಿಸಿದ ಶರಣ–ಶರಣೆಯರ ಯುಗ ವಿಶ್ವಕಲ್ಯಾಣಕ್ಕಾಗಿ ಸಕಲರಿಗೂ ಲೇಸನ್ನೇ ಬಯಸಿ ಭಾರತದ ಪ್ರಥಮ ಲೋಕಸಭೆ ಎಂದು ಕರೆಯಲ್ಪಟ್ಟ 'ಅನುಭವ ಮಂಟಪ' ರಚಿಸಿ ಎಲ್ಲಾ ವರ್ಗದ ಜನರು ಯಾವುದೇ ಹಿಂಜರಿಕೆಯಿಲ್ಲದೆ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮುಂತಾದ ವಿಚಾರಗಳನ್ನು ಮುಕ್ತವಾಗಿ ಚರ್ಚಿಸಿ, ಮನುಷ್ಯರನ್ನು ಮಹಾತ್ಮರನ್ನಾಗಿ ಮಾಡುವುದಕ್ಕಾಗಿ ಮಾನವತ್ವದ ತಳಹದಿಯ ಮೇಲೆ ಸೌಹಾರ್ದತೆಯ ಹೂವು ಅರಳುವಂತೆ ಮಾಡಿದ ಅಪೂರ್ವ ಯುಗ. ಇದೆಲ್ಲದರ ಕೇಂದ್ರ ಬಿಂದು ಯುಗಪುರುಷ ಬಸವೇಶ್ವರ.

ಆ ಕಾಲದಲ್ಲೇ ಪ್ರಜಾಸತ್ತಾತ್ಮಕ ತತ್ವಗಳ ಪ್ರತೀಕವಾದ 'ಅನುಭವ ಮಂಟಪ'ವನ್ನು ಸ್ಥಾಪಿಸುವುದರ ಮೂಲಕ ಪ್ರಜಾಪ್ರಭುತ್ವಕ್ಕೆ ನಾಂದಿಹಾಡಿದ ಮೊದಲಿಗರು ಬಸವೇಶ್ವರರು. ನಿಜ ಅರ್ಥದಿ ಶ್ರೇಷ್ಠ ಸಮಾಜ ಸುಧಾರಕರಿವರು. ಅನುಭವ ಮಂಟಪವೆಂಬುದು ಬಸವೇಶ್ವರರ ಮಹಾ ಪ್ರಯೋಗ ಶಾಲೆ. ಸಮಾಜದ ಸುಭದ್ರತೆ, ಸಮಾಜದ ಹಿತಚಿಂತನೆ, ಸಮುದಾಯದ ಸಂರಕ್ಷಣೆ, ಧರ್ಮದ ನಂಬಿಕೆ, ಮೌಲ್ಯ ಸಿದ್ಧಾಂತಗಳ, ವಿಚಾರ ವಿನಿಮಯಗಳ, ಚಿಂತನ– ಮಂಥನ ಚರ್ಚೆಗಳ ಸಂಗಮವಿದು. ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಕ ಚಟುವಟಿಕೆಗಳ ವೇದಿಕೆ ಯೂ ಆಗಿದ್ದ ಬಸವೇಶ್ವರರ 'ಅನುಭವ ಮಂಟಪ'ದಲ್ಲಿ ವಚನ ಕ್ರಾಂತಿಯೇ ನಡೆದು ಬಹಳಷ್ಟು ಮಂದಿ ಶರಣ–ಶರಣೆಯರು ವಚನಕಾರರಾಗಲು ಸ್ಫೂರ್ತಿಯ ತಾಣ ಇದಾಗಿತ್ತು ಸಿದ್ಧರಾಮ, ಮಡಿವಾಳ ಮಾಚಿದೇವ, ಡೋಹರ ಕಕ್ಕಯ್ಯ, ಮಾದಾರ ಚನ್ನಯ್ಯ, ಹಡಪದ ಅಪ್ಪಣ್ಣ, ಅಲ್ಲಮ ಪ್ರಭು, ಹರಳಯ್ಯ, ಅಕ್ಕಮಹಾ ದೇವಿ, ಕಾಳವ್ವ ನೀಲಾಂಬಿಕೆ, ನಾಗಲಾಂಬಿಕೆ, ಗೊಗ್ಗವ್ವ, ಕದಿರೆ ರಮ್ಮವ್ವ ರಾಯಮ್ಮ, ಮುಕ್ತಾಯಕ್ಕ, ಕಲ್ಯಾಣಿಯಮ್ಮ, ಬೊಂತಾದೇವಿ, ಗಂಗಾಂಬಿಕೆ, ಲಕ್ಷಮ್ಮ... ಹೀಗೆ ಇನ್ನೂ ಮುಂತಾದ ಶರಣ–ಶರಣೆಯರದಂಡೇ ಅಲ್ಲಿ ಸಂಗಮಿಸಿತ್ತು. ಬಸವೇಶ್ವರರಂತೂ ವಚನ ಸಾಹಿತ್ಯದ ಹರಿಕಾರರಾಗಿ ತಮ್ಮ ಸದ್ಭಾವನಾ ಲೇಖನಿ ಯನ್ನು ಹರಿಯಬಿಟ್ಟು ವಚನಗಳ ಶಿಖರವನ್ನು ನಿರ್ಮಿಸಿದ್ದರು. ಬಸವೇಶ್ವರರ ವಚನಗಳೆಂದರೆ ಅದೊಂದು ಅದ್ಭುತ ಕಾವ್ಯ. ಆಡು ಭಾಷೆಯಲ್ಲೇ ವಚನ ಕಾವ್ಯಕಟ್ಟಿದ ಶಬ್ಧಗಾರುಡಿಗರವರು.

ಹೊನ್ನಿನೊಳಗೊಂದೊರೆಯ
ಸೀರೆಯೊಳಗೊಂದೆಳೆಯ
"ಅನ್ನದೊಳಗೊಂದಗಳ
ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ
ನಿಮ್ಮಾಣೆ, ನಿಮ್ಮ ಪುರಾತರಾಣೆ
ನಿಮ್ಮ ಶರಣ (ಸಮಾಜ)ರಿಗಲ್ಲದೆ
ಮತ್ತೊಂದಕ್ಕೆ ಈಯೆನು
ಕೂಡಲಸಂಗಮದೇವ ನಿಮ್ಮಾಣೆ!'

ಬಿಜ್ಜಳ ಮಹಾರಾಜನಲ್ಲಿ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಪರಮಾತ್ಮನ ಆಣೆಯಾಗಿ ಬಸವೇಶ್ವರರು ಅಂದು ನುಡಿದ ಈ ವಚನ ಇಂದಿಗೂ ಮಾದರಿಯಾಗಿದೆ. ಪ್ರಜೆಗಳ ಸಂಪತ್ತು ಪ್ರಜೆಗಳ ಕಲ್ಯಾಣಕ್ಕಾಗಿಯೇ ವಿನಿಯೋಗವಾಗಬೇಕೇ ಹೊರತು ದುರುಪಯೋಗ ಆಗಬಾರದೆಂದು ಆಗಲೇ ಅವರು ಎಚ್ಚರಿಸಿದ್ದರು. ವ್ಯಕ್ತಿಗಿಂತ ಸಮಾಜ ದೊಡ್ಡದೆಂದೂ, ಸ್ವಾರ್ಥವನ್ನು ಬಿಟ್ಟು ಸೇವಕನಂತೆ ಸಮಾಜದ ಅಭಿವೃದ್ಧಿಗಾಗಿ ಕೆಲಸ ಮಾಡಬೇಕೆಂದು ಪ್ರಜಾಪ್ರತಿನಿಧಿಗಳಿಗೆ ಅಂದೇ ಅವರು ನೀತಿ ಹೇಳಿದ್ದರು. ಅವರ ಮತ್ತೊಂದು ವಚನದ ಸ್ವಾರಸ್ಯ ನೋಡಿ–

"ಧರಣಿಯ ಮೇಲೊಂದು
ಹಿರಿದಪ್ಪ ಅಂಗಡಿಯನಿಕ್ಕಿ
ಹರದಕುಳ್ಳಿರ್ದ ನಮ್ಮ ಮಹದೇವಸೆಟ್ಟಿ
ಒಮ್ಮತವಾದರೆ ಒಡನೆ ನುಡಿವನು
ಇಮ್ಮನವಾದಡೆ ನುಡಿಯನು;ಕಾಣಿಯ ಸೋಲ
ಅರ್ಧಕಾಣಿಯ ಗೆಲ್ಲ;ಜಾಣ ನೋಡವ್ವಾ
ನಮ್ಮ ಕೂಡಲಸಂಗಮದೇವಾ."

ವ್ಯಾಪಾರದ ಪರಿಭಾಷೆಯಲ್ಲಿರುವ ಈ ವಚನ ಭಗವಂತ ಮತ್ತು ಭಕ್ತರ ಮಧ್ಯೆ ವ್ಯವಹಾರ ಹೇಗಿರಬೇಕೆಂದು ಹೇಳುತ್ತದೆ. ಮಹದೇವಸೆಟ್ಟಿಯೇ ಇಲ್ಲಿ ವ್ಯಾಪಾರಿ, ಈ ಧರಣಿಯೇ ಅವನ ಅಂಗಡಿ, ಕಿಂಚಿತ್ತೂ ಚೌಕಾಶಿಯಿರದ ವ್ಯಾಪಾರವಿಲ್ಲಿ, ಒಮ್ಮನ(ಒಂದೇ ಮನಸ್ಸು)ಕ್ಕುಂಟು ಬೆಲೆ, ಇಮ್ಮನ(ಎರಡು ಮನಸ್ಸು)ಕ್ಕಿಲ್ಲ ಅವಕಾಶ, ಮಹದೇವಸೆಟ್ಟಿ ತನಗೆ ಬರಬೇಕಾದ ಅರ್ಧಕಾಸನ್ನೂ ಬಿಡುವುದಿಲ್ಲ. ಹಾಗೆಯೇ ಒಂದು ಕಾಸನ್ನೂ ಹೆಚ್ಚು ಪಡೆಯುವುದಿಲ್ಲ. ಮೋಸ, ವಂಚನೆಗೆ ಈ ಅಂಗಡಿಯಲ್ಲಿ ಜಾಗವಿಲ್ಲ. ಈ ರೀತಿ ವ್ಯವಹಾರಿಕ ಜಗತ್ತಿನ ಕಾರ್ಯಗಳಿಗೆ ಸಮಾನಾಂತರವಾಗಿ ಪಾರಲೌಕಿಕ ಜಗತ್ತಿನ ನಿಯಮಗಳನ್ನು ಈ ವಚನ ಚಿತ್ರಿಸುತ್ತದೆ.

"ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ
ತರ್ಕದ ಬೆನ್ನ ಬಾರೆತ್ತುವೆ, ಆಗಮದ ಮೂಗ ಕೊಯ್ಯುವೆ
ನೋಡಯ್ಯ ಮಹಾದಾನಿ ಕೂಡಲ ಸಂಗಮದೇವ
ಮಾದಾರ ಚೆನ್ನಯ್ಯನ ಮನೆಯ ಮಗ ನಾನು"

ಹೀಗೆನ್ನುವ ಬಸವೇಶ್ವರರ ಇಂಥ ಅದೆಷ್ಟೋ ವಚನಗಳು ವೈಚಾರಿಕ ಪ್ರಜ್ಞೆಯಿಂದ ಕ್ರಾಂತಿಯ ಕಹಳೆಯನ್ನು ಮೊಳಗಿಸಿ ವಚನ ಚಳವಳಿಗೆ ಹೊಸಬೆಳಕು ನೀಡಿವೆ. ಇಲ್ಲಿ ಮನುಷ್ಯ ಮನುಷ್ಯನಾಗಿ ಬದುಕಲು ಬಿಡದ ಜಾತಿ ಎಂಬ ಭೂತದ ವಿರುದ್ಧ ಬಸವೇಶ್ವರರು ಸಿಡಿದು ನಿಲ್ಲುವುದನ್ನು ಕಾಣಬಹುದಾಗಿದೆ. ಬಸವೇಶ್ವರರ ಈ ವಚನವಂತೂ ಅಂಬೇಡ್ಕರರು ತಮ್ಮ ಕ್ರಾಂತಿಕಾರಿ ಕೃತಿ 'ಜಾತಿ ವಿನಾಶ'ದಲ್ಲಿ ಹೇಳಿರುವ ಜಾತಿ ಪದ್ಧತಿಯನ್ನು ನೀವು ದಮನ ಮಾಡಬೇಕಾದರೆ ಮೊದಲು ನೀವು ವೇದಗಳು ಮತ್ತು ಶಾಸ್ತ್ರಗಳಿಗೆ ಡೈನಾಮೇಟು ಹಾಕಬೇಕು ಎನ್ನುವ ಕ್ರಾಂತಿಕಾರಿ ಮಾತುಗಳನ್ನು ನೆನಪಿಸುತ್ತವೆ. ದಲಿತರ ಉದ್ಧಾರಕ್ಕೆಂದೇ ದಿಕ್ಷೆ ತೊಟ್ಟು ಮನುಸ್ಮೃತಿಯನ್ನು ಸಾರ್ವಜನಿಕವಾಗಿ ಸುಟ್ಟುಹಾಕಿದ ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಬಸವೇಶ್ವರರ ನಡುವೆ ಬಹಳಷ್ಟು ಸಾಮ್ಯಗಳುಂಟು. ಮುಖ್ಯವಾಗಿ ಇವರಿಬ್ಬರೂ ಅಸ್ಪೃಶ್ಯತೆಯ ವಿರುದ್ಧ ಹೋರಾಡಿದ ಧೀರೋದ್ಧಾತ ಚೇತನಗಳು. ಅಷ್ಟೇ ಅಲ್ಲ ಪರ್ಯಾಯ ಸಮಾಜವನ್ನೇ ಕಟ್ಟಿದವರು. ಅಸ್ಪೃಶ್ಯತೆಯ ನಾಶದಲ್ಲಿ ನಾಡಿನ ಉದ್ಧಾರವಿದೆ ಎಂದು ತಿಳಿದವರಲ್ಲಿ ಬಸವೇಶ್ವರರು ಮೊದಲಿಗರು. ಬಹುಶಃ ಅಂಬೇಡ್ಕರ್ ಏನಾದರೂ ಕರ್ನಾಟಕದಲ್ಲಿ ಜನಿಸಿದ್ದರೆ ಬಸವೇಶ್ವರರ ನಿಲುವನ್ನು ಒಪ್ಪಿ ಅವರ ವೀರಶೈವ ಧರ್ಮವನ್ನೇ ಒಪ್ಪಿಕೊಳ್ಳುತ್ತಿದ್ದರೇನೋ! ಏಕೆಂದರೆ "ಜಗತ್ತು ಸೃಷ್ಟಿಸಿದ ಶ್ರೇಷ್ಠತಮ ಮಹಾಪುರುಷರು ಬಸವೇಶ್ವರರು" ಎಂದು ಸ್ವತಃ ಅಂಬೇಡ್ಕರ್ ಅವರೇ ನುಡಿದಿದ್ದಾರೆ.

ತಾವು ಮೋಕ್ಷಾಪೇಕ್ಷಿ. ಆದುದರಿಂದ ಪುನಃ ಜನಿಸಲು ತಮಗೆ ಇಷ್ಟವಿಲ್ಲ. ಆದರೂ ತಮಗೆ ಪುನರ್ಜನ್ಮವೆಂಬುದಿದ್ದರೆ ಮುಂದಿನ ಜನ್ಮದಲ್ಲಿ ಅಸ್ಪೃಶ್ಯನಾಗಿ ಹುಟ್ಟಲಿಚ್ಛಿಸುತ್ತೇನೆ ಎಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಲವಾರು ಸಾರಿ ಘೋಷಿಸಿದ್ದಿದೆ. ಆದರೆ ಬಸವೇಶ್ವರರು ಇಂಥ ಯಾವುದೇ ಘೋಷಣೆಯನ್ನು ಮಾಡದೆಯೇ ಈ ಜನ್ಮದಲ್ಲಿಯೇ ಅಸ್ಪೃಶ್ಯರಾಗುತ್ತಾರೆ. ದಲಿತರಲ್ಲಿ ಆತ್ಮಪ್ರತ್ಯಯವನ್ನೂ, ನಂಬಿಕೆಯನ್ನೂ ಮೂಡಿಸಬೇಕಾದರೆ ತಾವೂ ದಲಿತರಾಗಬೇಕೆಂಬ ದೃಷ್ಟಿಯಿಂದವರು ದಲಿತರಾಗುತ್ತಾರೆ. ಇದಕ್ಕಾಗಿ ಅವರು ಗಾಂಧೀಜಿ ಬಯಸಿದಂತೆ ಮುಂದಿನ ಜನ್ಮದವರೆಗೂ ಕಾಯುವುದಿಲ್ಲ. ಹಾಗಾಗಿ ಈ ವಿಚಾರದಲ್ಲಿ ಬಸವಣ್ಣನವರು ಗಾಂಧಿಗಿಂತಲೂ ಎತ್ತರಕ್ಕೇರುತ್ತಾರೆ.

ಕೆಳಜಾತಿಯಲ್ಲಿ ಜನಿಸಿದ್ದಕ್ಕೆ ಅಪಮಾನದಿಂದ ನೊಂದುಕೊಳ್ಳುವುದು ಸಹಜ. ಆದರೆ ಬಸವೇಶ್ವರರು ಮೇಲ್ಜಾತಿ ಬ್ರಾಹ್ಮಣ ಕುಟುಂಬದಲ್ಲಿ ತಾವು ಹುಟ್ಟಿದ್ದಕ್ಕೆ ನೊಂದುಕೊಂಡು "ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ, ಆನು ಹಾರುವನೆಂದಡೆ ಕೂಡಲಸಂಗಯ್ಯ ನಗುವನಯ್ಯ" ಎನ್ನುತ್ತಾರೆ. ಇಷ್ಟು ಸಾಲದೆಂಬಂತೆ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, "ತಾನು ಮಾದಾರ ಚೆನ್ನಯ್ಯನ ಮಗ" ಎನ್ನುವವರೆಗೂ ಹೋಗುತ್ತಾರೆ.

"ಚೆನ್ನಯ್ಯನ ಮನೆಯ ದಾಸನ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರು ಹೊಲದಲ್ಲಿ ಬೆರಣಿಗೆ ಹೋಗಿ
ಸಂಗವ ಮಾಡಿದರು
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲ ಸಂಗಮದೇವ ಸಾಕ್ಷಿಯಾಗಿ"

ಹೀಗೆ ಹೇಳುವ ಧೈರ್ಯ ಬಸವೇಶ್ವರರಿಗಲ್ಲದೆ ಇನ್ನಾರಿಗೆ ಬಂದೀತು! ಏಕೆಂದರೆ ಜಾತಿ ನಿಷ್ಠ ಸಮಾಜದ ದೃಷ್ಟಿಯಲ್ಲಿ ಮಾದಾರ ಚೆನ್ನಯ್ಯ ಮತ್ತು ಕಕ್ಕಯ್ಯ ಅತ್ಯಂತ ಕೀಳು ಜಾತಿಯವರು. ಇಂಥವರ ಮನೆಯಲ್ಲಿ ಜೀತಕ್ಕಿರುವ ಜನರು ಇನ್ನೆಷ್ಟು ಹೀನ ಜಾತಿಯವರಿರಬೇಕೆಂದು ಯೋಚಿಸಿದಷ್ಟೂ ಬಸವೇಶ್ವರರ ಮನುಷ್ಯತ್ವದ ಮೇರುವ್ಯಕ್ತಿತ್ವ ಮಿರಮಿರನೆ ಮಿಂಚುತ್ತದೆ. ಜೀತದಾಳುಗಳ ಹಾದರಕ್ಕೆ ಹುಟ್ಟಿದವನು ನಾನೆಂದು ಹೇಳಿಕೊಳ್ಳುವ ಬಸವೇಶ್ವರರ ಮಾನವತೆಗೆ ಅವರೇ ಸಾಟಿ, ಮನುಷ್ಯತ್ವದಿಂದ ದೈವತ್ವಕ್ಕೇರಿರುವ ಪರಿಯಿದು.

ಮಹಾಮಾನವತಾವಾದಿ ಬಸವೇಶ್ವರರಿಗೆ ಮನುಷ್ಯರೆಲ್ಲರೂ ಒಂದೇ ಎಂಬ ಭಾವ ಅವರ ಜೀವ–ಜೀವನದಲ್ಲೆಲ್ಲಾ ತುಂಬಿ ಹೋಗಿತ್ತು. ಮೂಲತಃ ಬ್ರಾಹ್ಮಣ ಕುಟುಂಬದಿಂದ ಬಂದಿದ್ದರೂ ಬಾಲ್ಯಾವಸ್ಥೆಯಿಂದಲೂ ಅವರು ಜಾತಿ ವ್ಯವಸ್ಥೆಯನ್ನು ವಿರೋಧಿಸುತ್ತಿದ್ದರು. ಆದ್ದರಿಂದಲೇ ಅವರು ಯಾರಿಗೂ ಹೆದರದೆ ಧೈರ್ಯವಾಗಿ ತಮ್ಮ ಉಪನಯನವನ್ನು ಧಿಕ್ಕರಿಸಿದ್ದರು. ಇಡೀ ಸಮಾಜವನ್ನು ಮಾನವೀಯ ಗೊಳಿಸಲು ಬಸವೇಶ್ವರರು ಬದುಕಿನ ಅಗ್ನಿಗೆ ತಮ್ಮನ್ನು ತಾವು ಒಡ್ಡಿಕೊಂಡು ಒಂದು ರೀತಿ ಕರ್ಪೂರದಂತೆ ಉರಿದು ಜಗಕೆ ಬೆಳಕಾಗಿದ್ದರು. ದೀನ–ದಲಿತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಅವರ ದಲಿತ ಪರ ಹೋರಾಟ ಸಹ ಮಾನವೀಯಗೊಳಿಸುವ ಪ್ರಯತ್ನಕ್ಕೆ ಸಾಕ್ಷಿ. ದಲಿತರ ಅವಮಾನಿತ ಬದುಕಿನ ನೋವುಗಳನ್ನು ಅರಿಯಲು ಈ ಹೋರಾಟದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಅವರು ತಮ್ಮ ಮೂಲ ಜಾತಿಯನ್ನೇ ತೊರೆದು ದಲಿತರೊಳಗೊಂದಾದದ್ದು ಸಾಮಾನ್ಯ ವಿಷಯವಲ್ಲ. ಈ ದಿಸೆಯಲ್ಲಿ ಅವರದು ವಿಶ್ವದಲ್ಲೇ ಅಪ್ರತಿಮ ಚೇತನವೆನ್ನಬಹುದು.

ಇಂಥ ಮಾನವೀಯ ನೆಲೆಯಲ್ಲೇ ವೈಚಾರಿಕ ಪ್ರಭೆಯೊಡನೆ ಸಮಾಜ ಸುಧಾರಣಾ ಹಾದಿಯಲ್ಲಿ ವಚನ ಸಾಹಿತ್ಯ ಕೃಷಿಯನ್ನು ಸಮೃದ್ಧವಾಗಿ ಮಾಡಿರುವ ಬಸವೇಶ್ವರರ ವಚನಗಳು ಸರ್ವಕಾಲಕ್ಕೂ ಸರ್ವಶ್ರೇಷ್ಠ ವಚನಗಳಾಗಿಯೇ ಉಳಿದಿವೆ, ಇಂದಿಗೂ ಸಹ ಹನ್ನೆರಡನೇ ಶತಮಾನದಲ್ಲಿ ಸೃಷ್ಟಿಗೊಂಡ ಅವರ ವಚನಗಳನ್ನು ಓದುತ್ತಿದ್ದರೆ ಈಗಿನ ಸಂದರ್ಭವನ್ನೇ, ಇಂದಿನ ಬಿಕ್ಕಟ್ಟುಗಳನ್ನೇ ಬಸವೇಶ್ವರರು ಬಿಚ್ಚಿಡುತ್ತಿದ್ದಾರೆ ಎನಿಸುತ್ತದೆ. ಅಷ್ಟೇ ಅಲ್ಲ ಇಂದು ನಮ್ಮ ಸಮಾಜವನ್ನು ಕಾಡುತ್ತಿರುವ ಪ್ರಶ್ನೆಗಳಿಗೆಲ್ಲ ಖಂಡಿತವಾಗಿಯೂ ಬಸವೇಶ್ವರರಲ್ಲಿ ಉತ್ತರವನ್ನು ಕಾಣಬಹುದು.

"ಕಾರ್ತಿಕದ ಕತ್ತಲಲ್ಲಿ ಆಕಾಶ ದೀಪವಾಗಿ ನೀ ಬಂದೆ
ಬಟ್ಟೆಗೆಟ್ಟವರಿಗೊಂದು ದಿಕ್ಕಾಗಿ
ಎಂಟು ಶತಮಾನಗಳ ಹಿಂದೆ
ಅಗ್ನಿಖಡ್ಗವನಾಂತ ಓ ಆಧ್ಯಾತ್ಮ ಕ್ರಾಂತಿವೀರ
ದೇವ ದಂಪೆಯೊಂದು ಹೇ ಧೀರಾವತಾರ ಶ್ರೀ
ಬಸವೇಶ್ವರ!"

ಎಂದು ವಿಶ್ವಕವಿ, ರಸಋಷಿ ಕುವೆಂಪು ಅವರು ತಮ್ಮ ಬಸವಬೆಳಕು ಕವಿತೆಯಲ್ಲಿ ಬಸವೇಶ್ವರರ ಬಗ್ಗೆ ಬರೆಯುತ್ತಾ ಮುಂದುವರಿದು ಜಾತಿ ಪದ್ಧತಿಯ ಹೋಮ ಕೂಪಕ್ಕೆ ಬಿದ್ದು ವೈಧಿಕರ ಯಜ್ಞತಾಪಕ್ಕೆ ಬಲಿ ಹೋದ ದಲಿತ ಜೀವರನೆತ್ತಿ ಮತಿ ವಿಚಾರಕ್ಕೆ ಕಾಯಕದ ದಿವ್ಯತತ್ವದ ಸುಕ್ಷೇಮ ಧರ್ಮನಾಕಕ್ಕೆ ನಡೆಸಿದ ಮಹಾತ್ಮನೆ, ನಿನಗೆ ನಮೋ ನಮಃ! ಎಂದು ಶ್ರೀ ಬಸವೇಶ್ವರರಿಗೆ ನಮಿಸುತ್ತಾರೆ.



ಪ್ರೊ. ಎ.ವಿ.ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ.

ಸಾಧಕ ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿಗಳು

ಶ್ರೀ ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿ (ಲ.ನ.ಶಾಸ್ತ್ರಿ)ಯವರು ಸಾಹಿತ್ಯ ಲೋಕದಲ್ಲಿ ಲ.ನಾ. ಶಾಸ್ತ್ರೀ ಎಂದೇ ಚಿರಪರಿಚಿತರು. ಇವರು ಸಂಶೋಧಕರು, ಕವಿಗಳು ಮತ್ತು ಮಹಾಪುರುಷರ ಜೀವನ ಚರಿತ್ರೆಗಳನ್ನು ಬರೆಯುವುದರಲ್ಲಿ ಸಿದ್ಧಹಸ್ತರು. ಶಾಸ್ತ್ರಿಗಳು ಇತಿಹಾಸದಲ್ಲಿ ಕುತೂಹಲ ಹಾಗೂ ಹೆಚ್ಚಿನ ಆಸಕ್ತಿ ಹೊಂದಿದವರು. ಉತ್ತಮ ವಾಗ್ಮಿಗಳು, ಧಾರ್ಮಿಕ ಸ್ವಭಾವದವರು ಹಾಗೂ ಸಮರ್ಥ ಅನುವಾದಕರು. ಇವುಗಳಿಗಿಂತ ಮಿಗಿಲಾಗಿ ಶೃಂಗೇರಿಯ ಪರಮಭಕ್ತರು. ಇದರಿಂದ ಶಾಸ್ತ್ರಿಗಳ ರಚನೆಯಲ್ಲಿ ಶೃಂಗೇರಿ ಹಾಗೂ ಗುರುಪರಂಪರೆಯನ್ನು ಕುರಿತ ವಿಷಯಗಳಿಗೆ ಹೆಚ್ಚಿನ ಪ್ರಾಮುಖ್ಯ. ಶೃಂಗೇರಿಯಲ್ಲಿ ಶಂಕರ ನರಸಿಂಹ ಶಾಸ್ತ್ರಿಗಳ ಮಗ ಲ.ನ.ಶಾಸ್ತ್ರಿ ಜನಿಸಿದ್ದು 12.05.1929ರಲ್ಲಿ.

ಶಾಸ್ತ್ರಿಗಳಿಗೆ ಕವನಗಳನ್ನು ಬರೆಯುವ ಹವ್ಯಾಸ ಹೈಸ್ಕೂಲು ಸಮಯದಿಂದಲೂ ಇತ್ತು. ಅವರು ಹೈಸ್ಕೂಲಿನಲ್ಲಿದ್ದಾಗಲೇ ಮೈಸೂರಿನ 'ಆರ್ಯ' ಪತ್ರಿಕೆಯಲ್ಲಿ, ಇವರ ಮೊದಲ ಕವನ ಪ್ರಕಟವಾಯಿತು. ನಂತರ ಇವರ ಲೇಖನಗಳು ಕಥಾವಳಿ, ಜನಪ್ರಗತಿ, ಜೀವನ ಹಾಗೂ ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟಗೊಂಡವು. 1960ರಲ್ಲಿ ತ.ಸು.ಶಾಮರಾಯರಿಂದ ತ.ವೆಂ.ಸ್ಮಾರಕದಲ್ಲಿ ಪ್ರಕಟವಾದವು. ಖ್ಯಾತ ಕವಿಯ ಮುನ್ನುಡಿಯೊಂದಿಗೆ ಪೂರ್ವರಾಗ ಪ್ರಕಟವಾಯಿತು. ಅನಂತರ ಪ್ರಿಯದರ್ಶಿ ಹಾಗೂ ಕಿಸಾಗೋತಮಿಯನ್ನು ಶಾಸ್ತ್ರಿಗಳು ಪ್ರಕಟಿಸಿದರು. ಶಾಸ್ತ್ರಿಗಳಿಗೆ ಆರು ಮಕ್ಕಳು–ಚಂದ್ರಶೇಖರ, ಶಾರದಾದತ್ತ, ಸೀತಾದೇವಿ, ರಾಜೇಶ್ವರಿ, ಶ್ಯಾಮಲಾ ಮತ್ತು ಆರ್ಯಾಂಬಾ.

ಲ.ನ.ಶಾಸ್ತ್ರಿಗಳು ಅಂಚೆ ಇಲಾಖೆಯಲ್ಲಿ ಕಾರ್ಮಿಕ ನಾಯಕರಾಗಿ ಜನಪ್ರಿಯರಾಗಿದ್ದರು. ಮೇಲಧಿಕಾರಿಗಳ ಅಸಮಾಧಾನದಿಂದಾಗಿ ಶಾಸ್ತ್ರಿಗಳಿಗೆ ಮಲೆನಾಡಿನ ಕೊಪ್ಪಕ್ಕೆ ವರ್ಗವಾಯಿತು. ಇದಾದ ನಂತರ ಅವರ ಮೇಲೆ ಶೃಂಗೇರಿಯ ಪರಿಸರ ದೀರ್ಘ ಪರಿಣಾಮ ಬೀರಿತು.

ಶಾಸ್ತ್ರಿಗಳು ಬರೆದ ಜೀವನ ಚರಿತ್ರೆಗಳಲ್ಲಿ ಹೊಸ ಸಂಶೋಧನೆ ಕಾಣಬರುತ್ತದೆ. ಶಂಕರಾಚಾರ್ಯರ ಜೀವನ ಮತ್ತು ಸಾಧನೆಗಳನ್ನು ಧರೆಗಿಳಿದ ದಿವ್ಯತೇಜದಲ್ಲಿ ಅಥವಾ ಯುಗ ಪುರುಷ ಶ್ರೀ ವಿದ್ಯಾರಣ್ಯರಲ್ಲಿ ಇದನ್ನು ಗಮನಿಸಬಹುದು. ಶೃಂಗೇರಿಯ ಗುರುಪರಂಪರೆಗೆ ಸೇರಿದ ಶ್ರೀ ಇಮ್ಮಡಿ (ಎರಡನೆಯ) ಚಂದ್ರಶೇಖರ ಭಾರತಿ ಸ್ವಾಮಿಗಳನ್ನು ಕುರಿತು ಶಾಸ್ತ್ರಿಗಳು ಬರೆದಿರುವುದು ಒಂದು ಉತ್ತಮ ಸಂಶೋಧನಾ ಗ್ರಂಥವೇ ಆಗಿದೆ.

ಶಾಸ್ತ್ರಿಗಳು ಬರೆದ ಶೃಂಗೇರಿಯ ಜಗದ್ಗುರುಗಳು ಮಾತ್ರವಲ್ಲದೆ ಶ್ರೀ ರಾಮತೀರ್ಥರು, ಗುರುನಾನಕ್, ವೆಂಕಟಕೃಷ್ಣಯ್ಯ, ಋಷ್ಯ ಶೃಂಗರು, ಶ್ರೀ ರಮಣ ಮಹರ್ಷಿಗಳು, ಶ್ರೀ ಬ್ರಹ್ಮಚೈತನ್ಯರು, ಅಳಸಿಂಗ ಪೆರುಮಾಳ್, ಶ್ರೀ ಶ್ರದ್ಧಾನಂದರು, ದಯಾನಂದ ಸರಸ್ವತಿ ಮುಂತಾದವರ ಜೀವನ ಚರಿತ್ರೆಗಳು ಮುಖ್ಯವಾಗಿವೆ. 'ತುಂಗೆಯ ಮಡಿಲ ತಪಸ್ವಿ' ಓದಿದ ಒಬ್ಬರು ನರಸಿಂಹರಾಜ ಕಾಲೋನಿಯಲ್ಲಿ ಶಾಸ್ತ್ರಿಗಳಿಗೆ ಸಿಕ್ಕಿದರು. ಮಹನೀಯರೇ ನೀವು ಓದಿದ ಪುಸ್ತಕ ಬರೆದವನು ನಾನೇ ಸ್ವಾಮಿ ಎಂದು ಶಾಸ್ತ್ರಿಗಳು ಹೇಳಿದರು. ಆಗ ಆ ಮಹನೀಯರು ಭಾವುಕರಾಗಿ ಶಾಸ್ತ್ರಿಗಳ ಪಾದಗಳಿಗೆ ನಮಸ್ಕಾರ ಮಾಡಿದರು. ಆ ಮಹನೀಯರ ಹೆಸರು ಶ್ರೀಕಂಠಯ್ಯ.



ಮಡದಿ ಶ್ರೀಮತಿ ಲಕ್ಷ್ಮೀನರಸುರೊಡನೆ

ವಿವಾಹದ ಅರವತ್ತು ಸಂವತ್ಸರಗಳನ್ನು ಪೂರೈಸಿದ ಸವಿನೆನಪಿಗಾಗಿ ಇಂದು ಲ.ನ.ಶಾಸ್ತ್ರಿಯವರು ಒಂದು ಸಮಾರಂಭವನ್ನು ಏರ್ಪಡಿಸಿದ್ದಾರೆ. ಈ ಸಂದರ್ಭದಲ್ಲಿ ನಾಲ್ವರು ಸಾಧಕರಿಗೆ 'ವಿದ್ಯಾಶಂಕರ ಪ್ರಶಸ್ತಿ' ನೀಡುವ ಸತ್ಕಾರ್ಯವೂ ನಡೆಯುತ್ತಿದೆ.

ಶಾಸ್ತ್ರಿಗಳ ಮದುವೆ 1952 ರಲ್ಲಿ ನಡೆಯಿತು. ಲ.ನ.ಶಾಸ್ತ್ರಿಗಳ ಕುಟುಂಬದ ಸದಸ್ಯರೆಲ್ಲರೂ, ಶೃಂಗೇರಿಯ ಶಾರದಾಂಬೆಯ ಅನುಗ್ರಹಕ್ಕೆ ಪಾತ್ರರಾದವರು. ಶಾಸ್ತ್ರಿಗಳ ಧರ್ಮಪತ್ನಿ ಲಕ್ಷ್ಮೀನರಸಮ್ಮ ನವರು ತಮ್ಮ ಅಜ್ಜ ನಂಜನಗೂಡು ಶ್ರೀಕಂಠ ಶಾಸ್ತ್ರಿಗಳನ್ನು ಕುರಿತು ಒಂದು ಪುಸ್ತಕವನ್ನು ಬರೆದಿದ್ದಾರೆ. ಶಾಸ್ತ್ರಿಗಳ ಹಿರಿಯ ಮಗ ಡಾ. ಚಂದ್ರಶೇಖರ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಶಾಸ್ತ್ರಿಗಳ ಹಿರಿಯ ಮಗಳು ಶ್ರೀಮತಿ ಸೀತಾದೇವಿ 'ಕನ್ನಡ ಪ್ರಭ' ಪತ್ರಿಕೆಯಲ್ಲಿ ಬರೆಯುತ್ತಿದ್ದರು ಹಾಗೂ ಸಂಗೀತವನ್ನು ಬಲ್ಲವರಾಗಿದ್ದರು. **ಚಿ.ಅದಿತಿ ಹಾಗೂ ಭಾರತಿ ಸಾಹಿತ್ಯ ಮತ್ತು ಸಂಗೀತದಲ್ಲಿ ಆಸಕ್ತಿ ಇರುವವರು.** ಶಾಸ್ತ್ರಿಗಳ ಮೊಮ್ಮಗಳು ಭಾರತಿ ಈ ಟಿವಿಯ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದಲ್ಲಿ ಸುಶ್ರಾವ್ಯವಾಗಿ ಹಾಡಿದ್ದಾಳೆ.

ಲ.ನ.ಶಾಸ್ತ್ರಿಗಳು ಸದ್ದಿಲ್ಲದೆ, ಸಾಹಿತ್ಯ ಸೇವೆ ಮಾಡಿಕೊಂಡು ಬದುಕುತ್ತಿರುವವರು. ಅವರು ಪ್ರಶಸ್ತಿಗಳ ಹಿಂದೆ ಹೋದವರಲ್ಲ. ಇದಕ್ಕೆ ಅವರು ಸ್ಥಿತಪ್ರಜ್ಞ ಮನೋಭಾವವೇ ಕಾರಣ. ಆದರೆ ಶಾಸ್ತ್ರಿಗಳು ಬರೆದದ್ದನ್ನು ನೂರಾರು ಓದುಗರು ಗುರುತಿಸಿ ಗೌರವಿಸಿದ್ದಾರೆ. ಇವುಗಳೆಲ್ಲವುಗಳಿಗಿಂತಲೂ ಮುಖ್ಯವಾದುದ್ದೆಂದರೆ, ಇವುಗಳನ್ನು ಗಮನಿಸಿ ಶ್ರೀ ಶಾರದಾ ಪೀಠ ಪ್ರಶಸ್ತಿಯೊಡನೆ ಒಂದು ಲಕ್ಷ ರೂಪಾಯಿಗಳನ್ನು ನೀಡಿ ಶಾಸ್ತ್ರಿಗಳನ್ನು ಆಶೀರ್ವದಿಸಿದೆ. ಆದರೆ ಶಾಸ್ತ್ರಿಗಳು ಒಂದು ಲಕ್ಷ ರೂಪಾಯಿಯನ್ನು ತಮ್ಮ ಸ್ವಂತಕ್ಕೆ ಬಳಸಿಕೊಳ್ಳದೆ ಅದನ್ನು ಸಮಾಜಕ್ಕೆ ಸಮರ್ಪಿಸಿದ್ದಾರೆ.

ಶೃಂಗೇರಿ ಸಂಸ್ಥಾನವು ಡಾ. ಬಿ.ಜಿ. ಅವರ ಸಂಪಾದಕತ್ವದಲ್ಲಿ 'ಅಭಿಮಾನ' ಎಂಬ ಗ್ರಂಥವನ್ನು 2012ರಲ್ಲಿ ಪ್ರಕಟಿಸಿದ್ದು, ಈ ಗ್ರಂಥದಲ್ಲಿ ಲ.ನ.ಶಾಸ್ತ್ರಿಗಳ ಬದುಕು ಹಾಗೂ ಬರಹದ ವಿವರಗಳು ಚೆನ್ನಾಗಿ ಮೂಡಿಬಂದಿವೆ. ಸೇಡಿಯಾಪು ಕೃಷ್ಣಭಟ್ಟರ ದೃಷ್ಟಿಯಲ್ಲಿ ಶಾಸ್ತ್ರಿಗಳ ನಡೆ, ನುಡಿ, ಆಚಾರ, ವ್ಯವಹಾರ ಇವೆಲ್ಲ ಸಾತ್ವಿಕ ಮತ್ತು ಸ್ವಚ್ಛ, ಶಾಸ್ತ್ರಿಗಳಂತಹ ಗುಣವಂತರು ಅಲ್ಲೊಬ್ಬರೋ–ಇಲ್ಲೊಬ್ಬರೋ ಕಾಣಸಿಗುತ್ತಾರೆ.

ಕೃತಿಗಳು: ಪೂರ್ವರಾಗ– ಪ್ರಿಯದರ್ಶಿ–ಕಿಸಾಗೌತಮಿ. ಮಹಾತಪಸ್ವಿ ಶ್ರೀ ಚಂದ್ರಶೇಖರ ಭಾರತೀ ಸ್ವಾಮೀಜಿ, ಅರುಣಾಚಲ ಸಾನ್ನಿಧ್ಯದಲ್ಲಿ, ಶ್ರೀ ಶಾರದಾಂಬಾ, ನನ್ನ ಅಳಸಿಂಗ– ನಿನ್ನ ವಿವೇಕಾನಂದರು (ಪತ್ರ ಸಾಹಿತ್ಯ), ಗಾಯತ್ರಿ ಮಂತ್ರ, ಸಂತ ಶ್ರೀ ರಾಮಾನುಚಾಚಾರ್ಯರು, ಸ್ವಾಮಿ ರಾಮತೀರ್ಥರು, ಶ್ರೀ ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದರ ಅಳಸಿಂಗ ಪೆರುಮಾಳ್, ಗಾಯತ್ರೀ ಮಂತ್ರ ಶ್ರೀ ಚಂದ್ರಶೇಖರ ಅನುಗ್ರಹ ಪರಂಪರೆ. ಶಾಸ್ತ್ರಿಗಳು ಗುರುಶ್ರೀ ಅಭಿನವ ವಿದ್ಯಾತೀರ್ಥರನ್ನು ಕಂಡಂತೆ, ಪತ್ರ ತರಂಗಿಣಿ, ಆಚಾರ್ಯ ಶಂಕರರು ಮತ್ತು ಬೌದ್ಧಮತ, ವಿಜಯನಗರ ಸ್ಥಾಪಕ ಶ್ರೀ ವಿದ್ಯಾರಣ್ಯರು, ಶ್ರೀ ಸ್ವಾಮಿ ನಾರಾಯಣ, ಯೋಗಿರಾಜ ಶ್ರೀಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು, ಸಚ್ಚಿದಾನಂದ ನರಸಿಂಹ ಭಾರತೀ–ಶೃಂಗೇರಿ ಶಾರದಾ ಪೀಠ, ಜಾಗೃತಿಯ ಹರಿಕಾರ ವೆಂಕಟಕೃಷ್ಣಯ್ಯ, ನಂಜನಗೂಡು ಶ್ರೀಕಂಠ ಶಾಸ್ತ್ರಿಗಳು, ಅನುವಾದ ಸಂಭಾಷಣ ತರಂಗಿಣಿ, ನಮ್ಮ ಕರ್ತವ್ಯ, ಉಪದೇಶ ಮಂಜರಿ, ಶ್ರೀ ಸುಬ್ರಹ್ಮಣ್ಯಸ್ವಾಮಿ, ಜೀವನಧರ್ಮ ದೀಪಿಕೆ. ವಿದ್ಯಾರ್ಥಿಗಳಿಗಾಗಿ ಶ್ರೀ ಅರವಿಂದ ಮಹರ್ಷಿ, ಶ್ರೀ ವ್ಯಾಸಮಹರ್ಷಿ, ದೇವಮಾನವ ಶ್ರೀ ಕೃಷ್ಣ, ಗುರುನಾನಕ್, ರಾಷ್ಟ್ರ ಧರ್ಮ ಆಚಾರ್ಯ ಶಂಕರರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ನೆದರ್ಲೆಂಡ್ಸ್ ವಿರುದ್ಧ ಪಾಕ್‌ಗೆ ಭರ್ಜರಿ ಜಯ

ಹೈದರಾಬಾದ್, ಅ.6– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಪ್ರಾಬಲ್ಯಯುತ ಪ್ರದರ್ಶನ ನೀಡಿದ ಪಾಕಿಸ್ತಾನ ನೆದರ್ಲೆಂಡ್ಸ್ ವಿರುದ್ಧ 81 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಪಾಕಿಸ್ತಾನ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.

ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ 49 ಓವರ್‌ಗಳಿಲ್ಲಿ 286 ರನ್‌ಗೆ ಆಲೌಟಾಯಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಫಖರ್ ಜಮಾನ್ 12, ಇಮಾಮ್ ಉಲ್ ಹಕ್ 15 ಹಾಗೂ ನಾಯಕ ಬಾಬರ್ ಅಜಮ್ 5 ರನ್ ಗಳಿಸಿ ತಂಡದ ಮೊತ್ತ 38 ರನ್ ಆಗುವಾಗಲೇ ಪೆವಿಲಿಯನ್ ಸೇರಿದ್ದರು. ಈ ವೇಳೆ ಜೊತೆಯಾದ ವಿಕೆಟ್ ಕೀಪರ್ ಮೊಹಮದ್ ರಿಜ್ವಾನ್ ಹಾಗೂ ಸೌದ್ ಶಕೀಲ್ ಜೋಡಿ 4ನೇ ವಿಕೆಟ್‌ಗೆ 120 ರನ್ ಜೊತೆಯಾಟವಾಡಿ ಅಪಾಯದಲ್ಲಿದ್ದ ತಂಡವನ್ನು ಪಾರು ಮಾಡಿತ್ತು. ಪಾಕಿಸ್ತಾನ ತಂಡದ ಪರ ಮಧ್ಯಮ ಕ್ರಮಾಂಕದಲ್ಲಿ ಜವಾಬ್ದಾರಿಯುತವಾಗಿ ಬ್ಯಾಟ್ ಬೀಸಿದ ಮೊಹಮ್ಮದ್ ರಿಝ್ವಾನ್ ಹಾಗೂ ಸೌದ್ ಶಕೀಲ್ ಇಬ್ಬರೂ ತಲಾ ಅರ್ಧಶತಕಗಳನ್ನು ಸಿಡಿಸಿದರು. ಮೊಹಮದ್ ರಿಜ್ವಾನ್ 75 ಎಸೆತಗಳಲ್ಲಿ 68 ರನ್ ಸಿಡಿಸಿದರೆ, ಶಕೀಲ್ 52 ಎಸೆತಗಳಲ್ಲಿ 68 ರನ್ ಗಳಿಸಿದರು. ಆ ಮೂಲಕ ತಂಡದ ಮೊತ್ತವನ್ನು 150ರ ಗಡಿ ದಾಟಿಸುವಲ್ಲಿ ಯಶಸ್ವಿಯಾದರು. ನಂತರ ಬಂದ ಮೊಹಮ್ಮದ್ ನವಾಜ್ 39 ಹಾಗೂ ಶದಾಬ್ ಖಾನ್ 32 ರನ್ ಗಳಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಉಳಿದಂತೆ ಇಫ್ತಿಖಾರ್ ಅಹಮ್ಮದ್ 9, ಶಹೀನ್ ಅಫ್ರಿದಿ 13, ಹ್ಯಾರಿಸ್ ರೌಫ್ 16 ರನ್ ಗಳಿಸಿದರು. ನೆದರ್ಲೆಂಡ್ಸ್ ಪರ ಬಾಸ್ ಡೀ ಲೀಡೆ 4, ಆಕರ್ಮನ್ 2, ವ್ಯಾನ್ ಮೀಕರೆನ್, ವ್ಯಾನ್ ಬೀಕ್ ಹಾಗೂ ಆರ್ಯನ್ ದತ್ ತಲಾ ಒಂದೊಂದು ವಿಕೆಟ್ ಒಪ್ಪಿಸಿದರು.



ಪಾಕಿಸ್ತಾನ ನೀಡಿದ 287 ರನ್ ಗುರಿ ಬೆನ್ನತ್ತಿದ ನೆದರ್ಲೆಂಡ್ಸ್ ತಂಡದ ಮೊತ್ತ 50 ರನ್ ಆಗುವಷ್ಟರಲ್ಲಿ ಮ್ಯಾಕ್ಸ್ ಓಡೌಡ್ 5 ರನ್ ಹಾಗೂ 17 ರನ್ ಗಳಿಸಿದ್ದ ಕಾಲಿನ್ ಆಕರ್ಮನ್ ವಿಕೆಟ್ ಕಳೆದುಕೊಂಡಿತು. ಆದರೆ ಭಾರತೀಯ ಮೂಲದ ಆರಂಭಿಕ ಆಟಗಾರ ವಿಕ್ರಮ್‌ಜೀತ್ ಸಿಂಗ್ 67 ಎಸೆತಗಳಲ್ಲಿ 52ರನ್ ಗಳಿಸಿದರೇ, ಆಲ್ರೌಂಡರ್ ಬಾಸ್ ಡೆ ಲೀಡೆ 68 ಎಸೆತಗಳಲ್ಲಿ 67 ರನ್ ಗಳಿಸಿದರು. ಇವರಿಬ್ಬರೂ 3ನೇ ವಿಕೆಟ್‌ಗೆ ಅಮೂಲ್ಯ 70 ರನ್ ಬಾರಿಸಿ ಪಾಕಿಸ್ತಾನಕ್ಕೆ ಆಘಾತ ನೀಡುವ ಸೂಚನೆ ನೀಡಿದ್ದರು. ಆದರೆ ವಿಕ್ರಮ್‌ಜಿತ್ ಸಿಂಗ್ ವಿಕೆಟ್ ಒಪ್ಪಿಸಿದರು. ನಂತರ ಬಂದ ಬ್ಯಾಟ್ಸ್‌ಮನ್ ಗಳನ್ನು ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ಸಮಯ ಕಳೆಯಲು ಪಾಕ್ ಬೌಲರ್‌ಗಳು ಅವಕಾಶ ನೀಡಲಿಲ್ಲ. ಒಂದು ಹಂತದಲ್ಲಿ 2 ವಿಕೆಟ್‌ಗೆ 120 ರನ್ ಬಾರಿಸಿದ್ದ ನೆದರ್ಲೆಂಡ್ಸ್ ಮುಂದಿನ 85 ರನ್ ಬಾರಿಸುವ ವೇಳೆಗೆ ಉಳಿದ 8 ವಿಕೆಟ್‌ಗಳನ್ನು ಕಳೆದುಕೊಂಡು ಸೋಲು ಕಂಡಿತು. ಅಂತಿಮವಾಗಿ ನೆದರ್ ಲ್ಯಾಂಡ್ 41 ಓವರ್‌ಗಳಲ್ಲಿ 205 ರನ್‌ಗಳಿಗೆ ಆಲೌಟ್ ಆಯಿತು. ಪಾಕಿಸ್ತಾನದ ಪರ ಹ್ಯಾರಿಸ್ ರೌಫ್ 3, ಹಸನ್ ಅಲಿ 2, ಶಹೀನ್ ಷಾ ಅಫ್ರಿದಿ, ಇಫ್ತಿಕಾರ್ ಅಹ್ಮದ್, ಮೊಹಮದ್ ನವಾಜ್ ಹಾಗೂ ಶಾದಾಬ್ ಖಾನ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಪಾಕ್ ಪರ ಸೌದ್ ಶಕೀಲ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಹಾಕಿಯಲ್ಲಿ ಜಪಾನ್ ವಿರುದ್ಧ ಗೆದ್ದ ಭಾರತಕ್ಕೆ ಚಿನ್ನ
2024ರ ಪ್ಯಾರಿಸ್ ಒಲಂಪಿಕ್‌ಗೆ ಅರ್ಹತೆ ಪಡೆದ ಭಾರತ



ಹ್ಯಾಂಗ್‌ಝೌ, ಅ.6–ಚೀನಾದ ಹ್ಯಾಂಗ್‌ಝೌನಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್‌ನಲ್ಲಿ ಹರ್ಮನ್ ಪ್ರೀತ್ ಸಿಂಗ್ ನೇತೃತ್ವದ ಭಾರತ ಪುರುಷರ ಹಾಕಿ ತಂಡ ಏಷ್ಯನ್ ಗೇಮ್ಸ್ ಹಾಕಿ ಫೈನಲ್‌ನಲ್ಲಿ ಜಪಾನ್ ಎದುರು 5–1 ಅಂತರದ ಗೆಲುವು ಸಾಧಿಸುವ ಮೂಲಕ ಚಿನ್ನದ ಪದಕ ಜಯಿಸುವಲ್ಲಿ ಯಶಸ್ವಿಯಾಗಿದ್ದು, ಮುಂಬರುವ 2024ರಲ್ಲಿ ನಡೆಯುವ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವಲ್ಲಿ ಯಶಸ್ವಿಯಾಗಿದೆ.

ಭಾರತದ ಪರ ಮನ್‌ಪ್ರೀತ್ ಸಿಂಗ್, ಹರ್ಮನ್ ಪ್ರೀತ್ ಸಿಂಗ್, ಅಭಿಷೇಕ್ ಮತ್ತು ರೋಹಿದಾಸ್ ಅಮಿತ್ ಗೋಲು ಗಳಿಸುವ ಮೂಲಕ ಜಪಾನ್ ತಂಡವನ್ನು ಮಣಿಸುವಲ್ಲಿ ಪ್ರಮುಖ ಪಾತ್ರವಹಿಸಿದರು.

ಈ ಫೈನಲ್ ಪಂದ್ಯಕ್ಕೂ ಮುನ್ನ ನಡೆದ ಪೂಲ್ 'ಎ' ಪಂದ್ಯದಲ್ಲಿ ಜಪಾನ್ ತಂಡವನ್ನು 4–2 ಅಂತರದಿಂದ ಸೋಲಿಸಿದ್ದ ಭಾರತ, ಇದೀಗ ಫೈನಲ್‌ನಲ್ಲಿಯೂ ಅದೇ ರೀತಿಯ ಆಲ್‌ರೌಂಡರ್ ಪ್ರದರ್ಶನ ನೀಡಿದೆ. ಆ ಮೂಲಕ ಹಾಲಿ ಚಾಂಪಿಯನ್ ಜಪಾನ್ ಎದುರು ಆರಂಭದಿಂದಲೇ ಅದ್ಭುತ ಪ್ರದರ್ಶನ ತೋರಿದ ಹರ್ಮನ್‌ಪ್ರೀತ್ ಸಿಂಗ್ ಪಡೆ, ಎಲ್ಲಾ ಸವಾಲುಗಳನ್ನು ಮೆಟ್ಟಿನಿಂತು ಚಿನ್ನದ ಪದಕ ಜಯಿಸುವಲ್ಲಿ ಯಶಸ್ವಿಯಾಗಿದ್ದು, ಬರೋಬ್ಬರಿ 9 ವರ್ಷಗಳ ಬಳಿಕ ಏಷ್ಯನ್ ಗೇಮ್ಸ್‌ನಲ್ಲಿ ಭಾರತ ಪುರುಷರ ಹಾಕಿ ತಂಡ ಚಿನ್ನದ ಪದಕಕ್ಕೆ ಕೊರಳೊಡ್ಡಿದೆ. ಪಂದ್ಯದ ಮೊದಲಾರ್ಧದಲ್ಲಿ ಜಪಾನ್ ಅದ್ಭುತ ಹೋರಾಟ ನೀಡಿತು. ಹೀಗಾಗಿ ಭಾರತಕ್ಕೆ ಹೆಚ್ಚು ಗೋಲು ದಾಖಲಿಸಲು ಸಾಧ್ಯವಾಗಲಿಲ್ಲ. ಆದರೆ ದ್ವಿತೀಯಾರ್ಧದಲ್ಲಿ ನಿಜವಾದ ಆಟ ಪ್ರದರ್ಶಿಸಿದ ಭಾರತ ಹಾಕಿ ತಂಡ ಬರೋಬ್ಬರಿ ನಾಲ್ಕು ಗೋಲು ಬಾರಿಸುವುದರೊಂದಿಗೆ ಪಂದ್ಯದಲ್ಲಿ ಸಂಪೂರ್ಣ ಪ್ರಾಬಲ್ಯ ಸಾಧಿಸಿತು.

ಪಂದ್ಯದಲ್ಲಿ ಭಾರತದ ಪರ ಹರ್ಮನ್‌ಪ್ರೀತ್ ಸಿಂಗ್ (15ನೇ ನಿ), ಹರ್ಮನ್‌ಪ್ರೀತ್ ಸಿಂಗ್(32ನೇ ನಿ), ಅಮಿತ್ ರೋಹಿದಾಸ್(36ನೇ ನಿ), ಅಭಿಷೇಕ್ ಸಿಂಗ್(48ನೇ ನಿ) ಹಾಗೂ ಹರ್ಮನ್‌ಪ್ರೀತ್ ಸಿಂಗ್ (59) ಗೋಲು ಬಾರಿಸಿದರು. ನ್ನು ಜಪಾನ್ ಪರ ತನಕಾ ಸೆರೆನ್ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾದರು. ಈ ಗೆಲುವಿನೊಂದಿಗೆ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕಕ್ಕೆ ಮುತ್ತಿಕ್ಕಿದ್ದ ಭಾರತ ಪುರುಷರ ಹಾಕಿ ತಂಡ ಇದೀಗ ಪ್ಯಾರಿಸ್ ಒಲಿಂಪಿಕ್‌ಗೆ ನೇರ ಅರ್ಹತೆ ಪಡೆಯುವಲ್ಲಿ ಯಶಸ್ವಿಯಾಗಿದೆ.

ನಾಲ್ಕನೇ ಚಿನ್ನ: 1958ರಲ್ಲಿ ಭಾರತ ಮೊದಲ ಬಾರಿಗೆ ಏಷ್ಯನ್ ಗೇಮ್ಸ್ ಹಾಕಿಯಲ್ಲಿ ಚಿನ್ನ ಗೆದ್ದಿತ್ತು. ಆ ಬಳಿಕ ಪದಕಗಳ ಬರ ಎದುರಿಸಿದ್ದ ಭಾರತ ಹಾಕಿ ತಂಡ 2014 ರಲ್ಲಿ ಚಿನ್ನಕ್ಕೆ ಮುತ್ತಿಟ್ಟಿತ್ತು. ಇದೀಗ ಬರೋಬ್ಬರಿ 8 ವರ್ಷಗಳ ನಂತರ ಭಾರತದ ಮಡಿಲಿಗೆ ಮತ್ತೆ ಚಿನ್ನದ ಪದಕ ಒಲಿದು ಬಂದಿದೆ. ಈ ಮೂಲಕ ಏಷ್ಯನ್ ಗೇಮ್ಸ್ ಇತಿಹಾಸದಲ್ಲಿ ಭಾರತ ಹಾಕಿ ತಂಡ 4ನೇ ಚಿನ್ನವನ್ನು ತನ್ನದಾಗಿಸಿಕೊಂಡಿದೆ. ಹಾಕಿಯಲ್ಲಿ ಭಾರತ ಒಟ್ಟು 15 ಪದಕಗಳನ್ನು ಗೆದ್ದಿದ್ದು, ಇದರಲ್ಲಿ ನಾಲ್ಕು ಚಿನ್ನ, 9 ಬೆಳ್ಳಿ ಮತ್ತು 3 ಕಂಚಿನ ಪದಕಗಳು ಸೇರಿವೆ. ಇದು 2023ರ ಏಷ್ಯನ್ ಗೇಮ್ಸ್‌ನಲ್ಲಿ ಭಾರತಕ್ಕೆ 22 ನೇ ಚಿನ್ನದ ಪದಕವಾಗಿದೆ. ಹಿಂದೊಮ್ಮೆ ಭಾರತ ಹಾಕಿ ತಂಡ ಒಂದರ ಹಿಂದೆ ಒಂದರಂತೆ ಪದಕ ಗೆಲ್ಲುವ ಮೂಲಕ ಒಲಿಂಪಿಕ್ಸ್‌ನಲ್ಲಿ ಇತಿಹಾಸ ನಿರ್ಮಿಸಿತ್ತು. ಇದೀಗ ಏಷ್ಯನ್ ಗೇಮ್ಸ್‌ನಲ್ಲೂ ಅದೇ ಇತಿಹಾಸ ಮರುಕಳಿಸುವ ಎಲ್ಲಾ ಸಾಧ್ಯತೆಗಳಿವೆ.

ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ನವರಾತ್ರಿ ಬ್ರಹ್ಮೋತ್ಸವ

ಮೈಸೂರು, ಅ.6(ಬಿಎಲ್‌ಯು)– ಮೈಸೂರಿನ ವಿಜಯನಗರದ ಶ್ರೀ ಯೋಗಾನರಸಿಂಹ ಸ್ವಾಮಿ ದೇವ ಸ್ಥಾನದಲ್ಲಿ ಅ.14 ರಿಂದ 25 ರವರೆಗೆ ನವರಾತ್ರಿ ಬ್ರಹ್ಮೋತ್ಸವ ಜಾತ್ರಾ ಕಾರ್ಯಕ್ರಮ ನಡೆಯಲಿದೆ.

ಮಹಾಲಯ ಅಮಾವಾಸ್ಯೆ ದಿನವಾದ ಅ.14ರಂದು ಸಂಜೆ 7 ಗಂಟೆಗೆ ಯೋಗಾನರಸಿಂಹ ಸ್ವಾಮಿಗೆ ಅಭಿಷೇಕ ಸೇರಿದಂತೆ ವಿಶೇಷ ಪೂಜಾ ವಿಧಿ ವಿಧಾನಗಳ ಮೂಲಕ ನವ ರಾತ್ರಿ ಬ್ರಹ್ಮೋತ್ಸವ ಜಾತ್ರಾ ಕಾರ್ಯಕ್ರಮ ಆರಂಭಿಸಲಾಗುವುದು. ಅ.24ರವರೆಗೆ ಪ್ರತಿದಿನ ಸಾಂಪ್ರದಾಯಿಕ ವಿಶೇಷ ಪೂಜಾ ಕಾರ್ಯಗಳು ನೆರವೇರಲಿದೆ. ದೇವ ಸ್ಥಾನದ ಸಂಸ್ಥಾಪಕ ಪ್ರೊ.ಭಾಷ್ಯಂ ಸ್ವಾಮೀಜಿಯವರ ನೇತೃತ್ವ ದಲ್ಲಿ ಪೂಜಾ ಕಾರ್ಯಗಳು ನಡೆಯಲಿದೆ.

ಅ.24ರಂದು ಮಹಾ ಸುದರ್ಶನಯಾಗ ನಡೆಯಲಿದ್ದು, ಅಂದು ಮಧ್ಯಾಹ್ನ 12ಕ್ಕೆ ಪೂರ್ಣಾವತಿ ನೆರವೇರಲಿದೆ. ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ



ಅಕ್ರಮ ಸಂಬಂಧ ಹೊಂದಿರುವ ಮಹಿಳೆಗೆ ಪತಿ ಜೀವನಾಂಶ ನೀಡಲಾಗದು

ಹೈಕೋರ್ಟ್ ಮಹತ್ವದ ತೀರ್ಪು

ಬೆಂಗಳೂರು, ಅ.6– ವಿವಾಹವಾಗಿದ್ದರೂ, ಮತ್ತೊಬ್ಬರ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡು ಸಹಜೀವನ ನಡೆಸುತ್ತಿರುವ ಮಹಿಳೆಯು ಪತಿಯಿಂದ ಜೀವನಾಂಶ ನಿರೀಕ್ಷಿಸಲಾಗದು ಎಂದು ಹೈಕೋರ್ಟ್ ತಿಳಿಸಿದೆ. ಚಿಕ್ಕಮಗಳೂರು 2ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮಹಿಳೆಯೊಬ್ಬರು ಸಲ್ಲಿಸಿದ್ದ ಕ್ರಿಮಿನಲ್ ಪುನರ್‌ಪರಿಶೀಲನಾ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ರಾಜೇಂದ್ರ ಬಾದಾಮಿಕರ್ ಅವರಿದ್ದ ನ್ಯಾಯಪೀಠ ಈ ರೀತಿ ಅಭಿಪ್ರಾಯಪಟ್ಟಿದ್ದು, ಅರ್ಜಿ ವಜಾಗೊಳಿಸಿತು.

ಅರ್ಜಿದಾರರು ಅಕ್ರಮ ಸಂಬಂಧ ಹೊಂದಿದ್ದು, ಪ್ರಾಮಾಣಿಕರಲ್ಲದಿದ್ದಾಗ ಪತಿಯಿಂದ ಜೀವನಾಂಶ ನೀಡಬೇಕು ಎಂಬ ವಾದ ಒಪ್ಪಿಕೊಳ್ಳುವುದಿಲ್ಲ. ಪತಿಯ ಕಡೆಯಿಂದ ಯಾವುದೇ ನಿರೀಕ್ಷೆ ಮಾಡಬಾರದು ಎಂದು ಪೀಠ ತಿಳಿಸಿದೆ.

ಅರ್ಜಿದಾರರು ಮತ್ತೊಬ್ಬ ವ್ಯಕ್ತಿಯೊಂದಿಗೆ ಓಡಿಹೋಗಿರುವ ಸಂಬಂಧ ದೂರು ದಾಖಲಾಗಿದ್ದು, ತನಿಖೆ ವೇಳೆ ಆಪ್ತನೊಂದಿಗೆ ನೆಲೆಸಲು ಇಚ್ಛಿಸುತ್ತಿದ್ದಾರೆ ಎಂಬುದಾಗಿ ಪೊಲೀಸರು ತಿಳಿಸಿದ್ದಾರೆ. ಇದೇ ಆಧಾರದಲ್ಲಿ ವಿಚ್ಛೇದನವೂ ಮಂಜೂರಾಗಿದೆ. ಈ ಪ್ರಕ್ರಿಯೆಯನ್ನು ಪ್ರಶ್ನಿಸಿಲ್ಲ. ಪತ್ನಿಗೆ ವರದಕ್ಷಿಣೆ ಕಿರುಕುಳ ನೀಡಿಲ್ಲ. ಈ ಸಂಬಂಧ ಹಿಂದೊಮ್ಮೆ ರಾಜೀ ಪಂಚಾಯತಿ ನಡೆಸಿದ ಬಳಿಕ ಗಂಡನ ಮನೆಗೆ ಕಳುಹಿಸಲಾಗಿತ್ತು. ಆದರೂ, ಅವರು ಗಂಡನನ್ನು ಬಿಟ್ಟು ಮತ್ತೊಬ್ಬ ವ್ಯಕ್ತಿಯೊಂದಿಗೆ ಸಹಜೀವನ ನಡೆಸುತ್ತಿದ್ದಾರೆ ಎಂಬುದಾಗಿ ಆಕೆಯ (ಅರ್ಜಿದಾರಳ) ಸಹೋದರ ತಿಳಿಸಿದ್ದಾರೆ.

ಅರ್ಜಿದಾರರನ್ನು ಪಾಟಿ ಸವಾಲಿಗೆ ಒಳಪಡಿಸಿದಾಗ ಜೀವನ ನಡೆಸುವುದಕ್ಕಾಗಿ ಯಾವುದೇ ಆದಾಯದ ಮೂಲಗಳಿಲ್ಲ ಎಂಬುದಾಗಿ ತಿಳಿಸಿದ್ದಾರೆ. ಆದರೆ, ಸಾಕ್ಷಿಗಳ ಪ್ರಕಾರ ಮತ್ತೊಬ್ಬ ವ್ಯಕ್ತಿಯೊಂದಿಗೆ ನೆಲೆಸಿದ್ದು, ಅವರೇ ಜೀವನ ನೋಡಿಕೊಳ್ಳುತ್ತಿದ್ದಾರೆ. ಎಲ್ಲ ಸಂದರ್ಭಗಳಲ್ಲಿಯೂ ಅವನೊಟ್ಟಿಗೆ ಇರುತ್ತಿರುವ ಅಂಶ ಸಾಕ್ಷ್ಯಾಧಾರಗಳಿಂದ ತಿಳಿದುಬಂದಿದೆ. ಆದ ಕಾರಣ ಅರ್ಜಿದಾರರಿಗೆ ಪರಿಹಾರ ನೀಡಲಾಗದು ಎಂದು ಪೀಠ ಹೇಳಿದೆ.

ಅರ್ಜಿದಾರರ ಮನವಿಯನ್ನು ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಸೂಕ್ತ ರೀತಿಯಲ್ಲಿ ಪರಿಶೀಲನೆ ನಡೆಸದೆ ಜೀವನಾಂಶ ನೀಡಲು ನಿರ್ದೇಶನ ನೀಡಿದೆ. ಆದರೆ, ಸೆಷನ್ಸ್ ನ್ಯಾಯಾಲಯ ಎಲ್ಲ ಸಾಕ್ಷ್ಯಾಧಾರಗಳನ್ನು ಪರಿಗಣಿಸಿಯೇ ಹೀಗೆ ಆದೇಶಿಸಿದೆ. ಇದರಲ್ಲಿ ಮಧ್ಯಪ್ರವೇಶ ಮಾಡುವ ಅಗತ್ಯವಿಲ್ಲ ಎಂದು ತಿಳಿಸಿದ ನ್ಯಾಯಪೀಠ ಪುನರ್‌ಪರಿಶೀಲನಾ ಅರ್ಜಿ ವಜಾಗೊಳಿಸಿತು.



ಮೈಸೂರಿನ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದಿಂದ ಸ್ವಾತಂತ್ರ್ಯ ಹೋರಾಟಗಾರರಾದ ತಾಡಿಯೂರು ರಾಮಚಂದ್ರರಾಯರ 92ನೇ ಜನ್ಮ ದಿನವನ್ನು ಚಾಮುಂಡಿಪುರಂ ವೃತ್ತದಲ್ಲಿರುವ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಆಚರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ವಿಶ್ವನಾಥಯ್ಯ, ನಗರ ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಸಂಘದ ಸದಸ್ಯರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಮಂಡ್ಯದಲ್ಲಿ ಕಾವೇರಿಗಾಗಿ ಮುಂದುವರೆದ ಹೋರಾಟ

ಪತ್ರಕರ್ತರು ಸೇರಿ ಹಲವು ಸಂಘಟನೆಗಳು ಸಾಥ್



ಮಂಡ್ಯ, ಅ.6– ಕಾವೇರಿ ನೀರು ಹಂಚಿಕೆಯಲ್ಲಿ ರಾಜ್ಯಕ್ಕೆ ನಿರಂತರ ಅನ್ಯಾಯವಾಗುತ್ತಿರುವುದನ್ನು ಖಂಡಿಸಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಗರದ ಸರ್‌ಎಂವಿ ಪ್ರತಿಮೆ ಮುಂಭಾಗ ನಡೆಸುತ್ತಿರುವ ಹೋರಾಟಕ್ಕೆ ಶುಕ್ರವಾರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಸೇರಿದಂತೆ ಹಲವು ಸಂಘಟನೆಗಳು ಬೆಂಬಲ ನೀಡಿ ಬೃಹತ್ ಪ್ರತಿಭಟನೆ, ರಸ್ತೆ ತಡೆ ನಡೆಸಿದರು.

ಪತ್ರಕರ್ತರ ಸಂಘ ಸಾಥ್: ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಆಶ್ರಯದಲ್ಲಿ ನಗರದ ಪತ್ರಿಕಾ ಭವನದಿಂದ ಮೆರವಣಿಗೆ ಹೊರಟ ಪತ್ರಕರ್ತರು ಕೇಂದ್ರ, ರಾಜ್ಯ ಸರ್ಕಾರ, ಕಾವೇರಿ ನದಿ ನೀರು ಪ್ರಾಧಿಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿ, ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಧರಣಿಯಲ್ಲಿ ಭಾಗಿಯಾಗಿ ಕಾವೇರಿ ಹೋರಾಟ ಬೆಂಬಲಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯದರ್ಶಿ ಮತ್ತಿಕೆರೆ ಜಯರಾಮ್ ಮಾತನಾಡಿ, ಕಾವೇರಿ ವಿಚಾರದಲ್ಲಿ ಹಲವು ದಶಕಗಳಿಂದ ಕರ್ನಾಟಕಕ್ಕೆ ಅನ್ಯಾಯ ಆಗುತ್ತಲೇ ಇದೆ. ತಮಿಳುನಾಡಿಗೆ ಪೂರಕ ತೀರ್ಪು ಬರುತ್ತಿದ್ದು ಕನ್ನಡಿಗರಿಗೆ ಮಾರಕವಾಗುತ್ತಿದೆ. ನೀರು ಹಂಚಿಕೆ ಮಾಡಿರುವ ತೀರ್ಪುಗಳು ಸಂಕಷ್ಟ ಕಾಲದಲ್ಲಿ ಅನುಸರಿಸಬೇಕಾದ ಸೂತ್ರದ ಬಗ್ಗೆ ಮೌನ ವಹಿಸಿವೆ. ಕೇಂದ್ರ ಸರ್ಕಾರ ಸಹ ಸಂಕಷ್ಟ ಸೂತ್ರ ರಚಿಸಲು ಮುಂದಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನೆರೆ ರಾಜ್ಯಕ್ಕೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರ ರೈತರ ಹಿತ ಕಾಪಾಡದೇ ನಿರ್ಲಕ್ಷ್ಯ ತೋರಿದ್ದು, ಕಳೆದ ಒಂದೂವರೆ ತಿಂಗಳಿಂದ ನೀರು ಹರಿಸಿ ಜಲಾಶಯ ಬರಿದು ಮಾಡಿದೆ. ಮುಂದಿನ ದಿನಗಳಲ್ಲಿ ಬೇಸಿಗೆಗೂ ಮುನ್ನವೇ ಕುಡಿಯುವ ನೀರಿಗೆ ಅಭಾವ ಎದುರಾಗಲಿದೆ. ಮಂಡ್ಯ, ಮೈಸೂರು, ಬೆಂಗಳೂರು ಸೇರಿದಂತೆ ಕಾವೇರಿ ನೀರು ಅವಲಂಬಿಸಿರುವ ಪ್ರದೇಶದ ಜನತೆ ಮತ್ತಷ್ಟು ಸಂಕಷ್ಟ ಎದುರಿಸಬೇಕಾಗುತ್ತದೆ. ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ತಕ್ಷಣ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಸಿ.ಮಂಜುನಾಥ್ ಮಾತನಾಡಿ, ಕಾವೇರಿ ವಿಚಾರದಲ್ಲಿ ರಾಜ್ಯವನ್ನಾಳಿರುವ 3 ರಾಜಕೀಯ ಪಕ್ಷಗಳು ಅನ್ಯಾಯ ಮಾಡಿವೆ. ಎಲ್ಲಾ ಸರ್ಕಾರಗಳು ತಮಿಳುನಾಡಿಗೆ ನೀರು ಹರಿಸಿದ್ದು, ಈಗಲೂ ನೀರು ಹರಿದು ಹೋಗುತ್ತಿದ್ದು, ರೈತರಿಗೆ ನಿರಂತರ ವಂಚನೆಯಾಗುತ್ತಿದೆ. ಕಾವೇರಿ ವಿಚಾರದಲ್ಲಿ ಆಗುತ್ತಿರುವ ಅನ್ಯಾಯ ತಡೆಯಲು ಮುಂಬರುವ ಲೋಕಸಭೆ ಚುನಾವಣೆ ಬಹಿಷ್ಕರಿಸಲು ಮುಂದಾಗಬೇಕು. ಕಾವೇರಿ ಕಣಿವೆ ಜಿಲ್ಲೆಗಳಲ್ಲಿ ಮತದಾನ ಬಹಿಷ್ಕರಿಸಲು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಕರೆ ನೀಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಪತ್ರಕರ್ತರ ಸಂಘದ ಉಪಾಧ್ಯಕ್ಷ ಬಿ.ಪಿ.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಕೆ.ಎನ್.ನವೀನ್‌ಕುಮಾರ್, ಸಂಘದ ಮಾಜಿ ಅಧ್ಯಕ್ಷ ಪಿ.ಜೆ.ಚೈತನ್ಯಕುಮಾರ್, ಡಿ.ಎಲ್.ಲಿಂಗರಾಜು, ಎಸ್.ಕೃಷ್ಣ ಸ್ವರ್ಣಸಂದ್ರ, ಕೆ.ಎನ್.ರವಿ, ನವೀನ್, ಸೋಮಶೇಖರ್ ಕೆರಗೋಡು, ಹಿರಿಯ ಪತ್ರಕರ್ತರಾದ ಸಿ.ಎನ್.ಮಂಜುನಾಥ್, ಶಿವನಂಜಯ್ಯ, ಎಂ.ಎಸ್.ಮೂರ್ತಿ, ಶಶಿಧರ್ ಸೇರಿದಂತೆ ನೂರಾರು ಮಂದಿ ಪತ್ರಕರ್ತರು ಭಾಗವಹಿಸಿದ್ದರು.

ಕನ್ನಡ ಸೇನೆ ಪ್ರತಿಭಟನೆ: ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ನೀರು ಬಿಟ್ಟ ಸರ್ಕಾರದ ವಿರುದ್ಧ ಕನ್ನಡ ಸೇನೆ ಕಾರ್ಯಕರ್ತರು ಮಂಡ್ಯದಲ್ಲಿ ತೆಂಗಿನಕಾಯಿ ಚಿಪ್ಪು ಪ್ರದರ್ಶಿಸಿ ಪ್ರತಿಭಟಿಸಿದರು. ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಸೇನೆಯ ಕಾರ್ಯಕರ್ತರು ಸರ್ಕಾರ ನೆರೆ ರಾಜ್ಯಕ್ಕೆ ನೀರು ಹರಿಸಿ ಕನ್ನಡಿಗರಿಗೆ ಚಿಪ್ಪು ನೀಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮೆರವಣಿಗೆ ಮೂಲಕ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಧರಣಿಯಲ್ಲಿ ಭಾಗಿಯಾಗಿ ಕೇಂದ್ರ, ರಾಜ್ಯ ಸರ್ಕಾರ, ಸಂಸದರು, ಶಾಸಕರ ವಿರುದ್ಧ ಧಿಕ್ಕಾರ ಕೂಗಿ, ಸಂಕಷ್ಟ ಕಾಲದಲ್ಲಿ ಮಧ್ಯ ಪ್ರವೇಶಿಸಬೇಕಾದ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸಿದೆ ರಾಜ್ಯ ಸರ್ಕಾರ ರಾಜ್ಯದ ಹಿತ ಕಡೆಗಣಿಸಿ ಜಲಾಶಯಗಳನ್ನು ಬರಿದು ಮಾಡುತ್ತಿದೆ. ಆಳುವ ಸರ್ಕಾರದ ಮೇಲೆ ಒತ್ತಡ ಹಾಕದೇ ಕಾವೇರಿ ಹೋರಾಟಕ್ಕೂ ಬಾರದೆ ಸಂಸದರು ಮತ್ತು ಶಾಸಕರು ಬೇಜವಾಬ್ದಾರಿ ಪ್ರದರ್ಶಿಸಿ ರಾಜ್ಯಕ್ಕೆ ಮತ್ತಷ್ಟು ಅನ್ಯಾಯ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಕಾವೇರಿ ಕೊಳ್ಳದ ಜಲಾಶಯಗಳಿಂದ ಹರಿಸುತ್ತಿರುವ ನೀರನ್ನು ತಕ್ಷಣ ಸ್ಥಗಿತ ಮಾಡಬೇಕು. ಪ್ರಾಧಿಕಾರ ಮತ್ತು ನ್ಯಾಯಾಲಯಕ್ಕೆ ವಾಸ್ತವ ಮನವರಿಕೆ ಮಾಡಿಕೊಟ್ಟು ರೈತರ ಕಾಪಾಡಬೇಕು. ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ನ್ಯಾಯ ದೊರಕಿಸಿ ಕೊಡಬೇಕು. ಕಾವೇರಿ ಸಂಕಷ್ಟ ಸೂತ್ರ ರೂಪಿಸಬೇಕು ಎಂದು ಒತ್ತಾಯಿಸಿದರು. ಸೇನೆ ರಾಜ್ಯಾಧ್ಯಕ್ಷ ಕೆ.ಆರ್.ಕುಮಾರ್, ಜಿಲ್ಲಾಧ್ಯಕ್ಷ ಮಂಜುನಾಥ್ ಸೇರಿದಂತೆ ಹಲವರು ಭಾಗವಹಿಸಿದ್ದರು.



ಕಾವೇರಿ ಹೋರಾಟಕ್ಕೆ ವಿಕಲಚೇತನರ ಬೆಂಬಲ

ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ಸರ್ಕಾರದ ವಿರುದ್ಧ ವಿಕಲಚೇತನರು ಪ್ರತಿಭಟನೆ ನಡೆಸಿದರು.

ಮಂಡ್ಯ ಜಿಲ್ಲಾ ವಿಕಲಚೇತನರ ಒಕ್ಕೂಟ ಹಾಗೂ ಸಂಘ ಸಂಸ್ಥೆಗಳ ಸಮನ್ವಯ ವೇದಿಕೆ ಆಶ್ರಯದಲ್ಲಿ ನಗರದ ಜಯಚಾಮರಾಜ ಒಡೆಯರ್ ವೃತ್ತದಿಂದ ಮೆರವಣಿಗೆ ಹೊರಟು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಧರಣಿ ಸ್ಥಳದಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ತಡೆದು ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ಹೋರಾಟ ಬೆಂಬಲಿಸಿದ ವಿಕಲಚೇತನರು ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ತಕ್ಷಣ ನಿಲ್ಲಿಸಬೇಕು. ಕಾವೇರಿ ನದಿ ನೀರು ಹಂಚಿಕೆಯಲ್ಲಿ ಕರ್ನಾಟಕಕ್ಕೆ ನಿರಂತರ ಅನ್ಯಾಯ ಆಗುತ್ತಿದೆ. ವಾಸ್ತವ ಪರಿಸ್ಥಿತಿ ಅವಲೋಕಿಸದೆ ನೀಡುತ್ತಿರುವ ತೀರ್ಪು ಮಾರಕವಾಗಿವೆ. ಸಂಕಷ್ಟ ಕಾಲದಲ್ಲಿ ಪರಿಸ್ಥಿತಿ ಅಧ್ಯಯನಕ್ಕೆ ಮುಂದಾಗಬೇಕಾಗಿದೆ ಎಂದರು. ಸಂಘದ ಮುಖಂಡರಾದ ಎಂ.ಎಸ್.ಚೆಲುವರಾಜು, ದೇವರಾಜು, ಶಿವಕುಮಾರ್, ಕೃಷ್ಣ, ಗಿರಿಗೌಡ, ಮಹಾದೇವ್, ಭಾರತಿ, ರತ್ನಮ್ಮ, ವಸಂತ ಸೇರಿದಂತೆ ಹಲವರು ಭಾಗವಹಿಸಿದ್ದರು.



ರೌಡಿಶೀಟರ್ ವಿನೋದ್ ಹತ್ಯೆ ಪ್ರಕರಣ

9 ಮಂದಿ ಆರೋಪಿಗಳ ಬಂಧನ

ಮಂಡ್ಯ, ಅ.6– ಕಳೆದ ಅ.2ರ ಗಾಂಧಿ ಜಯಂತಿಯಂದು ನಡೆದ ರೌಡಿಶೀಟರ್ ವಿನೋದ್ ಅಲಿಯಾಸ್ ಕುಂಟ ವಿನು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಆರ್‌ಎಸ್ ಪೊಲೀಸರು 9 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ.



ಮೂಲತಃ ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿ ಗ್ರಾಮದ ವಿನೋದ್ ಮತ್ತು ಶಿವಪ್ರಸಾದ್ ನಡುವೆ ಯಾವುದೋ ಕಾರಣಕ್ಕಾಗಿ ಆಗಾಗ ಜಗಳ ನಡೆಯುತ್ತಿತ್ತು. ಕಳೆದ 2 ತಿಂಗಳ ಹಿಂದೆಯೂ ಕೂಡ ಇವರಿಬ್ಬರ ನಡುವೆ ಗಲಾಟೆ ನಡೆದಿತ್ತು ಎನ್ನಲಾಗಿದೆ. ಕಳೆದ ಅ.2 ರಂದು ವಿನೋದ್ ತನ್ನ ಫಾರ್ಮ್ ಹೌಸ್‌ಗೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದಾಗ ಶಿವಪ್ರಸಾದ್ ಸೇರಿದಂತೆ 9 ಮಂದಿ ಆರೋಪಿಗಳು ಓಮ್ನಿಯಲ್ಲಿ ಬಂದು ವಿನೋದ್‌ನನ್ನು ಮಾರಕಾಸ್ತ್ರಗಳಿಂದ ಭೀಕರವಾಗಿ ಹತ್ಯೆ ಮಾಡಿದ್ದರು. ಹತ್ಯೆ ಮಾಡಿದ ನಂತರ ತಲೆಮರೆಸಿಕೊಂಡಿದ್ದ ಆರೋಪಿಗಳನ್ನು ಕೆಆರ್‌ಎಸ್ ಪೊಲೀಸರು ಎಸ್ಪಿ ಯತೀಶ್ ಮಾರ್ಗದರ್ಶನದಲ್ಲಿ ಬಂಧಿಸಲು ಯಶಸ್ವಿಯಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ಶ್ರೇಷ್ಠ ಸಾಧನೆ ಮಾಡಿ

ರಾಜ್ಯ ವ್ಯಕ್ತಿತ್ವ ವಿಕಸನ ತರಬೇತುದಾರ ಶಂಕರ್ ಬೆಳ್ಳೂರು

ಕೆ.ಆರ್.ಪೇಟೆ, ಅ.6– ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡಿದರೇ ಶ್ರೇಷ್ಠ ಸಾಧನೆ ಮಾಡಬಹುದು ಎಂದು ರಾಜ್ಯ ವ್ಯಕ್ತಿತ್ವ ವಿಕಸನ ತರಬೇತುದಾರ ಶಂಕರ್ ಬೆಳ್ಳೂರು ತಿಳಿಸಿದರು.

ಪಟ್ಟಣದಲ್ಲಿ ಸಮಾಜ ಸೇವಕ ಮಲ್ಲಿಕಾರ್ಜುನ್ ಅವರು ಪಿಯುಸಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ತರಬೇತಿ ಹಾಗೂ ಜೀವನದ ಗುರಿ ಕುರಿತು ವಿದ್ಯಾರ್ಥಿಗಳೊಂದಿಗೆ ಒಂದು ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ತಂದೆ ತಾಯಿ ಒತ್ತಡಕ್ಕೆ ಒಳಗಾಗಿ ಕಷ್ಟಪಟ್ಟು ವಿದ್ಯಾಭ್ಯಾಸ ಮಾಡದೇ ಇಷ್ಟಪಟ್ಟು ವಿದ್ಯಾಭ್ಯಾಸ ಮಾಡಿದರೇ ಉತ್ತಮ ಶಿಕ್ಷಣ ಪಡೆಯಬಹುದು ಎಂದರು.

ದ್ವಿತೀಯ ಪಿಯುಸಿ, ಎಸ್‌ಎಸ್‌ಎಲ್‌ಸಿ ಬಳಿಕ ನಂತರ ಮುಂದೇನು ವ್ಯಾಸಾಂಗ ಮಾಡಬೇಕು. ಯಾವ ಕೋರ್ಸ್‌ಗೆ ಸೇರಬೇಕು ಎಂಬ ಬಗ್ಗೆ ಗ್ರಾಮೀಣ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ದೊರೆಯುವುದಿಲ್ಲ. ಅಲ್ಲದೇ ಕೆಲವು ಪೋಷಕರು ತಮ್ಮ ಮಕ್ಕಳು ಇಂಜಿನಿಯರ್, ಡಾಕ್ಟರ್ ಆಗಬೇಕೆಂದು ಮಕ್ಕಳ ಮೇಲೆ ಒತ್ತಡ ಹಾಕಿ ಅವರ ಇಷ್ಟಕ್ಕೆ ವಿರುದ್ಧವಾಗಿ ಶಿಕ್ಷಣ ಕೊಡಿಸುತ್ತಾರೆ. ಇದರಿಂದ ಮಕ್ಕಳ ಆಸೆಗೆ ತಣ್ಣೀರೆರಚಿದಂತಾಗುತ್ತದೆ. ಆದ್ದರಿಂದ ಪೋಷಕರು ಮಕ್ಕಳ ಇಷ್ಟಕ್ಕೆ ವಿರುದ್ಧವಾಗಿ ನಡೆದುಕೊಳ್ಳದೇ, ಅವರ ಅಭಿರುಚಿಗೆ ತಕ್ಕಂತೆ ಶಿಕ್ಷಣ ಕೊಡಿಸಲು ಮುಂದಾಗಬೇಕು ಎಂದು ತಿಳಿಸಿದರು.

ವಿದ್ಯಾರ್ಥಿಗಳು ಪದವಿ ಪಡೆಯುವುದು ಕೆಲಸ ಪಡೆಯಲು ಅಲ್ಲ ಎಂಬ ಸತ್ಯವನ್ನು ಅರಿಯಬೇಕು. ನಾವು ಶಿಕ್ಷಣ ಪಡೆಯುವುದು ನಮ್ಮ ವ್ಯಕ್ತಿತ್ವ ವಿಕಾಸಕ್ಕಾಗಿ ಹಾಗೂ ಜ್ಞಾನಾರ್ಜನೆಗಾಗಿ ಎಂಬ ಸತ್ಯ ತಿಳಿದು ಯಾರದೇ ಬಲವಂತ ಹಾಗೂ ಒತ್ತಾಯಕ್ಕೆ ಶಿಕ್ಷಣ ಪಡೆಯದೇ ನಮ್ಮ ಬದುಕು ರೂಪಿಸಿಕೊಳ್ಳಲು ಶಿಕ್ಷಣ ಪಡೆಯಬೇಕು ಎಂದರು.



ವಿದ್ಯಾರ್ಥಿಗಳು ದಿನ ಪತ್ರಿಕೆ ಹಾಗೂ ಪುಸ್ತಕಗಳನ್ನು ಓದುವ ಮೂಲಕ ಜ್ಞಾನ ಹೆಚ್ಚಿಸಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಮೂಲಕ ಸಾಧನೆ ಮಾಡಬೇಕು ಎಂದು ಸಲಹೆ ನೀಡಿದರು.

ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ಅಧ್ಯಕ್ಷ ಹಾಗೂ ಸಮಾಜ ಸೇವಕ ಮಲ್ಲಿಕಾರ್ಜುನ ಮಾತನಾಡಿದರು. ಈ ವೇಳೆ ರಾಷ್ಟ್ರಪ್ರಶಸ್ತಿ ಪುರಸ್ಕೃತ ವಿಶ್ರಾಂತ ಶಿಕ್ಷಕ ಡಾ.ಅಂ.ಚಿ.ಸಣ್ಣಸ್ವಾಮಿಗೌಡ, ವಾಸ್ತು ಶಿಲ್ಪಿಗಳಾದ ರಾಘವೇಂದ್ರ, ಮಂಜುನಾಥ್, ಸುರೇಶ್, ರಾಜ್‌ಗೋಪಾಲ್, ತಾಲೂಕು ಕಸಾಪ ಅಧ್ಯಕ್ಷ ಪೂರ್ಣಚಂದ್ರ ತೇಜಸ್ವಿ, ಪುರಸಭೆ ಮಾಜಿ ಸದಸ್ಯ ಕೆ.ಆರ್.ನೀಲಕಂಠ, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪದ್ಮೇಶ್ ಮತ್ತಿತರರಿದ್ದರು.

ನೀರು ವ್ಯತ್ಯಯ

ಮಂಡ್ಯ, ಅ.6– ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆಯಡಿ ಶ್ರೀರಂಗಪಟ್ಟಣ ಸಮೀಪದ ಮೂಲ ಸ್ಥಾವರಕ್ಕೆ ವಿದ್ಯುತ್ ಸರಬರಾಜು ಮಾಡುವ ವಿದ್ಯುತ್ ಉಪ ವಿತರಣಾ ಕೇಂದ್ರದ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಅ.7ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ಸರಬರಾಜು ಕಡಿತವಾಗಲಿದೆ. ಆದ್ದರಿಂದ ಅ.7 ರಂದು ಮಂಡ್ಯ ನಗರಕ್ಕೆ ನೀರನ್ನು ಪಂಪು ಮಾಡಲು ಸಾಧ್ಯವಿಲ್ಲ. ಹೀಗಾಗಿ ಮಂಡ್ಯ ನಗರದ ಸಾರ್ವಜನಿಕರಿಗೆ ಅ.8 ರಂದು ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ನೀರು ಬಂದ ವೇಳೆ ಶೇಖರಿಸಿಟ್ಟುಕೊಂಡು ಜಲಮಂಡಳಿಯೊಂದಿಗೆ ಸಹಕರಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

ಮಂಡ್ಯ, ಅ.6– ನಾಗಮಂಗಲ ತಾಲೂಕಿನ ಮೊರಾರ್ಜಿ ದೇಸಾಯಿ ವಸತಿ ಶಾಲೆ ಸೋಮನಹಳ್ಳಿಯಲ್ಲಿ ಹಿಂದಿ ಭಾಷಾ ಅತಿಥಿ ಶಿಕ್ಷಕರ ಹುದ್ದೆ ಖಾಲಿ ಇದ್ದು, ಆಸಕ್ತ ಅಭ್ಯರ್ಥಿಗಳು ಅ.13ರೊಳಗೆ ಶಾಲೆ ಪ್ರಾಂಶುಪಾಲರನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗೆ ದೂ: 08232–231804, 9900452195 ಅನ್ನು ಸಂಪರ್ಕಿಸಿ.

ದಸರಾ 'ಯುವ ಸಂಭ್ರಮ'ಕ್ಕೆ ಸಂತಸದ ಚಾಲನೆ











ಒಂದನೇ ಪುಟದಿಂದ

ರಾಜ್ಯದ ಸುಮಾರು 400 ಕಾಲೇಜುಗಳ ವಿದ್ಯಾರ್ಥಿಗಳು 20 ಥೀಮ್‌ನಲ್ಲಿ ನಿತ್ಯ ಸಂಜೆ 5ರಿಂದ ರಾತ್ರಿ 10ರವರೆಗೆ ಕಾರ್ಯಕ್ರಮ ನೀಡಲಿದ್ದಾರೆ. ಇದಕ್ಕೂ ಮೊದಲು ನಾಡಗೀತೆ ನಂತರ ಸಂವಿಧಾನ ಪೀಠಿಕೆಯನ್ನು ಮೈಸೂರು ವಿವಿ ಕುಲಸಚಿವೆ ವಿ.ಆರ್.ಶೈಲಜಾ ಓದಿದರು. ನೆರೆದಿದ್ದವರೆಲ್ಲಾ ಎದ್ದುನಿಂತು ಪೀಠಿಕೆಯನ್ನು ಪುನರುಚ್ಚರಿಸಿದರು. ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ದೀಪ ಬೆಳಗಿಸಿ ನಂತರ ಡೋಲು ಭಾರಿಸುವ ಮೂಲಕ 'ಯುವ ಸಂಭ್ರಮ'ವನ್ನು ವಿಧ್ಯುಕ್ತವಾಗಿ ಉದ್ಘಾಟಿಸಿದರು.

ತಾರಾ ಮೆರಗು: ಮೈಸೂರಿನವರೇ ಆದ ವಶಿಷ್ಠ ಸಿಂಹ ಹಾಗೂ ಹರಿಪ್ರಿಯ ದಂಪತಿಯ ತಾರಾ ಮೆರುಗು, ಯುವ ಸಂಭ್ರಮದ ಜೋಶ್ ಹೆಚ್ಚಿಸಿತು. ಒಂದೆರಡು ಡೈಲಾಗ್ ಹೊಡೆದ ವಶಿಷ್ಠ ಸಿಂಹ, ಬೇಡಿಕೆ ಮೇರೆಗೆ ಒಂದೆರಡು ಹಾಡುಗಳನ್ನು ಗುನುಗಿದರು. ತಾವೇ ಹಾಡಿರುವ 'ದಯವಿಟ್ಟು ಗಮನಿಸಿ' ಚಿತ್ರದ 'ಮರೆತೆ ಹೋದೆನು ಹೊರಟ ಕಾರಣ...', 'ಕಿರಿಕ್ ಪಾರ್ಟಿ' ಚಿತ್ರದ 'ನೀಚ ಸುಳ್ಳು ಸುತ್ತೋ ನಾಲಿಗೆ ನಿನ್ನ ಸೀಳುವಾ ರೋಷ ಉಕ್ಕಿದೆ...' ಸಾಲುಗಳನ್ನು ಹಾಡಿ ರಂಜಿಸಿದರು. ಅಲ್ಲದೆ ತಮ್ಮ ಪತ್ನಿ ಹರಿಪ್ರಿಯ ನಟನೆಯ 'ಬೆಲ್ ಬಾಟಮ್' ಚಿತ್ರದ 'ಏತಕೆ ಬೊಗಸೆ ತುಂಬಾ ಆಸೆ ತುಂಬಿದೆ...', ಹಾಗೂ ತಮ್ಮ ಗುರುಗಳಾದ ಹಂಸಲೇಖ ಅವರ ಸಂಗೀತ ನಿರ್ದೇಶನವುಳ್ಳ 'ನೆನಪಿರಲಿ' ಚಿತ್ರದ 'ಕೂರಕ್ ಕುಕ್ಕರಳ್ಳಿ ಕೆರೆ, ತೇಲೋಕ್ ಕಾರಂಜಿ ಕೆರೆ...' ಹಾಡುಗಳ ಒಂದೆರಡು ಸಾಲುಗಳನ್ನು ಸುಮಧುರವಾಗಿ ಹಾಡಿದರು. ಯುವ ಸಮೂಹದ ಕೇಕೆ, ಶಿಳ್ಳೆ ಮುಗಿಲು ಮುಟ್ಟಿತ್ತು.

ಈ ವೇದಿಕೆ ಕಾರಣ: ಇದೇ ವೇಳೆ ಮೈಸೂರಿನಲ್ಲಿ ಕಳೆದ ದಿನಗಳನ್ನು ನೆನೆದ ವಶಿಷ್ಠ ಸಿಂಹ, ಇದೇ ಬಯಲು ರಂಗ ಮಂದಿರದಲ್ಲಿ 2004ರಲ್ಲಿ ನಮ್ಮ ಗುರುಗಳಾದ ಹಂಸಲೇಖ ಅವರ ಕಾರ್ಯಕ್ರಮವಿತ್ತು. ಅವರನ್ನು ನೋಡಿ, ಮಾತನಾಡಿಸಬೇಕೆಂದು ಹೋಗುವಾಗ ವಾಚ್‌ಮನ್ ಅವರಿಂದ ಹೊಡೆಸಿಕೊಂಡಿದ್ದೆ. ಹೇಗೋ ಹಂಸಲೇಖ ಅವರನ್ನು ಭೇಟಿಯಾಗಿದ್ದೆ. ಅವರು ಹೇಳಿದಂತೆ ಬೆಂಗಳೂರಿಗೆ ಹೋಗಿ ಅವರನ್ನು ಭೇಟಿಯಾದ ಮೇಲೆ ನನ್ನ ಬದುಕು ಬದಲಾಯಿತು. ಪ್ರತಿಯೊಬ್ಬರಲ್ಲೂ ಪ್ರತಿಭೆ ಇದ್ದೇ ಇರುತ್ತದೆ. ಅದನ್ನು ಗುರುತಿಸಿಕೊಂಡು, ಆ ನಿಟ್ಟಿನಲ್ಲಿ ಬೆಳೆಯುವ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು.

ಸೊಸೆಯಾಗಿ ಬಂದಿದ್ದೇನೆ: ಹರಿಪ್ರಿಯ ಸಿಂಹ ಮಾತನಾಡಿ, ಮೈಸೂರು ಎಂದರೆ ನನಗೆ ಮೊದಲಿನಿಂದಲೂ ಇಷ್ಟ. ಈ ಹಿಂದೆ ನಿಮ್ಮ ಮನೆ ಮಗಳಾಗಿ ಇಲ್ಲಿಗೆ ಬಂದಿದೆ. ಆದರೆ ಈಗ ನಿಮ್ಮೂರಿನ ಸೊಸೆಯಾಗಿ ಬಂದಿದ್ದೇನೆ. ಮೈಸೂರಲ್ಲಿಯೇ ನಮ್ಮ ಮದುವೆಯಾಗಿದ್ದು. ಬಳಿಕ ಮೊದಲ ಬಾರಿ ಒಟ್ಟಿಗೆ ವೇದಿಕೆಗೆ ಬಂದಿರುವುದು ಖುಷಿಯಾಗಿದೆ. ನಾನು ಹೆಚ್ಚು ಸಾಂಸ್ಕೃತಿಕ ಚಟುವಟಿಕೆಗೆ ಆದ್ಯತೆ ನೀಡಿ, ವಿದ್ಯಾಭ್ಯಾಸ ಮಿಸ್ ಮಾಡಿಕೊಂಡೆ ಆದರೆ ಶಿಕ್ಷಣ ತುಂಬಾ ಮುಖ್ಯ ಸಾಂಸ್ಕೃತಿಕ ಚಟುವಟಿಕೆ ಜೊತೆಗೆ ವಿದ್ಯಾಭ್ಯಾಸಕ್ಕೂ ಗಮನ ಕೊಡಿ ಎಂದು ಕಿವಿ ಮಾತು ಹೇಳಿದರು.

ಇದೇ ಸಂದರ್ಭದಲ್ಲಿ ಚಿತ್ರ ಕಲಾವಿದ ಪುನೀತ್ ಕುಮಾರ್, ವಶಿಷ್ಠ ಹಾಗೂ ಹರಿಪ್ರಿಯ ದಂಪತಿಯ ಪೋಟ್ರೇಟ್ (ಭಾವಚಿತ್ರ) ಅನ್ನು ಕೊಡುಗೆಯಾಗಿ ನೀಡಿದರು. ಅಲ್ಲದೆ ಸ್ಥಳದಲ್ಲೇ ವಶಿಷ್ಠ ಸಿಂಹ ಅವರ ಪೋಟ್ರೇಟ್ ರಚಿಸಿ, ನೈಪುಣ್ಯತೆ ಪ್ರದರ್ಶಿಸಿದರು. ಇದರಿಂದ ದಂಪತಿ ಖುಷಿ ವ್ಯಕ್ತಪಡಿಸಿ, ಕಲಾವಿದನನ್ನು ಅಭಿನಂದಿಸಿದರು. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪಾ, ಶಾಸಕರಾದ ಶ್ರೀವತ್ಸ, ಡಿ.ರವಿಶಂಕರ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ದಸರಾ ವಿಶೇಷಾಧಿಕಾರಿಯಾದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಯುವ ಸಂಭ್ರಮ ಉಪ ಸಮಿತಿ ಉಪ ವಿಶೇಷಾಧಿಕಾರಿ ಎಸ್ಪಿ ಸೀಮಾ ಲಾಟ್ಕರ್, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ಪಾಲಿಕೆ ಸದಸ್ಯೆ ಭಾಗ್ಯ ಮಾದೇಶ್, ಉಪ ಸಮಿತಿ ಕಾರ್ಯದರ್ಶಿ ಆರ್.ಪ್ರತಾಪ್, ಸಹ ಕಾರ್ಯದರ್ಶಿ ನಿಂಗರಾಜು, ಡಿಸಿಪಿ ಮುತ್ತುರಾಜ್ ಮತ್ತಿತರರು ಉಪಸ್ಥಿತರಿದ್ದರು.

> **ದೇಶದ ಭವಿಷ್ಯ ನಿಂತಿರುವುದು ಯುವಕರ ಬದುಕಿನ ಮೇಲೆ. ಅವರ ಬದುಕಿಗೆ ಭದ್ರ ಬುನಾದಿಯನ್ನು ಉತ್ತಮ ಸಿದ್ಧಾಂತದ ಮೇಲೆ ನಿರ್ಮಿಸಬೇಕಿದೆ. ನಮ್ಮ ದೇಶದ ಚಾರಿತ್ರಿಕ ಹಿನ್ನೆಲೆ, ಸ್ವಾತಂತ್ರ್ಯ ಹೋರಾಟ, ಸಾಂಸ್ಕೃತಿಕ ಬದುಕು, ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಆಶಯದ ಸೈದ್ಧಾಂತಿಕ ಅಡಿಪಾಯದಲ್ಲಿ ಬುದ್ಧ, ಬಸವ, ಡಾ.ಬಿ.ಆರ್.ಅಂಬೇಡ್ಕರ್‌ರ ಆಶಯದಂತೆ ದೇಶವನ್ನು ಬಲಿಷ್ಠವಾಗಿ ಕಟ್ಟಬೇಕಾದ ಅನಿವಾರ್ಯತೆ ಇದೆ. ಕಷ್ಟಪಟ್ಟು ಪಡೆದ ಸ್ವಾತಂತ್ರ್ಯ ಹಾಗೂ ನಮಗೆ ನಾವೇ ಅರ್ಪಿಸಿಕೊಂಡಿರುವ ಪ್ರಜಾಪ್ರಭುತ್ವ ವ್ಯವಸ್ಥೆ ಅರ್ಥಪೂರ್ಣವಾಗಿರಬೇಕು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನೀಡಿದಂತಹ ಶ್ರೇಷ್ಠವಾದ ಆಡಳಿತ, ಜನಪರವಾದ ನಿರ್ಧಾರಗಳು ದೇಶದ ಎಲ್ಲಾ ಸರ್ಕಾರಗಳಿಗೂ ಮಾದರಿಯಾಗಿದೆ. ಈ ಯುವ ಸಂಭ್ರಮದಲ್ಲಿ ಕುಣಿದು ಕುಪ್ಪಳಿಸುವುದರ ಜೊತೆಗೆ ಭವಿಷ್ಯದಲ್ಲಿ ಉತ್ತಮ, ಜವಾಬ್ದಾರಿಯುತ ಪ್ರಜೆಗಳಾಗಬೇಕು.**
> –ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವರು

> **ಇದು ನನಗೆ ಮೊದಲ ದಸರಾ. ಈವರೆಗೆ ಬೇರೆ ಬೇರೆ ಕಾರಣಗಳಿಂದ ಟಿವಿಯಲ್ಲೂ ದಸರಾ ನೋಡಿರಲಿಲ್ಲ. ಈ ಭಾರಿ ನೇರವಾಗಿ ಭಾಗಿಯಾಗುವ ಅವಕಾಶ ಸಿಕ್ಕಿರುವುದು ಸಂತಸವಾಗಿದೆ. ನಿಮ್ಮ ಸಂಭ್ರಮ ನೋಡಿ ಉತ್ಸಾಹ ಮತ್ತಷ್ಟು ಹೆಚ್ಚಾಗಿದೆ.**
> –ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ

ಹೊಸದಾಗಿ ಮದ್ಯದಂಗಡಿ ತೆರೆಯಲ್ಲ

ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ

ಬೆಂಗಳೂರು, ಅ.6(ಕೆಎಂಶಿ)–



ರಾಜ್ಯದಲ್ಲಿ ಹೊಸ ದಾಗಿ ಮದ್ಯದಂಗಡಿ ತೆರೆಯಲು ಅವಕಾಶ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ. ಅದರಂತೆ ಪ್ರಸಕ್ತ ವರ್ಷ ಅಬಕಾರಿ ಬಾಬ್ತಿನಲ್ಲಿ 35 ಸಾವಿರ ಕೋಟಿ ರೂ. ಸಂಗ್ರಹಿಸುವ ಗುರಿ ಹೊಂದಲಾಗಿದೆ. ಹಾಗಾಗಿ ಮದ್ಯದಂಗಡಿ ಹೊಸದಾಗಿ ತೆರೆಯಲು ಅವಕಾಶ ನೀಡಿ ಸಾರ್ವಜನಿಕರಿಗೆ ಮುಜುಗರ ಉಂಟು ಮಾಡು ವುದಿಲ್ಲ. ಈಗಾಗಲೇ ಮುಂಗಡ ಪತ್ರದಲ್ಲಿ ವಿವಿಧ ಮಾದರಿಯ ಮದ್ಯದ ಮೇಲೆ ಅನಿವಾರ್ಯವಾಗಿ ತೆರಿಗೆ ಹೆಚ್ಚಳ ಮಾಡಲಾಗಿದೆ. ಕಳೆದ ಸಾಲಿಗಿಂತ ಈ ಬಾರಿ ಶೇ.21ರಷ್ಟು ಮದ್ಯದ ದರ ಹೆಚ್ಚಳವಿದೆ.

ಕಿರಾಣಿ ಅಂಗಡಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುವುದನ್ನು ತಪ್ಪಿಸುವ ಉದ್ದೇಶದಿಂದ ಪ್ರತಿ ಗ್ರಾಮ ಪಂಚಾಯ್ತಿಯಲ್ಲಿ ಒಂದು ಮದ್ಯದಂಗಡಿ ತೆರೆಯುವ ಪ್ರಸ್ತಾವನೆಯನ್ನು ಅಬಕಾರಿ ಸಚಿವರು ನೀಡಿದ್ದರು. ನಗರಗಳಲ್ಲಿನ ಸೂಪರ್ ಮಾರುಕಟ್ಟೆ ಗಳಲ್ಲಿ ಹೊಸದಾಗಿ ಪರವಾನಗಿ ನೀಡುವುದು, ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ 5 ಸಾವಿರ ಜನಸಂಖ್ಯೆಗಿಂತ ಕಡಿಮೆ ಇರುವ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಮದ್ಯದಂಗಡಿ ಪರವಾನಗಿ ನೀಡಲು ಇರುವ ಎಲ್ಲಾ ನಿರ್ಬಂಧಗಳನ್ನು ತೆರೆಯಲು ಸಚಿವರು ಮುಂದಾಗಿದ್ದರು. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಒಂದು ಸಾವಿರ ಮದ್ಯದಂಗಡಿ ತೆರೆಯುವ ಇಂಗಿತವನ್ನು ವ್ಯಕ್ತಪಡಿಸಿದ್ದರು. ಅದಕ್ಕೆ ತೀವ್ರ ವಿರೋಧ ವ್ಯಕ್ತವಾಗಿತ್ತು.

ಮಹಿಳೆಯರಿಂದಲೇ ತೀವ್ರ ವಿರೋಧ ವ್ಯಕ್ತವಾದ್ದರಿಂದ ಹೊಸ ಮದ್ಯದಂಗಡಿ ತೆರೆಯುವ ಪ್ರಸ್ತಾಪ ಕೈ ಬಿಡಲಾಗಿದೆ. ಆರ್ಥಿಕ ಮುಗ್ಗಟ್ಟಿದ್ದರೂ ಹೇಗೋ ಸರಿ ದೂಗಿಸಿಕೊಂಡು ಹೋಗುತ್ತೇವೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ. ಬರ ಪರಿಸ್ಥಿತಿಯ ಬಗ್ಗೆ ಮಾತನಾಡಿದ ಅವರು, ರಾಜ್ಯದಲ್ಲಿ ವಾಸ್ತವಿಕವಾಗಿ ಸುಮಾರು 30 ಸಾವಿರ ಕೋಟಿ ರೂ. ಬೆಳೆಹಾನಿಯಾಗಿದೆ. ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ 4860 ಕೋಟಿ ರೂ. ಪರಿಹಾರವನ್ನು ಕೋರಲಾಗಿದ್ದು, ಈ ಮೊತ್ತವನ್ನು ಬಿಡುಗಡೆ ಮಾಡಬೇಕೆಂದು ಕೇಂದ್ರ ವನ್ನು ಒತ್ತಾಯಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಕೇಂದ್ರ ತಂಡಕ್ಕೆ ಮನವರಿಕೆ: ಕೇಂದ್ರದ ಅಧ್ಯಯನ ತಂಡಕ್ಕೆ ರಾಜ್ಯದಲ್ಲಿ ತಲೆದೋರಿರುವ ಬರಪರಿಸ್ಥಿತಿಯ ವಸ್ತುಸ್ಥಿತಿಯನ್ನು ಈಗಾಗಲೇ ವಿವರಿಸಲಾಗಿದೆ. ಒಟ್ಟು 236 ತಾಲೂಕುಗಳಲ್ಲಿ 195 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಸುಮಾರು 30 ಸಾವಿರ ಕೋಟಿ ರೂ.ಗಳಿಗೂ ಹೆಚ್ಚಿನ ಬೆಳೆಹಾನಿ ಸಂಭವಿಸಿದೆ. 42 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸುಮಾರು ಶೇ.52ರಷ್ಟು ಬೆಳೆಹಾನಿಯಾಗಿದೆ. ಕೇಂದ್ರದ ಅಧ್ಯಯನ ತಂಡ ಮೂರು ತಂಡಗಳಲ್ಲಿ ರಾಜ್ಯದ 11 ಜಿಲ್ಲೆಗಳಿಗೆ ಭೇಟಿ ನೀಡುತ್ತಿದೆ. ಅವರು ಕೇಂದ್ರಕ್ಕೆ ವರದಿ ಸಲ್ಲಿಸಿದ ನಂತರ, ವರದಿ ಆಧರಿಸಿದಂತೆ ಕೇಂದ್ರ ಪರಿಹಾರ ನೀಡಲಿದೆ ಎಂದು ತಿಳಿಸಿದರು.

ಮೈಸೂರಲ್ಲಿ ದಸರಾ ಏರ್ ಶೋಗೆ ಸಿದ್ಧತೆ

ಈ ಹಿಂದೆ ಐಎಎಫ್‌ನಿಂದ ಮೈಸೂರಿನ ಪಂಜಿನ ಕವಾಯತು ಮೈದಾನದಲ್ಲಿ 2017, 2018 ಮತ್ತು 2019ರಲ್ಲಿ ಯಶಸ್ವಿಯಾಗಿ ದಸರಾ ವೈಮಾನಿಕ ಪ್ರದರ್ಶನ ನಡೆದಿತ್ತು. 2019ರ ಅಕ್ಟೋಬರ್ 2 ರಂದು ಮಧ್ಯಾಹ್ನ 12 ಗಂಟೆಗೆ ಮೈಸೂರಲ್ಲಿ ಕಡೇ ಏರ್ ಶೋ ನಡೆದಿತ್ತು. ಆಗ ಸುಮಾರು 35,000 ಮಂದಿ ಆ ಸಾಹಸ ಪ್ರದರ್ಶನವನ್ನು ವೀಕ್ಷಿಸಿದ್ದರು.

ತದನಂತರ 2020, 2021 ಮತ್ತು 2022 ರಲ್ಲಿ ಕೋವಿಡ್–19 ಮತ್ತು ಇತರ ಕಾರಣಗಳಿಂದಾಗಿ ಈ ಪ್ರದರ್ಶನ ರದ್ದಾಗಿತ್ತು. ಈ ವರ್ಷ ಮತ್ತೆ ಏರ್ ಶೋ ನಡೆಸಲು ನಿರ್ಧರಿಸಿರುವುದರಿಂದ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಡಾ.ರಾಜೇಂದ್ರ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ಇಂದು ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಚೆನ್ನಕೇಶವ ಅವರು ಎಕ್ಸಿಕ್ಯೂಟಿವ್ ಇಂಜಿನಿಯರ್ಸ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿ, ಸಿದ್ಧತಾ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ. ಪಂಜಿನ ಕವಾಯತು ಮೈದಾನದ ಪ್ರವೇಶ ಮತ್ತು ನಿರ್ಗಮನ ಮಾರ್ಗ, ಪಾರ್ಕಿಂಗ್ ವ್ಯವಸ್ಥೆ, ಸುತ್ತಲಿನ ಗಿಡಗಂಟಿಗಳ ತೆರವು, ಸ್ವಚ್ಛತಾ ಕಾರ್ಯ ಕೈಗೊಳ್ಳಲಿರುವ ಮುಡಾ ಅಧಿಕಾರಿಗಳು ಇಂದು ಮಧ್ಯಾಹ್ನದಿಂದಲೇ ಭರದ ಸಿದ್ಧತೆಯಲ್ಲಿ ತೊಡಗಿದ್ದಾರೆ.

ಕೇಂದ್ರ ಸರ್ಕಾರದಿಂದ ಏರ್ ಶೋಗೆ ಗ್ರೀನ್ ಸಿಗ್ನಲ್ ಸಿಗುತ್ತಿದ್ದಂತೆಯೇ, ಎನ್.ಆರ್. ಉಪವಿಭಾಗದ ಎಸಿಪಿ ಸಿ.ಕೆ.ಅಶ್ವತ್ಥನಾರಾಯಣ ಹಾಗೂ ಎನ್.ಆರ್. ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ ತಳವಾರ ಅವರು ಕಾರ್ಯಕ್ರಮಕ್ಕೆ ಬಂದೋಬಸ್ತ್ ಒದಗಿಸುವ ಸಂಬಂಧ ಸಭೆ ನಡೆಸಿ ಸಿದ್ಧತೆ ಆರಂಭಿಸಿದ್ದಾರೆ. ಹಾಗೆಯೇ ವಾಹನ ನಿಲುಗಡೆ ವ್ಯವಸ್ಥೆ, ಸಂಚಾರ ಸುಗಮಗೊಳಿಸಲು ಎನ್.ಆರ್. ಸಂಚಾರ ಠಾಣೆ ಪೊಲೀಸರೂ ತಯಾರಿ ನಡೆಸುತ್ತಿದ್ದಾರೆ.

ಏರ್ ಶೋ ದಿನಾಂಕ, ಸಮಯ ನಿಗದಿ ಸಂಬಂಧ ಅಧಿಕಾರಿಗಳು ಸಮಾಲೋಚನೆ ನಡೆಸುತ್ತಿದ್ದು, ಶೀಘ್ರ ಕಾರ್ಯಕ್ರಮದ ರೂಪುರೇಷೆ ನಿರ್ಧರಿಸಲಾಗುವುದು.

ಇಂದು ಮೈಸೂರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ: ಬಸವ ಜಯಂತಿ ಕಾರ್ಯಕ್ರಮದಲ್ಲಿ ಭಾಗಿ



ಮೈಸೂರು, ಅ.6(ಬಿಎಲ್ಎಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಮೈಸೂರಿಗೆ ಆಗಮಿಸಲಿದ್ದಾರೆ. ಬೆಳಿಗ್ಗೆ 10.30 ಗಂಟೆಗೆ ಬೆಂಗಳೂರಿನ ಹೆಚ್ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಹೊರಡುವ ಅವರು ಬೆಳಗ್ಗೆ 11 ಗಂಟೆಗೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವರು.

ತರುವಾಯ ಮೈಸೂರಿನ ಕಲಾಮಂದಿರದಲ್ಲಿ ಬೆಳಿಗ್ಗೆ 11.15 ಗಂಟೆಗೆ ನಡೆಯುವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಪಾಲ್ಗೊಳ್ಳಲಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಲಿಂಗಾಯಿತ ಅಧಿಕಾರಿಗಳನ್ನು ಕಡೆಗಣಿಸಲಾಗಿದೆ ಎಂದು ಹಿರಿಯ ಕಾಂಗ್ರೆಸ್ ಮುಖಂಡ ಶಾಮನೂರು ಶಿವಶಂಕರಪ್ಪ ಸೇರಿದಂತೆ ಹಲವು ಲಿಂಗಾಯಿತ ಶಾಸಕರು ಆರೋಪ ಮಾಡುತ್ತಿರುವ ಈಗಿನ ಸನ್ನಿವೇಶದಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯಿತ ಮಹಾಸಭಾ ಆಯೋಜಿಸಿರುವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಪಾಲ್ಗೊಳ್ಳುತ್ತಿರುವುದು ಮಹತ್ವ ಪಡೆದಿದೆ.

ಶನಿವಾರ ನಡೆಯುವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ತಮ್ಮ ಮೇಲಿನ ಆರೋಪದ ಬಗ್ಗೆ ಯಾವ ರೀತಿಯ ಸ್ಪಷ್ಟನೆ ನೀಡಲಿದ್ದಾರೆ ಎಂಬ ಕುತೂಹಲವಿದೆ. ಬಸವ ಜಯಂತಿ ಕಾರ್ಯಕ್ರಮದ ತರುವಾಯ ಸಂಜೆ 4 ಗಂಟೆಗೆ ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ಪರಿಸರ ಇಲಾಖೆ ಆಯೋಜಿಸಿರುವ 69 ನೇ ವನ್ಯಜೀವಿ ಸಪ್ತಾಹ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಸಿದ್ದರಾಮಯ್ಯ ಅವರು ನಾಳೆ ಮೈಸೂರಿನಲ್ಲೇ ವಾಸ್ತವ್ಯ ಹೂಡಲಿದ್ದು, ಅಕ್ಟೋಬರ್ 8 ರಂದು ಬೆಳಿಗ್ಗೆ 10 ಗಂಟೆಗೆ ರಸ್ತೆ ಮೂಲಕ ಬೆಂಗಳೂರಿಗೆ ತೆರಳಲಿದ್ದಾರೆ.

ದಸರಾ ಕುಸ್ತಿ ಪಂದ್ಯಾವಳಿಗೆ ಅರ್ಜಿ ಆಹ್ವಾನ

ಮೈಸೂರು, ಅ.6– ಮೈಸೂರು ದಸರಾ ಕುಸ್ತಿ ಪಂದ್ಯಾವಳಿಗಳನ್ನು ಅ.15ರಿಂದ 21ರವರೆಗೆ (ಒಟ್ಟು 7 ದಿನಗಳ ಕಾಲ) ಶ್ರೀ ದೇವರಾಜ್ ಅರಸು ವಿವಿಧೋದ್ದೇಶ ಕ್ರೀಡಾಂಗಣ, ದೊಡ್ಡಕೆರೆ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ನಾಡ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸುವ ಕುಸ್ತಿಪಟುಗಳು ಜೋಡಿ ಕಟ್ಟುವ ಕಾರ್ಯವನ್ನು ಅ.7 ರಂದು ಬೆಳಗ್ಗೆ 10 ಗಂಟೆಗೆ ಪಿ. ಕಾಳಿಂಗರಾವ್ ಗಾನ ಮಂಟಪದಲ್ಲಿ ಆಯೋಜಿಸಲಾಗಿದೆ.

ಇದರ ಅಂಗವಾಗಿ ಪ್ರತಿದಿನ ನಾಡ ಕುಸ್ತಿ ಪಂದ್ಯಾವಳಿಗಳು ಸಂಜೆ 4 ಗಂಟೆಗೆ ನಡೆಯಲಿದೆ. ನಾಡ ಕುಸ್ತಿ ಜೋಡಿ ಕಟ್ಟುವ ಕಾರ್ಯದಲ್ಲಿ ಭಾಗವಹಿಸಲು ಇಚ್ಛಿಸುವ ಎಲ್ಲಾ ಕುಸ್ತಿಪಟುಗಳು ಅ. 8 ರಂದು ನಿಗದಿತ ಸಮಯಕ್ಕೆ ತಮ್ಮ ಇತ್ತೀಚಿನ ಎರಡು ಪಾಸ್ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ಕುಸ್ತಿ ಸಮವಸ್ತ್ರದಲ್ಲಿರುವ ಎರಡು ಭಾವಚಿತ್ರದೊಂದಿಗೆ ಭಾಗವಹಿಸತಕ್ಕದ್ದು. ಭಾಗವಹಿಸುವವರು ಕುಸ್ತಿಪಟುಗಳ ಪೈಕಿ ಸೂಕ್ತ ಕುಸ್ತಿಪಟುಗಳ ಜೋಡಿಯನ್ನು ಕಟ್ಟಲಾಗುವುದು.

ನಾಡ ಕುಸ್ತಿ ಜೋಡಿ ಕಾರ್ಯಕ್ಕೆ ಆಗಮಿಸುವ ಎಲ್ಲಾ ಕುಸ್ತಿಪಟುಗಳು ತಪ್ಪದೆ ನಿಗಧಿತ ಅರ್ಜಿ ನಮೂನೆ, ಬ್ಯಾಂಕ್ ಖಾತೆಯ ಪಾಸ್ ಬುಕ್ ಜೆರಾಕ್ಸ್ ಮತ್ತು ಆಧಾರ್ ಕಾರ್ಡ್ ಪ್ರತಿಯನ್ನು ತಮ್ಮ ಅರ್ಜಿಯೊಂದಿಗೆ ಲಗತ್ತಿಸುವಂತೆ ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕುಸ್ತಿ ಉಪ ಸಮಿತಿಯ ಕಚೇರಿಯನ್ನು ಸಂಪರ್ಕಿಸಬಹುದು ಎಂದು ದಸರಾ ಉಪ ವಿಶೇಷಾಧಿಕಾರಿಗಳು, ಕುಸ್ತಿ ಉಪಸಮಿತಿ 2023 ಹಾಗೂ ಅಪರ ಪೊಲೀಸ್ ಅಧೀಕ್ಷಕರಾದ ಡಾ. ನಂದಿನಿ ಬಿ.ಎನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾಠ ಮಾಡುವ ಶಿಕ್ಷಕರಿಗೆ ಉಳಿಗಾಲವಿಲ್ಲ...!

ರಾಜ್ಯದ ಉಳ್ಳಾಲದಲ್ಲಿ ಶಿಕ್ಷಕಿ ವಾಟರ್ ಬಾಟಲ್‌ಗೆ ಅವಧಿ ಮೀರಿದ ಮಾತ್ರೆ ಹಾಕಿದರೆ: ದೆಹಲಿಯಲ್ಲಿ ಶಿಕ್ಷಕರಿಗೆ ಚಪ್ಪಲಿಯಿಂದ ಥಳಿತ

ಮಂಗಳೂರು, ಅ.6– ಕಡಿಮೆ ಅಂಕ ನೀಡಿದರೆಂಬ ದ್ವೇಷಕ್ಕೆ ಇಬ್ಬರು ವಿದ್ಯಾರ್ಥಿನಿಯರು ಗಣಿತ ಶಿಕ್ಷಕಿಯ ನೀರಿನ ಬಾಟಲಿಗೆ ಅವಧಿ ಮೀರಿದ ಮಾತ್ರೆ ಹಾಕಿದ್ದು, ಆ ನೀರನ್ನು ಕುಡಿದು ಇಬ್ಬರು ಶಿಕ್ಷಕಿಯರು ಅಸ್ವಸ್ಥಗೊಂಡಿರುವ ಘಟನೆ ಮಂಗಳೂರಿನ ಉಳ್ಳಾಲದಲ್ಲಿ ನಡೆದಿದೆ.

ಶಾಲೆಯಲ್ಲಿ ನಡೆಸುವ ಮಧ್ಯಕಾಲೀಕ ಪರೀಕ್ಷೆಯ ಗಣಿತ ವಿಷಯದಲ್ಲಿ 6ನೇ ತರಗತಿ ವಿದ್ಯಾರ್ಥಿನಿಗೆ ಕಡಿಮೆ ಅಂಕ ಬಂದಿತ್ತು. ಅಲ್ಲದೇ ಸರಿಯಾಗಿದ್ದ ಉತ್ತರಕ್ಕೂ ಶಿಕ್ಷಕಿ ತಪ್ಪು ಹಾಕಿದ್ದಾರೆಂದು ಆಕ್ರೋಶಗೊಂಡ ವಿದ್ಯಾರ್ಥಿನಿ ತನ್ನ ಸ್ನೇಹಿತೆಯ ಸಹಾಯ ಪಡೆದು ಸ್ಟಾಫ್ ರೂಂನಲ್ಲಿ ಶಿಕ್ಷಕಿಯರಿಲ್ಲದ ಸಮಯದಲ್ಲಿ ಅವರ ನೀರಿನ ಬಾಟಲಿಗೆ ತಾನು ತಂದಿದ್ದ ಅವಧಿ ಮೀರಿದ ಮಾತ್ರೆಗಳನ್ನು ಹಾಕಿದ್ದಾಳೆ. ಈ ನೀರನ್ನು ಗಣಿತ ಶಿಕ್ಷಕಿ ಸೇರಿದಂತೆ ಮತ್ತೋರ್ವ ಶಿಕ್ಷಕಿಯೂ ಕುಡಿದಿದ್ದು, ಕೆಲಹೊತ್ತಲ್ಲೇ ಶಿಕ್ಷಕಿಯೊಬ್ಬರು ಅಸ್ವಸ್ಥಗೊಂಡಿದ್ದಾರೆ. ಮತ್ತೋರ್ವ ಶಿಕ್ಷಕಿ ಮುಖದಲ್ಲಿ ಊತವಾಗಿದೆ. ನೀರಿನ ರುಚಿಯಲ್ಲಿ ಬದಲಾವಣೆ ಕಂಡು ಸೂಕ್ಷ್ಮವಾಗಿ ಗಮನಿಸಿದಾಗ ನೀರಿನ ಬಾಟಲಿಯಲ್ಲಿ ಮಾತ್ರೆಗಳು ಪತ್ತೆಯಾಗಿವೆ. ಈ ಸಂಬಂಧ ಸಿಸಿಟಿವಿ ಪರಿಶೀಲಿಸಲಾಗಿ ವಿದ್ಯಾರ್ಥಿನಿಯರ ಕೃತ್ಯ ಬೆಳಕಿಗೆ ಬಂದಿದ್ದು, ಪ್ರಕರಣ ಸಂಬಂಧ ಶಾಲೆಯ ಆಡಳಿತ ಮಂಡಳಿ ತುರ್ತು ಎಸ್‌ಡಿಎಂಸಿ ಸಭೆ ನಡೆಸಿ ವಿದ್ಯಾರ್ಥಿನಿಯರಿಬ್ಬರಿಗೆ ಟಿಸಿ ನೀಡಲು ನಿರ್ಧರಿಸಿದೆ.

ಶಿಕ್ಷಕನಿಗೆ ಚಪ್ಪಲಿ ಏಟು: ವಿದ್ಯಾರ್ಥಿಯೋರ್ವ ತರಗತಿಯಲ್ಲೇ ಶಿಕ್ಷಕನಿಗೆ ಚಪ್ಪಲಿಯಿಂದ ಥಳಿಸಿರುವ ಘಟನೆ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಡೆದಿದ್ದು, ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಈ ವಿಡಿಯೋದಲ್ಲಿ ವಿದ್ಯಾರ್ಥಿಯೋರ್ವ ಪಾಠ ಮಾಡುತ್ತಿರುವ ಬಗ್ಗೆ ಶಿಕ್ಷಕನ ಮೇಲೆ ಏಕಾಏಕಿ ದಾಳಿ ನಡೆಸಿ ಚಪ್ಪಲಿಯಿಂದ ಹೊಡೆದಿದ್ದಾನೆ. ವಿದ್ಯಾರ್ಥಿಯಿಂದ ತಪ್ಪಿಸಿಕೊಂಡ ಶಿಕ್ಷಕ ಬೇರೆಡೆ ಹೋದರೂ ಬಿಡದ ವಿದ್ಯಾರ್ಥಿ ಬೆನ್ನತ್ತಿ ಹಲ್ಲೆ ಮುಂದುವರೆಸಿದ್ದಾನೆ. ಯಾವ ಕಾರಣಕ್ಕೆ ಈ ಘಟನೆ ನಡೆದಿದೆ ಎಂಬುದು ತಿಳಿದು ಬಂದಿಲ್ಲ.

ಅ.18, ರಾಜ್ಯ ಮಟ್ಟದ ಪಂಜ ಕುಸ್ತಿ ಸ್ಪರ್ಧೆ

ಮೈಸೂರು, ಅ.6– ದಸರಾ ಮಹೋತ್ಸವದ ಅಂಗವಾಗಿ ಅ.18ರಂದು ಬೆಳಗ್ಗೆ 8 ಗಂಟೆಗೆ ನಗರದ ಡಿ.ದೇವರಾಜ ಅರಸ್ ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಪುರುಷ, ಮಹಿಳೆ ಮತ್ತು ವಿಶೇಷ ಚೇತನರಿಗೆ ರಾಜ್ಯಮಟ್ಟದ ಪಂಜಕುಸ್ತಿ ಸ್ಪರ್ಧೆ ಏರ್ಪಡಿಸಲಾಗಿದ್ದು, ಭಾಗವಹಿಸುವವರು ಕಡ್ಡಾಯವಾಗಿ ಆಧಾರ್ ಕಾರ್ಡ್ ಹಾಗೂ ಪಾಸ್‌ಪೋರ್ಟ್ ಅಳತೆಯ ಎರಡು ಇತ್ತೀಚಿನ ಭಾವಚಿತ್ರಗಳನ್ನು ತೆಗೆದುಕೊಂಡು ಬರಬೇಕು. ಒಂದು ಬಾರಿ ಟೈಟಲ್ ಗೆದ್ದಂತಹ ಸ್ಪರ್ಧಿಗಳಿಗೆ ಈ ಸ್ಪರ್ಧೆಯಲ್ಲಿ ಅವಕಾಶವಿರುವುದಿಲ್ಲ ಹೆಚ್ಚಿನ ಮಾಹಿತಿಗಾಗಿ 9901229166 ಸಂಪರ್ಕಿಸಿ ಎಂದು ದಸರಾ ಉಪ ವಿಶೇಷಾಧಿಕಾರಿ ಕುಸ್ತಿ ಉಪಸಮಿತಿ ಮತ್ತು ಅಪರ ಪೊಲೀಸ್ ಅಧೀಕ್ಷಕಿ ಡಾ.ಬಿ.ಎನ್.ನಂದಿನಿ ಪ್ರಕಟಣೆ ತಿಳಿಸಿದೆ.

ತಮಿಳುನಾಡಿಗೆ ನೀರು ಹರಿಸುವುದನ್ನು ವಿರೋಧಿಸಿ ಮೈಸೂರಲ್ಲಿ ಭಾವಸಾರ್ ಕ್ಷತ್ರೀಯರ ಧರಣಿ



ಮೈಸೂರು,ಅ.6(ಎಂಟಿವೈ)– ರಾಜ್ಯದಲ್ಲಿ ಬರಗಾಲವಿದ್ದರೂ ತಮಿಳುನಾಡಿಗೆ ನೀರು ಬಿಡಲು ಕಾವೇರಿ ನೀರು ನಿರ್ವಹಣಾ ಸಮಿತಿ ನೀಡಿರುವ ಆದೇಶ ಖಂಡಿಸಿ ಭಾವಸಾರ ಕ್ಷತ್ರೀಯ ಸಮಾಜದವರು ಮೈಸೂರಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮೈಸೂರಿನ ಲಷ್ಕರ್ ಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ ಪಾಂಡುರಂಗ ಸ್ವಾಮಿ ದೇವಾಲಯದ ಮುಂಭಾಗದಿಂದ ಸಮಾಜದ ಮುಖಂಡರು, ಯುವಕರು, ಮಹಿಳೆಯರು ಪ್ರತಿಭಟನಾ ಮೆರವಣಿಗೆ ಆರಂಭಿಸಿ, ಅಶೋಕ ರಸ್ತೆಯ ಮೂಲಕ ಮಹಾತ್ಮಗಾಂಧಿ ವೃತ್ತ ತಲುಪಿದರು. ಬಳಿಕ ಅಲ್ಲಿ ಧರಣಿ ನಡೆಸಿ, ಪದೇ ಪದೆ ಕಾವೇರಿ ವಿಷಯದಲ್ಲಿ ಕ್ಯಾತೆ ತೆಗೆಯುತ್ತಿರುವ ತಮಿಳುನಾಡು ಸರ್ಕಾರ, ವಾಸ್ತವ ಸ್ಥಿತಿಗತಿ ಅವಲೋಕಿಸದೆ ತಮಿಳುನಾಡಿಗೆ ನೀರು ಬಿಡುವಂತೆ ಆದೇಶಿಸುತ್ತಿರುವ ಕಾವೇರಿ ನೀರು ನಿರ್ವಹಣಾ ಸಮಿತಿ ವಿರುದ್ಧ ಘೋಷಣೆ ಕೂಗಿದರು.

ಮೈಸೂರಿನ ಜನತೆಯ ತೆರಿಗೆ ಹಣದಲ್ಲಿ ಕನ್ನಂಬಾಡಿ ಕಟ್ಟೆ ಕಟ್ಟಲಾಗಿದೆ. ಮೊದಲು ನಮ್ಮ ರಾಜ್ಯಕ್ಕೆ ಆದ್ಯತೆ. ನಂತರ ಉಳಿದ ನೀರನ್ನು ತಮಿಳುನಾಡಿಗೆ ಬಿಡಬೇಕು. ಆದರೆ, ರಾಜ್ಯದಲ್ಲಿ ಭೀಕರ ಬರಗಾಲ ತಲೆದೋರಿದೆ. 195 ತಾಲೂಕುಗಳಲ್ಲಿ ಬರದ ಛಾಯೆ ಆವರಿಸಿದೆ. ಇಂತಹ ಸಮಯದಲ್ಲಿ ತಮಿಳುನಾಡಿಗೆ ನೀರು ಬಿಡಬೇಕೆಂದು ಕಾವೇರಿ ಪ್ರಾಧಿಕಾರ ಹಾಗೂ ನ್ಯಾಯಾಲಯ ಆದೇಶಿಸಿರುವುದು ಸರಿಯಲ್ಲ ಎಂದು ವಿಷಾದಿಸಿದರು.

ನಮ್ಮ ರಾಜ್ಯದ ಜನತೆಗೆ ಕುಡಿಯಲು ನೀರು ಮತ್ತು ರೈತರಿಗೆ ಬೆಳೆ ಬೆಳೆಯಲು ನೀರಿಲ್ಲವಾದ್ದರಿಂದ ಯಾವುದೇ ಕಾರಣಕ್ಕೂ ನೀರು ಬಿಡಬಾರದು. ನ್ಯಾಯಾಲಯದಲ್ಲಿ ಉತ್ತಮ ವಕೀಲರನ್ನು ನೇಮಿಸಿ ಸಮರ್ಥವಾಗಿ ವಾದ ಮಂಡನೆ ಮಾಡಿ ವಸ್ತುಸ್ಥಿತಿ ಅರ್ಥ ಮಾಡಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಅಧ್ಯಕ್ಷ ಆರ್.ವಿ.ಶಿವಾಜಿ ರಾವ್, ಕಾರ್ಯದರ್ಶಿ ರಾಕೇಶ್ ನಾಯಕ್ ಸೇರಿದಂತೆ ಹಲವರು ಭಾಗವಹಿಸಿದ್ದರು.


2023ರ ದಸರಾ ಮಹೋತ್ಸವ

ದೀಪಾಲಂಕಾರದಲ್ಲಿ ಈ ಬಾರಿ ಇನ್ನೂ ಪ್ರಜ್ವಲಿಸಲಿದೆ ಮೈಸೂರು

- ಈ ಸಲ 140 ಕಿಮೀ ಬೆಳಗಲಿವೆ ದೀಪಗಳು
- ಮೈಸೂರು ನಗರಕ್ಕೆ ಸಂಪರ್ಕ ಕಲ್ಪಿಸುವ ಹೆದ್ದಾರಿಗಳಲ್ಲಿ ಅತ್ಯಾಕರ್ಷಕ ಸ್ವಾಗತ ಕಮಾನು
- ಸರ್ಕಾರದ 5 ಗ್ಯಾರಂಟಿ ಯೋಜನೆಗಳು ವಿಶೇಷ ಆಕರ್ಷಣೆ
- ಯುನೆಸ್ಕೋ ಟ್ಯಾಗ್ ಪಟ್ಟಿಗೆ ಸೇರಿದ ಪಾರಂಪರಿಕ ದೇವಾಲಯಗಳ ವೈಭವ

● ಎಸ್.ಟಿ. ರವಿಕುಮಾರ್





ಮೈಸೂರು, ಅ. 6– ಸಾಂಪ್ರದಾಯಿಕವಾಗಿ ದಸರಾ ಮಹೋತ್ಸವ ಆಚರಿಸಲಾಗುತ್ತಿದೆಯಾದರೂ, ಈ ಬಾರಿಯೂ ಮೈಸೂರು ನಗರ ವಿದ್ಯುತ್ ದೀಪಾಲಂಕಾರದಿಂದ ಪ್ರಜ್ವಲಿಸಲಿದೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್)ವು ಈ ಬಾರಿಯ ದಸರೆಗೆ ಮೈಸೂರಿನ 140 ಕಿ.ಮೀ. ಉದ್ದದವರೆಗೆ ವಿಶೇಷ ದೀಪಾಲಂಕಾರ ಮಾಡುವ ಮೂಲಕ ದೇಶ–ವಿದೇಶಗಳ ಪ್ರವಾಸಿಗರನ್ನು ಸೆಳೆಯಲು ಮುಂದಾಗಿದೆ. 120 ಸರ್ಕಲ್ ಹಾಗೂ ಜಂಕ್ಷನ್‌ಗಳು, ಪ್ರಮುಖ ರಸ್ತೆಗಳನ್ನು ಅತ್ಯಾಕರ್ಷಕ ಎಲ್ಇಡಿ ಬಲ್ಬ್‌ಗಳಿಂದ ವಿದ್ಯುತ್ ದೀಪಾಲಂಕಾರ ಮಾಡಲು ತೀವ್ರ ತಯಾರಿ ನಡೆಸಲಾಗಿದೆ.

ಜೆಎಲ್‌ಬಿ ರಸ್ತೆ, ಸಯ್ಯಾಜಿ ರಾವ್ ರಸ್ತೆ, ಇರ್ವಿನ್ ರಸ್ತೆ, ಅಶೋಕ ರಸ್ತೆ,ಡಿ. ದೇವರಾಜ ಅರಸು ರಸ್ತೆ, ಧನ್ವಂತರಿ ರಸ್ತೆ, ಚಾಮರಾಜ ಜೋಡಿ ರಸ್ತೆ, ಮಹಾತ್ಮ ಗಾಂಧಿ ರಸ್ತೆ, ಆಲ್ಬರ್ಟ್ ವಿಕ್ಟರ್ ರಸ್ತೆ, ಅರಮನೆ ಸುತ್ತಲಿನ ರಸ್ತೆ, ಹುಣಸೂರು ರಸ್ತೆ ಬಿ.ಎನ್. ರಸ್ತೆ, ಲಲಿತ ಮಹಲ್ ರೋಡ್ ಸೇರಿದಂತೆ ಮೈಸೂರು ನಗರದ 140 ಕಿ.ಮೀ. ವರೆಗೆ ದೀಪಾಲಂಕಾರ ಮಾಡಲಾಗುತ್ತಿದೆ.

ಕೆಆರ್ ಸರ್ಕಲ್, ಅರಮನೆ ಉತ್ತರ ದ್ವಾರ, ಹಾರ್ಡಿಂಜ್ ಸರ್ಕಲ್, ನೆಹರು ಸರ್ಕಲ್, ಗಾಂಧಿ ಸ್ಕ್ವೇರ್, ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್, ದಾಸಪ್ಪ ಸರ್ಕಲ್, ಮೆಟ್ರೋಪೋಲ್ ಸರ್ಕಲ್, ಮುಡಾ ಸರ್ಕಲ್, ರಾಮಸ್ವಾಮಿ ಸರ್ಕಲ್, ಆರ್‌ಟಿಓ ಸರ್ಕಲ್, ಅಗ್ರಹಾರ ಸರ್ಕಲ್, ಸಂಸ್ಕೃತ ಪಾಠಶಾಲೆ ಸರ್ಕಲ್, ಫೈವ್‌ಲೈಟ್ ಸರ್ಕಲ್, ಫೌಂಟೇನ್ ಸರ್ಕಲ್, ಎಲ್ಐಸಿ ಸರ್ಕಲ್, ಹೈವೇ ಸರ್ಕಲ್, ಓಲ್ಡ್ ಆರ್‌ಎಂಸಿ ಸರ್ಕಲ್, ಮಣಿಪಾಲ್ ಆಸ್ಪತ್ರೆ ಜಂಕ್ಷನ್, ರಾಯಲ್ ಇನ್ ಜಂಕ್ಷನ್, ಆಕಾಶವಾಣಿ ಸರ್ಕಲ್, ಒಂಟಿಕೊಪ್ಪಲು ಸರ್ಕಲ್ ಸೇರಿದಂತೆ 120 ಸರ್ಕಲ್‌ಗಳು ವಿದ್ಯುತ್ ದೀಪಗಳಿಂದ ಝುಗಮಗಿಸಲಿವೆ.

33 ಆಕೃತಿಗಳು, 44 ಕಮಾನುಗಳನ್ನು ರಚಿಸಲಿದ್ದು, ಸರ್ಕಾರದ 5 ಗ್ಯಾರಂಟಿಗಳಾದ ಗೃಹಲಕ್ಷ್ಮಿ, ಅನ್ನಭಾಗ್ಯ, ಸ್ತ್ರೀಶಕ್ತಿ, ವಿದ್ಯಾನಿಧಿ ಹಾಗೂ ಗೃಹ ಜ್ಯೋತಿ ಯೋಜನೆಗಳನ್ನು ಬಿಂಬಿಸುವ ಆಕೃತಿಗಳು, ಯುನೆಸ್ಕೋ ಟ್ಯಾಗ್ ಪಟ್ಟಿಗೆ ಸೇರ್ಪಡೆಯಾಗಿರುವ ಸೋಮನಾಥಪುರದ ಶ್ರೀ ಚೆನ್ನಕೇಶವ ದೇವಾಲಯದ 3ಡಿ ಆಕೃತಿಗಳನ್ನೂ ಅಳವಡಿಸಿ ಪ್ರಚುರಪಡಿಸಲು ನಿಗಮವು ಮುಂದಾಗಿದೆ. ಜೊತೆಗೆ ಇಸ್ರೋ ವಿಜ್ಞಾನಿಗಳು ಸಾದರಪಡಿಸಿರುವ ಚಂದ್ರಯಾನ ಯಶಸ್ವಿ ಉಡಾವಣೆ, ಕನ್ನಡಾಂಬೆ ಹಾಗೂ ಭಾರತದ ಸಂವಿಧಾನದ ಪ್ರಸ್ತಾವನೆ ಮಾದರಿಗಳೂ ಸಹ ಈ ಬಾರಿಯ ದಸರಾ ವಿದ್ಯುತ್ ದೀಪಾಲಂಕಾರದಲ್ಲಿ ಪ್ರಜ್ವಲಿಸಲಿವೆ. ಮೈಸೂರು ರಾಜಮನೆತನದ ಅರಸರಾದ ಮುಮ್ಮಡಿ ಕೃಷ್ಣರಾಜ ಒಡೆಯರ್, ಕೆಂಪನಂಜಮ್ಮಣಿ ದೇವಿ, ರಾಜ ಜಯಚಾಮರಾಜೇಂದ್ರ ಒಡೆಯರ್, ಶ್ರೀಕಂಠದತ್ತ ನರಸಿಂಹರಾಜ ಒಡೆಯರ್, ರಾಜ್ಯದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಪ್ರತಿಕೃತಿಗಳು ದೀಪಾಲಂಕಾರದಲ್ಲಿ ಝುಗಮಗಿಸಲಿವೆ.

ಮೈಸೂರು ನಗರಕ್ಕೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ, ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆಯ ಪ್ರವೇಶ ದ್ವಾರಗಳಲ್ಲಿ ಬೃಹತ್ ಸ್ವಾಗತ ಕಮಾನುಗಳು, ಗ್ರೀನ್ ಪೆಂಡಾಲ್, ಚಾಮುಂಡಿಬೆಟ್ಟದಲ್ಲಿ 'ಸುಸ್ವಾಗತ'ಗಳೂ ಸಹ ಮೂಡಿ ಬರಲಿವೆ. ಈ ಬಾರಿ ಕಳೆದ ವರ್ಷಕ್ಕಿಂತ ಮಿಗಿಲಾದ ಅತ್ಯಾಕರ್ಷಕ ದೀಪಾಲಂಕಾರ ಮಾಡಲು ನಿಗಮವು ಭರದ ಸಿದ್ಧತೆ ನಡೆಸುತ್ತಿದೆ. 2023ರ ಅಕ್ಟೋಬರ್ 15ರಿಂದ ನವೆಂಬರ್ 4ರವರೆಗೆ 21 ದಿನಗಳ ಕಾಲ ಪ್ರತೀದಿನ ಸಂಜೆ 7ರಿಂದ ರಾತ್ರಿ 10 ಗಂಟೆವರೆಗೆ ವಿದ್ಯುತ್ ದೀಪಾಲಂಕಾರವಿರುತ್ತದೆ.

2023ರ ವಿದ್ಯುತ್ ದೀಪಾಲಂಕಾರಕ್ಕೆ 6.64 ಕೋಟಿ ರೂ. ಖರ್ಚು ಮಾಡುತ್ತಿದ್ದು, 3,199 ಕಿಲೋವ್ಯಾಟ್ ವಿದ್ಯುತ್ ಸಂಪರ್ಕ ಭಾರ ಉಳ್ಳ 1,43,961 ಯೂನಿಟ್ ವಿದ್ಯುತ್ ಬಳಕೆಯಾಗುವ ನಿರೀಕ್ಷೆ ಇದೆ. ಕಳೆದ ವರ್ಷ 2022ರ ದಸರೆಯಲ್ಲಿ 130 ಕಿ.ಮೀ. ಉದ್ದ, 119 ಸರ್ಕಲ್‌ಗಳು, 30 ಪ್ರತಿಕೃತಿಗಳನ್ನು ಅಳವಡಿಸಲಾಗಿತ್ತು. 6 ಕೋಟಿ ರೂ. ವೆಚ್ಚ ಮಾಡಿ 1,30,874 ಯೂನಿಟ್ ವಿದ್ಯುತ್ ಬಳಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಕಾವೇರಿ ಹೋರಾಟಕ್ಕೆ ಮೈಸೂರಲ್ಲಿ ಚಿನ್ನ ಬೆಳ್ಳಿ ಕೆಲಸಗಾರರ ಬೆಂಬಲ

ತಮಿಳುನಾಡಿನ ಕ್ಯಾತೆಗೆ ಖಂಡನೆ; ಕೇಂದ್ರದ ಮಧ್ಯಪ್ರವೇಶಕ್ಕೆ ಆಗ್ರಹ



ಮೈಸೂರು,ಅ.6(ಎಂಟಿವೈ)– ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಕರ್ನಾಟಕಕ್ಕೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ಕಾವೇರಿ ಕ್ರಿಯಾ ಸಮಿತಿಯು ಪುರಭವನ ಮುಂಭಾಗದ ದೊಡ್ಡ ಗಡಿಯಾರದ ಬಳಿ ನಡೆಸುತ್ತಿರುವ ಪ್ರತಿಭಟನೆಗೆ ಶುಕ್ರವಾರ ಮೈಸೂರು ಜಿಲ್ಲಾ ಚಿನ್ನ, ಬೆಳ್ಳಿ ಕೆಲಸಗಾರರ ಸಂಘ ಬೆಂಬಲ ನೀಡಿತು.

ಕ್ರಿಯಾ ಸಮಿತಿಯ 7ನೇ ದಿನದ ಸರಣಿ ಪ್ರತಿಭಟನೆಯಲ್ಲಿ ಚಿನ್ನ, ಬೆಳ್ಳಿ ಕೆಲಸಗಾರರು ಕಾವೇರಿ ನಮ್ಮದು ಎಂದು ಘೋಷಣೆ ಕೂಗಿದರು. ಅಲ್ಲದೆ, ಕರ್ನಾಟಕದಲ್ಲಿ ಬರ ಪರಿಸ್ಥಿತಿ ತೀವ್ರಗೊಂಡಿದೆ. ಜಲಾಶಯಗಳಲ್ಲಿ ನೀರಿಲ್ಲದಿದ್ದರೂ ತಮಿಳುನಾಡಿಗೆ ನೀರು ಬಿಡುವಂತೆ ಆದೇಶಿಸಿರುವುದು ಖಂಡನೀಯ. ಮೊದಲಿಂದಲೂ ಕಾವೇರಿ ನೀರಿನ ವಿಚಾರದಲ್ಲಿ ಕರ್ನಾಟಕಕ್ಕೆ ನಿರಂತರವಾಗಿ ಅನ್ಯಾಯ ಮಾಡಲಾಗುತ್ತಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ರಾಜ್ಯದಲ್ಲಿ ಕುಡಿಯಲು ನೀರಿಲ್ಲದಿದ್ದರೂ, ತಮಿಳುನಾಡಿನ ಒತ್ತಾಯಕ್ಕೆ ಮಣಿದು, ಅಲ್ಲಿನ ಮೂರನೇ ಬೆಳೆಗೆ ನೀರು ಬಿಡಲು ಆದೇಶಿಸಿರುವುದು ಖಂಡನೀಯ. ತಮಿಳುನಾಡು ಕಾವೇರಿ ಕಣಿವೆಯ ವಸ್ತುಸ್ಥಿತಿ ತಿಳಿದಿದ್ದರೂ ನಮಗೆ ನೀರು ಬಿಡಿ ಎಂದು ಹಠ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿ. ಕರ್ನಾಟಕದ 195 ತಾಲೂಕುಗಳು ಬರಪೀಡಿತವಾಗಿದ್ದರೂ ಸರ್ಕಾರ ರೈತರ ನೆರವಿಗೆ ಧಾವಿಸದೆ ನಿರ್ಲಕ್ಷ್ಯ ವಹಿಸಿದೆ. ತಮಿಳುನಾಡು ಸರ್ಕಾರದ ಒತ್ತಡಕ್ಕೆ ಮಣಿದು ರಾಜ್ಯದ ಹಿತವನ್ನು ಬಲಿ ಕೊಡಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ, ಕೂಡಲೇ ಮಧ್ಯಸ್ಥಿಕೆ ವಹಿಸಿ ಕಾವೇರಿ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ನ್ಯಾಯ ಮಂಡಳಿ ರದ್ದು ಮಾಡಿ ರಾಷ್ಟ್ರೀಯ ಜಲ ನೀತಿ ರೂಪಿಸಬೇಕು. ತಮಿಳುನಾಡಿಗೆ ವಸ್ತುಸ್ಥಿತಿ ತಿಳಿಸಿ ಹೆಚ್ಚು ಮಳೆಯಾದರೆ ಮಾತ್ರ ತಮಿಳುನಾಡಿಗೆ ನೀರು ಬಿಡುವ ಶಾಶ್ವತ ಒಪ್ಪಂದ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕಾವೇರಿ ಕ್ರಿಯಾ ಸಮಿತಿಯ ಎಂ.ಮೋಹನಕುಮಾರ್ ಗೌಡ, ಜಯಪ್ರಕಾಶ್, ಮೂಗೂರು ನಂಜುಂಡಸ್ವಾಮಿ, ತೇಜೇಶ್ ಲೋಕೇಶ್ ಗೌಡ, ಚಿನ್ನ ಬೆಳ್ಳಿ ಕೆಲಸಗಾರರ ಸಂಘದ ಸುರೇಶ್ ಗೋಲ್ಡ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಪೊಲೀಸ್ ಶ್ವಾನದಳದ 'ಲೈಕಾ' ಇನ್ನಿಲ್ಲ

ಸಕಲ ಗೌರವದೊಂದಿಗೆ ಅಂತ್ಯಕ್ರಿಯೆ





ಮೈಸೂರು, ಅ. 6(ಆರ್‌ಕೆ)– ಸ್ಫೋಟಕ ಪತ್ತೆ ಕಾರ್ಯದಲ್ಲಿ ಸಕ್ರಿಯವಾಗಿದ್ದ ಮೈಸೂರು ಜಿಲ್ಲಾ ಪೊಲೀಸ್ ಶ್ವಾನದಳದ ಹೆಣ್ಣು ನಾಯಿ 'ಲೈಕಾ' ಅನಾರೋಗ್ಯದಿಂದ ಇಂದು ಮುಂಜಾನೆ ಸಾವನ್ನಪ್ಪಿದೆ.

2014ರ ಮೇ 10ರಂದು ಜನಿಸಿದ 9 ವರ್ಷದ ಲಾಬ್ರಾಡರ್ ತಳಿಯ ಲೈಕಾಳ ಅಂತ್ಯಕ್ರಿಯೆ ಇಂದು ಮೈಸೂರಿನ ಪೊಲೀಸ್ ಭವನದ ಹಿಂಭಾಗ ಜಿಲ್ಲಾ ಪೊಲೀಸ್ ಶ್ವಾನದಳದ ಡಾಗ್ ಕೆನಲ್ ಸ್ಥಳದಲ್ಲಿ ಸಕಲ ಪೊಲೀಸ್ ಗೌರವಗಳೊಂದಿಗೆ ನೆರವೇರಿತು. ಎಸ್ಪಿ ಸೀಮಾ ಲಾಟ್ಕರ್, ಅಡಿಷನಲ್ ಎಸ್ಪಿ ಡಾ. ನಂದಿನಿ, ಡಿಎಆರ್‌ನ ಪೊಲೀಸ್ ಇನ್ಸ್‌ಪೆಕ್ಟರ್ ಪ್ರದೀಪ್ ಕುಮಾರ್, ಶ್ವಾನದಳದ ಉಸ್ತುವಾರಿ ಆರ್.ಜಿ. ಕೂಡಿಗಪ್ಪ, ಲೈಕಾ ಶ್ವಾನದ ಹ್ಯಾಂಡ್ಲರ್ ಎಂ. ಸತೀಶ್ ಮತ್ತು ಮಣಿಕಂಠ ಹಾಗೂ ಸಿಬ್ಬಂದಿ ಅಂತ್ಯಕ್ರಿಯೆ ವೇಳೆ ಉಪಸ್ಥಿತರಿದ್ದರು.

2016ರ ಜುಲೈನಲ್ಲಿ ದಕ್ಷಿಣ ವಲಯದಿಂದ ಆಯೋಜಿಸಿದ್ದ ದಕ್ಷಿಣ ವಲಯ ಮಟ್ಟದ ಪೊಲೀಸ್ ಕರ್ತವ್ಯ ಕೂಟದ ಶ್ವಾನದಳ ಸ್ಫೋಟಕ ಪತ್ತೆ ಸ್ಪರ್ಧೆಯಲ್ಲಿ ಚಿನ್ನದ ಪದಕ, 2017ರ ನವೆಂಬರ್ 28 ಮತ್ತು 29ರಂದು ನಡೆದ ಸ್ಪರ್ಧೆಯ ಎಕ್ಸ್‌ಕ್ಲೂಸಿವ್ ಡಾಗ್ ಟ್ರೇಡ್ ಟೆಸ್ಟ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಹಾಗೂ 2020ರ ಫೆಬ್ರವರಿ 19 ಮತ್ತು 20ರಂದು ಆಯೋಜಿಸಿದ್ದ ಸ್ಪರ್ಧೆಯಲ್ಲಿ ಈ ಶ್ವಾನಕ್ಕೆ ಕಂಚಿನ ಪದಕ ಲೈಕಾಗೆ ಲಭಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಶ್ರೀರಂಗಪಟ್ಟಣ ದಸರಾ: ಎರಡನೇ ಬಾರಿ ಅಂಬಾರಿ ಹೊರಲಿದ್ದಾನೆ ಮಹೇಂದ್ರ

ವಿಜಯ, ವರಲಕ್ಷ್ಮೀ ಸಾಥ್



ಮೈಸೂರು, ಅ.6(ಎಂಟಿವೈ)– ಶ್ರೀರಂಗಪಟ್ಟಣದಲ್ಲಿ ಅ.16ರಂದು ನಡೆಯುವ ದಸರಾ ಮಹೋತ್ಸವದಲ್ಲಿ ಅಂಬಾರಿ ಹೊರಲು ಮಹೇಂದ್ರ(41)ನ ಆಯ್ಕೆ ಮಾಡಲಾಗಿದ್ದು, ಅದಕ್ಕೆ ಹಿರಿಯ ಕುಮ್ಕಿ ಆನೆಗಳಾದ ವರಲಕ್ಷ್ಮಿ ಮತ್ತು ವಿಜಯ ಸಾಥ್ ನೀಡಲಿದ್ದಾರೆ.

ನಾಡಹಬ್ಬ ಮೈಸೂರು ದಸರಾ ಮಹೋತ್ಸವಕ್ಕೂ ಮುನ್ನ ಶ್ರೀರಂಗಪಟ್ಟಣ ದಸರಾ ಆಚರಿಸುವ ಪದ್ಧತಿ ಅನುಸರಿಸಲಾಗುತ್ತಿದೆ. ಮೈಸೂರು ಸಾಮ್ರಾಜ್ಯಕ್ಕೂ ಮುನ್ನ ಶ್ರೀರಂಗಪಟ್ಟಣದಲ್ಲಿ ದಸರಾ ಆಚರಿಸುತ್ತಿದ್ದ ಕುರುಹಾಗಿ ಈಗಲೂ ಅಲ್ಲಿ ದಸರಾ ಆಚರಿಸಲಾಗುತ್ತಿದೆ. ಮೈಸೂರು ದಸರಾ ಮಾದರಿಯಲ್ಲೇ ಅಲ್ಲಿಯೂ ದಸರಾ ಆಚರಿಸುವುದರಿಂದ ಈ ಬಾರಿ ಶ್ರೀರಂಗಪಟ್ಟಣದ ದಸರೆಯಲ್ಲಿ ಅಂಬಾರಿ ಹೊರಲು ಮಹೇಂದ್ರನನ್ನು ಕಳುಹಿಸಿಕೊಡಲಾಗುತ್ತಿದೆ. ಮತ್ತಿಗೂಡು ಶಿಬಿರದ ಮಹೇಂದ್ರ ಅಲ್ಲಿನ ಎರಡನೇ ದಸರಾದಲ್ಲಿ ಪಾಲ್ಗೊಳ್ಳುತ್ತಿದ್ದಾನೆ. ಕಳೆದ ಬಾರಿ ಕಿಕ್ಕಿರಿದ ಜನರ ಸಮ್ಮುಖದಲ್ಲಿ ಅಂಬಾರಿ ಹೊತ್ತು ಸೈ ಎನಿಸಿಕೊಂಡಿತ್ತು. ಈ ಬಾರಿಯೂ ಮಹೇಂದ್ರನನ್ನೇ ಆಯ್ಕೆ ಮಾಡಲಾಗಿದ್ದು, ಅದಕ್ಕೆ ಕುಮ್ಕಿ ಆನೆಗಳಾದ ವಿಜಯ ಹಾಗೂ ವರಲಕ್ಷ್ಮೀ ಸಾಥ್ ನೀಡಲಿದ್ದಾರೆ. ಈಗಾಗಲೇ ಮೂರು ಆನೆಗಳನ್ನು ಕಳುಹಿಸುವಂತೆ ಮಂಡ್ಯ ಜಿಲ್ಲಾಧಿಕಾರಿಗಳು ಪತ್ರ ಬರೆದಿದ್ದಾರೆ. ಅದಕ್ಕೆ ಪೂರಕವಾಗಿ ಡಿಸಿಎಫ್ ಸೌರಭ್ ಕುಮಾರ್ ಇದಕ್ಕೆ ಅನುಮತಿ ನೀಡುವಂತೆ ಪಿಸಿಸಿಎಫ್ ಅವರಿಗೆ ಪತ್ರ ಬರೆದಿದ್ದಾರೆ. ಇನ್ನೆರಡು ದಿನದಲ್ಲಿ ಅನುಮತಿ ದೊರೆಯಲಿದ್ದು, ಅ.15ರಂದು ಮಧ್ಯಾಹ್ನ ಮೂರು ಆನೆಗಳು ಶ್ರೀರಂಗಪಟ್ಟಣಕ್ಕೆ ತೆರಳಲಿವೆ ಎಂದು ಹೇಳಲಾಗಿದೆ.

ನೇಣು ಬಿಗಿದುಕೊಂಡು ವಿದ್ಯಾರ್ಥಿನಿ ಆತ್ಮಹತ್ಯೆ

ಮೈಸೂರು, ಅ. 6(ಆರ್‌ಕೆ)– ಖಿನ್ನತೆಯಿಂದ ಬಳಲುತ್ತಿದ್ದ ವಿದ್ಯಾರ್ಥಿನಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಚಾಮುಂಡಿಪುರಂನಲ್ಲಿ ಬುಧವಾರ ಮಧ್ಯಾಹ್ನ ಸಂಭವಿಸಿದೆ. ಚಾಮುಂಡಿಪುರಂ ನಿವಾಸಿ ಸುಧಾಲಕ್ಷ್ಮಿ(23) ನೇಣಿಗೆ ಶರಣಾದವರು. ದಕ್ಷಿಣ ಕನ್ನಡ ಜಿಲ್ಲೆ ಉಜಿರೆಯ ಕಾಲೇಜೊಂದರಲ್ಲಿ ನ್ಯಾಚುರೋಪತಿ ಮತ್ತು ಯೋಗ ಕೋರ್ಸ್ ಓದುತ್ತಿದ್ದ ಆಕೆ ಕೆಲ ತಿಂಗಳಿಂದ ಖಿನ್ನತೆಗೊಳಗಾಗಿ ಅನಾರೋಗ್ಯಕ್ಕೆ ತುತ್ತಾಗಿದ್ದರು. ಅವರ ಪೋಷಕರು ಪರಿಸ್ಥಿತಿ ಅರಿತು ಆಕೆಯನ್ನು ಕೆಲ ದಿನಗಳ ಹಿಂದೆ ಮೈಸೂರಿಗೆ ಕರೆತಂದಿದ್ದರು. ಬುಧವಾರ ಮಧ್ಯಾಹ್ನ ತಂದೆ–ತಾಯಿ ಮನೆಯಲ್ಲಿಲ್ಲದ ವೇಳೆ ಕೊಠಡಿಯಲ್ಲಿ ನೇಣು ಬಿಗಿದುಕೊಂಡು ಸುಧಾಲಕ್ಷ್ಮಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಅದಕ್ಕೂ ಮೊದಲು 'ನನ್ನ ಸಾವಿಗೆ ನಾನೇ ಕಾರಣ' ಎಂದು ಆಕೆ ಡೆತ್ ನೋಟ್ ಬರೆದಿಟ್ಟಿದ್ದಾಳೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಕೆ.ಆರ್. ಠಾಣೆ ಇನ್ಸ್‌ಪೆಕ್ಟರ್ ನಾಗೇಗೌಡ, ಸಿಬ್ಬಂದಿಗಳೊಂದಿಗೆ ಹಾಜರಾಗಿ ಮಹಜರು ನಡೆಸಿದರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಗುರುವಾರ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹವನ್ನು ವಾರಸುದಾರರಿಗೆ ಒಪ್ಪಿಸಿದರು.

ಫಿರಂಗಿ ದಳದಿಂದ ಒಣ ತಾಲೀಮು: ದಿನಕ್ಕೆ ಎರಡು ಬಾರಿ ಪ್ರಯೋಗ

- ನಗರ ಸಶಸ್ತ್ರ ಪಡೆಯ 30 ಸಿಬ್ಬಂದಿಯುಳ್ಳ ಫಿರಂಗಿ ದಳ
- ಅರಮನೆ ಮುಂಭಾಗದ ಪ್ರಾಂಗಣದಲ್ಲಿ ತರಬೇತಿ
- ನಿಮಿಷದಲ್ಲಿ 21 ಬಾರಿ ಕುಶಾಲತೋಪು ಸಿಡಿಸುವ ತರಬೇತಿ



ಮೈಸೂರು, ಅ.6(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಜಂಬೂಸವಾರಿಗೆ ಪುಷ್ಪಾರ್ಚನೆ ವೇಳೆ ಕುಶಾಲತೋಪು ಸಿಡಿಸುವ ನೈಪುಣ್ಯ ಕರಗತ ಮಾಡಿಕೊಳ್ಳಲು ಫಿರಂಗಿ ದಳ ಅರಮನೆ ಆವರಣದಲ್ಲಿ ಬಿರುಸಿನಿಂದ ಒಣ ತಾಲೀಮು ನಡೆಸುತ್ತಿದೆ.

ಕುಶಾಲತೋಪು ಸಿಡಿಸಲು ಬಳಸುವ ಫಿರಂಗಿಗಳಿಗೆ ಎರಡು ದಿನದ ಹಿಂದಷ್ಟೇ ಪೂಜೆ ಸಲ್ಲಿಸಲಾಗಿತ್ತು. ನವರಾತ್ರಿ ಆರಂಭಕ್ಕೆ ಕೇವಲ 9 ದಿನ ಮಾತ್ರ ಇದ್ದು, ಜಂಬೂಸವಾರಿಗೆ 19 ದಿನ ಮಾತ್ರವಿದೆ ಈ ಹಿನ್ನೆಲೆಯಲ್ಲಿ ಫಿರಂಗಿ ದಳವನ್ನು ಸಜ್ಜುಗೊಳಿಸಲು ಕಠಿಣ ತಾಲೀಮು ನಡೆಸಲಾಗುತ್ತಿದ್ದು, 30 ಸಿಬ್ಬಂದಿ ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಅರಮನೆ ಆವರಣದಲ್ಲಿ ಒಣ ತಾಲೀಮು ನಡೆಸುತ್ತಿದೆ.

ಅ.24ರ ಜಂಬೂಸವಾರಿ ಮೆರವಣಿಗೆ ದಿನ ಅಭಿಮನ್ಯು ಮೇಲೆ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿ ಕಂಗೊಳಿಸಲಿರುವ ನಾಡದೇವಿ ಶ್ರೀ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಗಣ್ಯರು ಪುಷ್ಪಾರ್ಚನೆ ಮಾಡುವ ವೇಳೆ 21 ಬಾರಿ ಕುಶಾಲತೋಪು ಸಿಡಿಸಿ, ಗೌರವ ಸಮರ್ಪಿಸಲಾಗುತ್ತದೆ. ಪುಷ್ಪಾರ್ಚನೆ ವೇಳೆ ಪೊಲೀಸ್ ಬ್ಯಾಂಡ್ ವಾದನದ ತಂಡ ರಾಷ್ಟ್ರಗೀತೆ ನುಡಿಸುವ ಸಂದರ್ಭದಲ್ಲಿ ಕುಶಾಲತೋಪು ಸಿಡಿಸುವ ಪದ್ಧತಿ ರೂಢಿಯಲ್ಲಿದ್ದು, ಒಂದು ನಿಮಿಷದಲ್ಲಿ ನಿಗದಿತ 21 ಕುಶಾಲತೋಪು ಸಿಡಿಸುವ ಸವಾಲಿನ ಕೆಲಸ ಫಿರಂಗಿದಳದ ಮುಂದಿದೆ. ಈ ಹಿನ್ನೆಲೆಯಲ್ಲಿ ಸಿಡಿಮದ್ದು ಸಿಡಿಸುವ ಚಾಕಚಕ್ಯತೆಗೆ ಕಠಿಣ ತಾಲೀಮಿನ ಅವಶ್ಯಕತೆ ಇದೆ. ಇದಕ್ಕಾಗಿ 7 ಫಿರಂಗಿ ಬಳಸಲಾಗುತ್ತಿದ್ದು, ಮೂರು ಸುತ್ತಿನಲ್ಲಿ ಸಿಡಿಮದ್ದು ಸಿಡಿಸಲಾಗುತ್ತದೆ.

ಫಿರಂಗಿದಳ ತಂಡ: ಈ ಬಾರಿ ಅನುಭವಿ ಹಾಗೂ ನುರಿತ ಸಿಬ್ಬಂದಿಗಳಿರುವ ಫಿರಂಗಿ ದಳವನ್ನು ರಚಿಸಲಾಗಿದೆ. ಸಶಸ್ತ್ರ ಮೀಸಲು ಪಡೆಯ ಎಸಿಪಿ ಅಶೋಕ್ ಕುಮಾರ್, ಆರ್‌ಎಸ್‌ಐ ಸುರೇಶ್ ನೇತೃತ್ವದಲ್ಲಿ ಎಆರ್‌ಎಸ್‌ಐಗಳಾದ ಸಿದ್ದರಾಜು, ಕೆ.ಕುಮಾರಸ್ವಾಮಿ, ಗಿರೀಶ್‌ಕುಮಾರ್, ಕೆ.ಕುಮಾರ್, ಎಹೆಚ್‌ಸಿಗಳಾದ ಕೆ.ಎಂ.ಚಿಕ್ಕಣ್ಣ, ಆನಂದಕುಮಾರ್, ಸಿದ್ದೇಗೌಡ, ಶ್ರೀನಿವಾಸಚಾರಿ, ಮಂಜುನಾಥ, ಮಂಜು, ಮೋಹನ್ ಕುಮಾರ್, ಎಪಿಸಿಗಳಾದ ರತನ್‌ಕುಮಾರ್, ಮಲ್ಲಯ್ಯ, ಮಲ್ಲಿಕಾರ್ಜುನ, ವಿಷಕಂಠ, ಶಿವಕುಮಾರ್, ಅಣ್ಣೇಗೌಡ, ಮಂಜುನಾಥ್, ಬಸವರಾಜು, ಕೆಂಡೇಗೌಡ, ರವಿಚಂದ್ರನ್, ಆರೋಕ್ಯರಾಜ್, ಅಭಿಜಿತ್, ಹೆಚ್.ಸಿ. ಮಹೇಶ್, ಚಿನ್ನಸ್ವಾಮಿ, ನಾಗರಾಜು, ಮಹೇಶ್, ಜಿ.ಎಲ್.ವಿನಯ್‌ಕುಮಾರ್, ರಮೇಶ್, ರಾಮಣ್ಣ ಅವರನ್ನು ತಂಡಕ್ಕೆ ನಿಯೋಜಿಸಲಾಗಿದೆ.

ವಿಮೆಗೆ ಕ್ರಮ: ಪ್ರತಿವರ್ಷದಂತೆ ಈ ಬಾರಿಯೂ ಫಿರಂಗಿದಳದ ಸಿಬ್ಬಂದಿಗೆ ವಿಮೆ ಮಾಡಿಸಲಾಗುತ್ತಿದ್ದು, ಮುಂದಿನ ವಾರ ಆರಂಭವಾಗುವ ಸಿಡಿಮದ್ದು ಸಿಡಿಸುವ ತಾಲೀಮಿನ ವೇಳೆ ವಿಮಾ ಅವಧಿ ಚಾಲನೆಯಾಗಲಿದ್ದು, ಜಂಬೂಸವಾರಿ ಮುಗಿದು ಅ.26ರಂದು ಚಾಮುಂಡಿಬೆಟ್ಟದಲ್ಲಿ ನಡೆಯುವ ರಥೋತ್ಸವ ಕಾರ್ಯಕ್ರಮ ಮುಗಿಯುವವರೆಗೂ ಚಾಲ್ತಿಯಲ್ಲಿರುತ್ತದೆ. ಬೆಟ್ಟದಲ್ಲಿ ನಡೆಯುವ ರಥೋತ್ಸವದ ವೇಳೆಯೂ ಚಿಕ್ಕ ಟ್ರ್ಯಾಲಿ ಮೂಲಕ ಸಿಡಿಮದ್ದು ಸಿಡಿಸುವ ಸಂಪ್ರದಾಯವಿದ್ದು, ಅದಕ್ಕೂ ಫಿರಂಗಿ ದಳದ ಸಿಬ್ಬಂದಿಗಳನ್ನೇ ಬಳಸಿಕೊಳ್ಳಲಾಗುತ್ತದೆ.

ಮೈಸೂರು ಮಿತ್ರ ಶನಿವಾರ 7 ಅಕ್ಟೋಬರ್ 2023

ಕೊಡಗು ದಸರಾ ರಜೆಯಲ್ಲಿ ಮಾರ್ಪಾಡು

ಅ.10ರಿಂದ ಅ.25ರವರೆಗೆ ದಸರಾ ರಜೆ ಘೋಷಣೆ

ಮಡಿಕೇರಿ, ಅ.6– ಕೊಡಗಿನ ಶಾಲೆಗಳಿಗೆ ದಸರಾ ರಜೆ ಘೋಷಿಸಿ ಸಾರ್ವಜನಿಕರ ಶಿಕ್ಷಣ ಇಲಾಖೆ ಈ ಮೊದಲು ಹೊರಡಿಸಿದ್ದ ಸುತ್ತೋಲೆಯಲ್ಲಿ ಮಾರ್ಪಾಡು ಮಾಡಲಾಗಿದ್ದು, ಅ.10ರಿಂದ ಅ.25ರವರೆಗೆ ರಜೆ ವಿಸ್ತರಣೆ ಮಾಡಲಾಗಿದೆ.

ಈ ಮೊದಲು ಅ.8ರಿಂದ ಅ.24ರವರೆಗೆ ಶಾಲೆಗಳಿಗೆ ರಜೆ ಘೋಷಿಸಲಾಗಿತ್ತು. ಇದೀಗ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವಿರಾಜಪೇಟೆ ಕ್ಷೇತ್ರ ಶಾಸಕ ಎ.ಎಸ್. ಪೊನ್ನಣ್ಣ ಸೂಚನೆ ಮೇರೆಗೆ ರಜೆ ದಿನಗಳಲ್ಲಿ ಮಾರ್ಪಾಡುಗೊಳಿಸಿ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಅ.24ರಂದು ಮಧ್ಯ ರಾತ್ರಿ ಮಡಿಕೇರಿ, ಗೋಣಿಕೊಪ್ಪಲುಗಳಲ್ಲಿ ದಸರಾ ನಡೆಯುವ ಹಿನ್ನೆಲೆಯಲ್ಲಿ ದಸರಾ ವೀಕ್ಷಿಸಿ ಮರುದಿನ ಶಾಲೆಗಳಿಗೆ ತೆರಳಲು ವಿದ್ಯಾರ್ಥಿಗಳಿಗೆ ಕಷ್ಟ ಸಾಧ್ಯವಾಗುವ ಕಾರಣ ಅ.25ರ ದಸರಾ ಮರು ದಿನಕ್ಕೂ ರಜೆ ವಿಸ್ತರಿಸಲಾಗಿದೆ. ಈ ಕುರಿತು ಕೊಡಗು ಜಿಲ್ಲಾಧಿಕಾರಿ ವೆಂಕಟ್‌ರಾಜ ಆದೇಶ ಹೊರಡಿಸಿದ್ದು, ಅ.26ರಿಂದ ಜಿಲ್ಲೆಯ ಎಲ್ಲಾ ಪ್ರಾಥಮಿಕ, ಪ್ರೌಢಶಾಲೆಗಳೂ ಪುನರಾರಂಭವಾಗಲಿವೆ.

ವಿಹೆಚ್‌ಪಿಯ ಶೌರ್ಯ ಜಾಗರಣಾ ರಥಯಾತ್ರೆಗೆ ಮಡಿಕೇರಿಯಲ್ಲಿ ಅದ್ದೂರಿ ಸ್ವಾಗತ



ಮಡಿಕೇರಿ,ಅ.6– ವಿಶ್ವ ಹಿಂದೂ ಪರಿಷತ್ ವತಿಯಿಂದ ಹಮ್ಮಿಕೊಳ್ಳಲಾಗಿರುವ ಶೌರ್ಯ ಜಾಗರಣಾ ರಥಯಾತ್ರೆ ಮಡಿಕೇರಿಗೆ ಆಗಮಿಸಿದ ಸಂದರ್ಭ ಹಿಂದೂ ಸಂಘಟನೆಗಳ ಪ್ರಮುಖರು ಮತ್ತು ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿದರು.

ಕೇರಳದ ಚಂಡೆ ವಾದ್ಯಗಳೊಂದಿಗೆ ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತಕ್ಕೆ ಆಗಮಿಸಿದ ಶೌರ್ಯ ಜಾಗರಣಾ ರಥಕ್ಕೆ ಮಾಜಿ ಶಾಸಕ ಕೆ.ಜಿ. ಬೋಪಯ್ಯ ಅವರು ತೆಂಗಿನ ಕಾಯಿ ಒಡೆದು, ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿದರು. ಬಳಿಕ ವಾದ್ಯಗೋಷ್ಠಿಯೊಂದಿಗೆ ಮೆರವಣಿಗೆ ಮೂಲಕ ಜನರಲ್ ತಿಮ್ಮಯ್ಯ ವೃತ್ತದವರೆಗೆ ಮೆರವಣಿಗೆ ಸಾಗಿತು. ಈ ಸಂದರ್ಭ ವೇದ ಮಂತ್ರ ಘೋಷಗಳ ಸಹಿತ ರಥಕ್ಕೆ ಪೂಜೆ ಸಲ್ಲಿಸಲಾಯಿತು.

ಬಳಿಕ ಸಂಪಾಜೆ ಮಾರ್ಗವಾಗಿ ಪುತ್ತೂರು ಕಡೆಗೆ ರಥವನ್ನು ಬೀಳ್ಕೊಡಲಾಯಿತು. ಇದಕ್ಕೂ ಮುನ್ನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಪ್ರತಿಮೆಗೆ ಗಣ್ಯರು ಸಹಿತ ಸಂಘಟನೆಗಳ ಪ್ರಮುಖರು ಪುಷ್ಪಾರ್ಚನೆ ನಡೆಸಿ ಗೌರವ ಸಮರ್ಪಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ವಿಶ್ವ ಹಿಂದೂ ಪರಿಷತ್ ಜಿಲ್ಲಾಧ್ಯಕ್ಷ ಕೃಷ್ಣಮೂರ್ತಿ, ವಿಶ್ವ ಹಿಂದೂ ಪರಿಷತ್ ಶ್ರೀ ಕೃಷ್ಣ ಜನ್ಮಾಷ್ಟಮಿ ಸಂವತ್ಸರದಲ್ಲಿ 1964ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, 2023–24ರಲ್ಲಿ ಷಷ್ಠಿ ಪೂರ್ಣ ವರ್ಷಾಚರಣೆ ನಡೆಸುತ್ತಿದೆ. ಇದರ ಅಂಗವಾಗಿ ಇಡೀ ದೇಶಾದ್ಯಂತ ಶೌರ್ಯ ಜಾಗರಣಾ ರಥ ಯಾತ್ರೆ ನಡೆಸಲಾಗುತ್ತಿದ್ದು, ಸಮಾಜದ ವಿವಿಧ ಸ್ತರಗಳಲ್ಲಿರುವ ಹಿಂದೂಗಳನ್ನು ಒಂದು ಗೂಡಿಸಿಸುವ ಉದ್ದೇಶ ರಥಯಾತ್ರೆ ಹೊಂದಿದೆ ಎಂದು ಹೇಳಿದರು.

ರಾಷ್ಟ್ರಹಿತದ ಕಾರ್ಯ ಮಾಡುವ ಮೂಲ ಉದ್ದೇಶವನ್ನೂ ರಥಯಾತ್ರೆ ಒಳಗೊಂಡಿದೆ ಎಂದು ವಿವರಿಸಿದರು. ಈ ಸಂದರ್ಭ ಮಾಜಿ ಶಾಸಕ ಕೆ.ಜಿ. ಬೋಪಯ್ಯ ವಿಶ್ವ ಹಿಂದೂ ಪರಿಷತ್‌ನ ಮುಖಂಡರಾದ ಸುರೇಶ್ ಮುತ್ತಪ್ಪ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಅರುಣ್ ಕುಮಾರ್, ಜಿಲ್ಲಾ ವಕ್ತಾರ ಮಹೇಶ್ ಜೈನಿ, ನಗರಾಧ್ಯಕ್ಷ ಮನು ಮಂಜುನಾಥ್, ನಗರ ಸಭಾ ಉಪಾಧ್ಯಕ್ಷೆ ಸವಿತಾ ರಾಕೇಶ್, ಸದಸ್ಯ ಕೆ.ಎಸ್.ರಮೇಶ್, ಅಪ್ಪಣ್ಣ, ಸಬಿತಾ, ಕಲಾವತಿ, ಬಿಜೆಪಿ ಪ್ರಮುಖರಾದ ಅರುಣ್ ಕುಮಾರ್, ಜಗದೀಶ್, ಮಹಿಳಾ ಮೋರ್ಚಾದ ಕನ್ನಿಕೆ, ಕುಡೆಕಲ್ ಸವಿತಾ ಸಂತೋಷ್ ಸೇರಿ ನೂರಾರು ಮಂದಿ ಪಾಲ್ಗೊಂಡಿದ್ದರು.

ಕುಶಾಲನಗರದಲ್ಲೂ ಶೌರ್ಯ ಜಾಗರಣಾ ರಥಯಾತ್ರೆಗೆ ಪುಷ್ಪಾರ್ಚನೆ



ಕುಶಾಲನಗರ, ಅ.6– ವಿಶ್ವ ಹಿಂದೂ ಪರಿಷದ್, ಭಜರಂಗದಳದ ಶೌರ್ಯ ಜಾಗರಣಾ ರಥಯಾತ್ರೆ ಕುಶಾಲನಗರಕ್ಕೆ ಆಗಮಿಸಿದಾಗ ಸ್ವಾಗತ ನೀಡಲಾಯಿತು. ಜಿಲ್ಲೆಗೆ ಆಗಮಿಸಿದ ರಥಯಾತ್ರೆಯನ್ನು ಗುರುವಾರ ಸಂಜೆ ಪ್ರಮುಖರು ಕೊಡಗು–ಮೈಸೂರು ಗಡಿಯಲ್ಲಿ ಬರಮಾಡಿಕೊಂಡರು.

ಶುಕ್ರವಾರ ಬೆಳಗ್ಗೆ ರಥಬೀದಿಯ ಶ್ರೀ ಆಂಜನೇಯ ದೇವಾಲಯದಲ್ಲಿ ಪೂಜೆ ಸಲ್ಲಿಸಿ ರಥಬೀದಿ ಮೂಲಕ ಗಣಪತಿ ದೇವಾಲಯಕ್ಕೆ ಆಗಮಿಸಿತು.ಇದೇ ವೇಳೆ ಮಹಾಮಂಗಳಾರತಿ ನೆರವೇರಿಸಲಾಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಾಜಿ ಶಾಸಕ ಅಪ್ಪಚ್ಚುರಂಜನ್, ಕೊಡಗು ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಬಿ.ಬಿ.ಭಾರತೀಶ್, ಪ್ರಮುಖರಾದ ಚಿ.ನಾ.ಸೋಮೇಶ್ ಸೇರಿದಂತೆ ಪ್ರಮುಖರು ಪುಷ್ಪಾರ್ಚನೆ ನೆರವೇರಿಸಿದರು.

ಗಣಪತಿ ದೇವಾಲಯದಿಂದ ಮೆರವಣಿಗೆ ಸಾಗಿ ಬೈಚನಹಳ್ಳಿಯ ಮಾರಮ್ಮ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಬಳಿಕ ರಥ ಮಡಿಕೇರಿಯತ್ತ ಸಾಗಿತು. ಈ ಸಂದರ್ಭ ಬಿಜೆಪಿ ಪ್ರಮುಖರಾದ ಅಮೃತ್ ರಾಜ್, ಜೈವರ್ಧನ್, ಡಿ.ಕೆ. ತಿಮ್ಮಪ್ಪ, ಹೆರೂರು ಚಂದ್ರಶೇಖರ್, ಸುಮನ್, ವಿಶ್ವ ಹಿಂದೂ ಪರಿಷದ್‌ನ ಜಿಲ್ಲಾ ಅಧ್ಯಕ್ಷ ಕೃಷ್ಣಮೂರ್ತಿ, ಭಜರಂಗದಳ ಜಿಲ್ಲಾ ಸಂಚಾಲಕ ಅನೀಶ್, ವಿಎಚ್‌ಪಿ ಜಿಲ್ಲಾ ಸಹ ಕಾರ್ಯದರ್ಶಿ ಸಂತೋಶ್ ಸೇರಿದಂತೆ ರಮೇಶ್, ಸುರೇಶ್, ಅರುಣ್, ಮನೋಜ್, ಶಿವಸ್ವಾಮಿ, ಜೀವನ್ ಮತ್ತಿತರರು ಇದ್ದರು.

ಕೊಡವರ ಬೇಡಿಕೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲು

ಇಂದಿನಿಂದ ಸಿಎನ್‌ಸಿಯ 3ನೇ ಹಂತದ ಪಾದಯಾತ್ರೆ

ಮಡಿಕೇರಿ, ಅ.6– ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ಸೇರಿದಂತೆ 9 ಪ್ರಮುಖ ಬೇಡಿಕೆಗಳ ಕುರಿತು ಕೊಡವ ಜನಜಾಗೃತಿ ಮೂಡಿಸುತ್ತಾ ಸರ್ಕಾರದ ಗಮನ ಸೆಳೆಯಲು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ನಡೆಸುತ್ತಿರುವ 5 ಹಂತಗಳ ಪಾದಯಾತ್ರೆಯಲ್ಲಿ 3ನೇ ಹಂತದ ಪಾದಯಾತ್ರೆ ನಾಳೆ (ಅ.7) ಯಿಂದ ಆರಂಭಗೊಳ್ಳಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ. ಅ.7ರಂದು ಬೆಳಗ್ಗೆ 10 ಗಂಟೆಗೆ ಗೋಣಿಕೊಪ್ಪಲಿನಲ್ಲಿ ಪಾದಯಾತ್ರೆ, ಕಂಗಳತ್ತನಾಡ್ (ಗೋಣಿಕೊಪ್ಪ–ಮಾಯಮುಡಿ) 3.00 ಗಂಟೆಗೆ ಅರ್ಕೇರಿನಾಡ್(ಬಾಳೆಲೆ) ಅ.8ರಂದು ಬೆಳಗ್ಗೆ 10 ಗಂಟೆಗೆ ಕಿರ್ನಾಲ್‌ನಾಡ್ (ಕಿರ್ಗೂರ್–ಬೆಸಗೂರ್), 3 ಗಂಟೆಗೆ ಪತ್‌ಕಟ್‌ನಾಡ್ (ಬೆಕ್ಕೆಸೆಡ್ಲೂರ್–ಕಾನೂರ್) ಅ.9ರಂದು ಬೆಳಗ್ಗೆ 10 ಗಂಟೆಗೆ ತೊಡನಾಡ್ (ಕುಮಟೂರ್–ಶ್ರೀಮಂಗಲ), 2:30 ಗಂಟೆಗೆ, ಕುರ್ಚಿನಾಡ್(ಕುರ್ಚಿ–ಬೀರುಗ)ಅ.10ರಂದು ಬೆಳಗ್ಗೆ 10 ಗಂಟೆಗೆ ಮರೆನಾಡ್, ಪಾಕೇರಿನಾಡ್, ಐವತ್ನಾಡ್, ಪೊನಾಡ್ ಈ ನಾಲ್ಕು ನಾಡು ಮಂದ್‌ಗಳಲ್ಲಿ ಸಭೆ(ಬಾಡಗರಕೇರಿ–ತೆರಾಲ್–ಬಿರುನಾಣಿ) ಅ.11ರಂದು ಬೆಳಗ್ಗೆ 10 ಗಂಟೆಗೆ ತಾಳೆರಿನಾಡ್ (ಟಿ.ಶೆಟ್ಟಿಗೇರಿ), 2.30 ಗಂಟೆಗೆ ಅಂಜಿಗೇರಿನಾಡ್(ಹುದಿಕೇರಿ–ಬೇಗೂರು)ನಲ್ಲಿ ನಡೆಯಲಿದೆ ಎಂದು ನಾಚಪ್ಪ ಹೇಳಿದ್ದಾರೆ.

ಸಾರ್ವಜನಿಕರ ಒತ್ತಾಯಕ್ಕೆ ಶಾಸಕ ಎ.ಎಸ್.ಪೊನ್ನಣ್ಣ ಸ್ಪಂದನೆ

ಪುತ್ತೂರಿಗೆ ವರ್ಗವಾಗಿದ್ದ ವೈದ್ಯ ಮತ್ತೆ ವಿರಾಜಪೇಟೆಗೆ

ಪ್ರತಿ ವರ್ಷ ತಂದೆ–ತಾಯಿ ಹೆಸರಿನಲ್ಲಿ ಆಸ್ಪತ್ರೆಗೆ 50 ಸಾವಿರ ದೇಣಿಗೆ ಘೋಷಿಸಿದ ವೈದ್ಯ



ವಿರಾಜಪೇಟೆ, ಅ.6– 'ವೈದ್ಯೋ ನಾರಾಯಣ ಹರಿ; ಎಂದರೆ ವೈದ್ಯನಾದವನು ದೇವರಿಗೆ ಸಮಾನ, ಇತ್ತೀಚಿನ ದಿನಗಳಲ್ಲಿ ಇಂತಹ ವೈದ್ಯರು ಸಿಗುವುದು ಬಹಳ ವಿರಳ, ಅದರಲ್ಲೂ ಸರ್ಕಾರಿ ಆಸ್ಪತ್ರೆ ವೈದ್ಯ ಎಂದರೆ ಇನ್ನೂ ಕಷ್ಟ.

ವಿರಾಜಪೇಟೆ ಸರ್ಕಾರಿ ಆಸ್ಪತ್ರೆಯ ವೈದ್ಯರೊಬ್ಬರು ಇದಕ್ಕೆ ವಿರುದ್ಧ, ಅವರ ಕೈಗುಣ ಮತ್ತು ಸೇವಾ ಮನೋಭಾವದಿಂದ ಜನರ ಮನವಿ ಮತ್ತು ಒತ್ತಾಯದ ಮೇರೆಗೆ ಪುತ್ತೂರಿಗೆ ವರ್ಗವಾಗಿದ್ದ ವೈದ್ಯರನ್ನು ವಾಪಸ್ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ಶಾಸಕರು ಮತ್ತು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ವಾಪಸ್ ಕರೆಸಿಕೊಂಡಿದ್ದಾರೆ.

ಡಾ. ವಿಶ್ವನಾಥ್ ಸಿಂಪಿ ಎಂಬುವರೇ ಮತ್ತೆ ಪುತ್ತೂರಿನಿಂದ ವಿರಾಜಪೇಟೆಗೆ ಬಂದು ಮುಖ್ಯ ವೈದ್ಯಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದವರು. ವಿರಾಜಪೇಟೆ ಮುಖ್ಯ ವೈದ್ಯಾಧಿಕಾರಿಯಾಗಿ ಡಾ. ವಿಶ್ವನಾಥ್ ಸಿಂಪಿ ಅವರು ತಮ್ಮ ಕೈಗುಣ ಮತ್ತು ಸೇವಾ ಮನೋಭಾವದಿಂದ ಹಗಲು–ರಾತ್ರಿ ಎನ್ನದೆ ರೋಗಿಗಳ ಚಿಕಿತ್ಸೆಗೆ ಸ್ಪಂದಿಸಿ ಮನೆ ಮಾತಾಗಿದ್ದರು. ಕೆಲವು ದೊಡ್ಡ ದೊಡ್ಡ ನರ್ಸಿಂಗ್ ಹೋಂಗಳಲ್ಲಿ ಗುಣ ಪಡಿಸಲಾಗದ ಕಾಯಿಲೆಗಳನ್ನು ಇವರು ಗುಣಪಡಿಸಿದ್ದರು. ಅದರಲ್ಲೂ ಕಡು ಬಡವರಿಗೆ ಸಹಾಯ ಮಾಡುವುದರೊಂದಿಗೆ ಉತ್ತಮ ಚಿಕಿತ್ಸೆ ನೀಡುತ್ತಿದ್ದರು.

ಸರ್ಕಾರ ಇತ್ತೀಚೆಗೆ ಅವರನ್ನು ಪುತ್ತೂರು ಸರ್ಕಾರಿ ಆಸ್ಪತ್ರೆಗೆ ವರ್ಗಾವಣೆ ಮಾಡಿತ್ತು. ಇದರಿಂದ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಉಂಟಾಗಿತ್ತು. ರೋಗಿಗಳು ವೈದ್ಯರಿಲ್ಲದೆ ಸರಿಯಾದ ಚಿಕಿತ್ಸೆ ಸಿಗದೆ ಪರದಾಡಬೇಕಾಯಿತು. ಕೆಲವರು ತಮ್ಮ ನೆಚ್ಚಿನ ವೈದ್ಯರಾದ ಡಾ. ವಿಶ್ವನಾಥ್ ಸಿಂಪಿ ಅವರನ್ನು ಪುತ್ತೂರಿನ ಆಸ್ಪತ್ರೆಗೆ ಹೋಗಿ ಭೇಟಿ ಮಾಡಿ ಚಿಕಿತ್ಸೆ ಪಡೆದು ಬರುತ್ತಿದ್ದರು.

ವಿರಾಜಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಬೈದ್ಯರ ಕೊರತೆ ಉಂಟಾಗಿರುವ ಬಗ್ಗೆ ಮತ್ತು ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುತ್ತಿದ್ದ ವೈದ್ಯ ಡಾ. ವಿಶ್ವನಾಥ್ ಸಿಂಪಿ ಅವರನ್ನು ವಾಪಾಸ್ ಕರೆಸುವಂತೆ ಸಾರ್ವಜನಿಕರು ಒತ್ತಾಯ ಮಾಡಿದ ಹಿನ್ನೆಲೆಯಲ್ಲಿ ಶಾಸಕ ಪೊನ್ನಣ್ಣ ಅವರನ್ನು ಮತ್ತೆ ವಿರಾಜಪೇಟೆ ಆಸ್ಪತ್ರೆಗೆ ಕರೆಸಿಕೊಂಡರು. ಶುಕ್ರವಾರ ಅಧಿಕಾರ ಸ್ವೀಕರಿಸಿದ ಡಾ. ವಿಶ್ವನಾಥ್ ಸಿಂಪಿ ಮಾತನಾಡಿ, ಸರ್ಕಾರಿ ಆಸ್ಪತ್ರೆಗಳು ಅಭಿವೃದ್ಧಿ ಹೊಂದಲು ಸಾರ್ವಜನಿಕರ ಸಹಕಾರವೂ ಬೇಕು ಎಂದರಲ್ಲದೆ ತಮ್ಮ ತಂದೆ–ತಾಯಿ ಹೆಸರಿನಲ್ಲಿ ಪ್ರತಿವರ್ಷ ಈ ಆಸ್ಪತ್ರೆಗೆ 50 ಸಾವಿರ ರೂ. ದೇಣಿಗೆ ನೀಡುವುದಾಗಿ ಘೋಷಿಸಿದರು.

ಡಾ. ಹೇಮಪ್ರಿಯಾ ಅವರು ಅಧಿಕಾರ ಹಸ್ತಾಂತರಿಸಿದರು. ಅಧಿಕಾರ ಸ್ವೀಕರಿಸಿದ ವೈದ್ಯರನ್ನು ಕಾಂಗ್ರೆಸ್ ಮುಖಂಡರು ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು.

ಈ ವೇಳೆ ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ ಮಾತನಾಡಿ, ತಾಲೂಕು ಮುಖ್ಯ ಕೇಂದ್ರವಾದ ವಿರಾಜಪೇಟೆಯಲ್ಲಿ ಉತ್ತಮ ಕಟ್ಟಡ ಹೊಂದಿರುವ ಆಸ್ಪತ್ರೆಯಲ್ಲಿ ವೈದ್ಯರ ಕೊರತೆಯಿದ್ದು, ಇದು ಶಾಸಕರ ಗಮನಕ್ಕೂ ಬಂದಿದೆ. ಕೆಲವೆ ದಿನಗಳಲ್ಲಿ ಈ ಸಮಸ್ಯೆಗಳನ್ನೆಲ್ಲ ಬಗೆ ಹರಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಆಸ್ಪತ್ರೆ ಸಮಿತಿಯ ನಿರ್ದೇಶಕರಾದ ಶಿಬಾ ಪೃಥ್ವಿನಾಥ್, ಮಂಡೆಟಿರ ಅನೀಲ್ ಅಯ್ಯಪ್ಪ, ಕಿಶೋರ್, ಶಭೀರ್, ಹಾಗೂ ಪ್ರಮುಖರಾದ ಏಜಾಜ್ ಅಹ್ಮದ್, ಕೆ.ಸಿ.ಶಭರೀಶ್, ಹಮೀದ್, ಎಂ.ಎಂ.ಶಶಿಧರನ್, ಜೋಕಿಂ ರೋಡ್ರಿಗಾಸ್ ಮತ್ತು ಪುರಸಭೆ ಸದಸ್ಯರಾದ ಸಿ.ಕೆ.ಪೃಥ್ವಿನಾಥ್, ಮಹ್ಮದ್ ರಫಿ, ಅಬ್ದುಲ್ ಜಲೀಲ್, ರಜನಿಕಾಂತ್, ಜೂನಾ, ಮತ್ತಿತರರು ಉಪಸ್ಥಿತರಿದ್ದರು.

ಕರಿಕೆಯಲ್ಲಿ ಕಾಡಾನೆಗಳ ಉಪಟಳ

ಅಡಿಕೆ, ತೆಂಗು, ಬಾಳೆ ಫಸಲು ನಾಶ



ಮಡಿಕೇರಿ,ಅ.6– ಕೊಡಗಿನ ಗಡಿ ಗ್ರಾಮ ಕರಿಕೆಯಲ್ಲಿ ಕಾಡಾನೆಗಳ ಉಪಟಳ ಮಿತಿ ಮೀರಿದೆ. ಕಾಡಾನೆ ಹಿಂಡು ದಾಳಿ ಮಾಡಿದ ಪರಿಣಾಮ ತೋಟಗಳಿಗೆ ಹಾನಿಯಾಗಿದ್ದು, 80ಕ್ಕೂ ಅಧಿಕ ಅಡಿಕೆ, 28ಕ್ಕೂ ಹೆಚ್ಚು ತೆಂಗು ಮತ್ತು ಸುಮಾರು 50 ಬಾಳೆ ಗಿಡಗಳನ್ನು ನಾಶಪಡಿಸಿದೆ.

ಕರಿಕೆಯ ಎಳ್ಳುಕೊಚ್ಚಿ ಗ್ರಾಮದ ರಾಘವ ಹೊಸಮನೆ, ದುಶ್ಯಂತ ಹೊಸಮನೆ ಹಾಗೂ ಚೆತ್ತುಕಾಯದ ಹೆಚ್.ಎಂ.ನಂಜುಂಡ ಅವರ ತೋಟಗಳಲ್ಲಿ ಅಪಾರ ನಷ್ಟ ಉಂಟಾಗಿದೆ. ಪ್ರತಿವರ್ಷ ಈ ಅವಧಿಯಲ್ಲಿ ಗಡಿ ರಾಜ್ಯ ಕೇರಳ ಭಾಗದಿಂದ ಕಾಡಾನೆಗಳ ಹಿಂಡು ಬಂದು ದಾಂಧಲೆ ನಡೆಸುತ್ತವೆ ಎಂದು ಸ್ಥಳೀಯ ಗ್ರಾಮಸ್ಥರು ಬೇಸರ ವ್ಯಕ್ತಪಡಿಸಿದ್ದಾರೆ. ಅರಣ್ಯ ಇಲಾಖೆ ಹಾಗೂ ಕೊಡಗು ಜಿಲ್ಲಾಡಳಿತ ಗಡಿ ಗ್ರಾಮದ ಬಗ್ಗೆ ಕಾಳಜಿ ವಹಿಸಿ ಕಾಡಾನೆ ಉಪಟಳ ತಡೆಗೆ ಸೋಲಾರ್ ಬೇಲಿ ನಿರ್ಮಾಣ ಮತ್ತು ತಡೆಗೋಡೆ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿದ್ದಾರೆ. ಬೆಳೆ ನಷ್ಟಕ್ಕೆ ತಕ್ಷಣ ಪರಿಹಾರ ವಿತರಿಸಬೇಕೆಂದು ತೋಟದ ಮಾಲೀಕರುಗಳು ಮನವಿ ಮಾಡಿದ್ದಾರೆ.

ಚಾ.ನಗರದಲ್ಲಿ ಮುಂದುವರೆದ 'ಕಾವೇರಿ' ಹೋರಾಟ

ಕಜ್ಜಿಣ, ಪೇಪರ್, ಖಾಲಿ ಸೀಸ ಪ್ರದರ್ಶನ, ರಸ್ತೆ ತಡೆ



ಚಾಮರಾಜನಗರ, ಅ.6– ಕರ್ನಾಟಕ ಸರ್ಕಾರವು ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸುತ್ತಿರುವುದನ್ನು ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಕಳೆದ ಒಂದು ತಿಂಗಳಿನಿಂದಲೂ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದು ಶುಕ್ರವಾರವೂ ಪ್ರತಿಭಟನೆಯನ್ನು ಮುಂದುವರಿಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಗುಜರಿ ವಸ್ತುಗಳಾದ ಹಳೇ ಕಬ್ಬಿಣ, ಪೇಪರ್, ಖಾಲಿ ಸೀಸಗಳನ್ನು ಕಾರ್ಯಕರ್ತರು ಹಿಡಿದು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆತಡೆ ನಡೆಸಿದರು. ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ ಹಾಗೂ ಕೇಂದ್ರ ಸರ್ಕಾರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕನ್ನಡ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಶಾ. ಮುರಳಿ ಮಾತನಾಡಿ, ರಾಜ್ಯ, ತಮಿಳುನಾಡು ಸರ್ಕಾರ ಹಾಗೂ ಕೇಂದ್ರ ಸರ್ಕಾರ, ಗುಜರಿ ಸರ್ಕಾರಗಳಾಗಿವೆ. ರಾಜ್ಯದ ಜನರ ಹಿತ ಕಾಯದೇ ನಿರಂತರವಾಗಿ ನೀರು ಹರಿಸುತ್ತಿರುವ ಕರ್ನಾಟಕ ಸರ್ಕಾರ, ಮಾತನಾಡದ ಜನಪ್ರತಿನಿಧಿಗಳು, ಮಧ್ಯಸ್ಥಿಕೆ ವಹಿಸದ ಕೇಂದ್ರ ಸರ್ಕಾರ, ಕಾವೇರಿ ಕ್ಯಾತೆ ತೆಗೆಯುವ ತಮಿಳುನಾಡು ಸರ್ಕಾರ ಯಾವುದಕ್ಕೂ ಉಪಯೋಗಕ್ಕೆ ಬಾರದ ಗುಜರಿ ಸರ್ಕಾರಗಳಾಗಿವೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ, ಪಣ್ಯದ ಹುಂಡಿ ರಾಜು, ಚಾ.ವೆಂ. ರಾಜ್‌ಗೋಪಾಲ್, ರವಿಚಂದ್ರಪ್ರಸಾದ್ ಕಹಳೆ, ಮಹೇಶ್ ಗೌಡ, ಗು. ಪುರುಷೋತ್ತಮ್, ಲಿಂಗರಾಜು, ತಾಂಡವಮೂರ್ತಿ, ಸೋಮವಾರಪೇಟೆ ಮಂಜು ಇತರರಿದ್ದರು.

ಬೋರ್‌ವೆಲ್ ನಾಶ ಖಂಡಿಸಿ ಗ್ರಾಮಸ್ಥರ ಪ್ರತಿಭಟನೆ



ಚಾಮರಾಜನಗರ, ಅ.6– ತಾಲೂಕಿನ ಮರಿಯಾಲ ಗ್ರಾಮಕ್ಕೆ ಕುಡಿಯುವ ನೀರು ಸಂಪರ್ಕ ಕಲ್ಪಿಸುತ್ತಿದ್ದ ಬೋರ್‌ವೆಲ್ ಹಾಗೂ ಮೋಟಾರು ಅನ್ನು ನಾಶಪಡಿಸಿರುವ ಜಮೀನು ಮಾಲೀಕರ ವಿರುದ್ಧ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ತಾಲೂಕಿನ ಮರಿಯಾಲ ಗ್ರಾಮಕ್ಕೆ ರಾಷ್ಟ್ರೀಯ ಹೆದ್ದಾರಿ ಸಮೀಪವಿದ್ದ ಕಂದಾಯ ಜಮೀನೊಂದರಲ್ಲಿ ಗ್ರಾಪಂನಿಂದ 50 ವರ್ಷಗಳ ಹಿಂದೆಯೇ ಗ್ರಾಮಕ್ಕೆ ಕುಡಿಯುವ ನೀರಿಗಾಗಿ ಬೋರ್‌ವೆಲ್ ಕೊರೆಸಿ, ಪೈಪ್‌ಲೈನ್ ಮೂಲಕ ನೀರು ಸಂಪರ್ಕ ಮಾಡಲಾಗಿತ್ತು ಆದರೆ ಇತ್ತೀಚೆಗೆ ಜಮೀನನ್ನು ಖರೀದಿ ಮಾಡಿದ್ದವರೊಬ್ಬರು ಗುರುವಾರ ತಡರಾತ್ರಿ ಅಲ್ಲಿದ್ದ ಮನೆಯನ್ನು ನೆಲಸಮ ಮಾಡಿದ್ದು, ಬೋರ್‌ವೆಲ್ ಸಂಪರ್ಕ ಕಲ್ಪಿಸಿದ್ದ ಪೈಪ್‌ಲೈನ್, ಕೇಬಲ್, ಮೋಟಾರನ್ನು ನಾಶಪಡಿಸಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದರು.

ಗ್ರಾಮಕ್ಕೆ ಕುಡಿಯುವ ನೀರು ಸಂಪರ್ಕ ಕಲ್ಪಿಸಲು ಆಧಾರವಾಗಿದ್ದ ಬೋರ್‌ವೆಲ್ ನಾಶಪಡಿಸಿದ್ದರಿಂದ ಗ್ರಾಮದಲ್ಲಿ ನೀರಿನ ಸಮಸ್ಯೆ ತಲೆದೋರುವ ಸಾಧ್ಯತೆಯಿದೆ ಎಂದು ಮುಖಂಡ ಸುಗುಣಸ್ವಾಮಿ ಕಳವಳ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಮರಿಯಾಲ ಗ್ರಾಪಂ ಸದಸ್ಯರಾದ ನಾಗರಾಜು, ಮಲ್ಲೇಶ್, ಚಂದ್ರು, ಬಿಳಿಗಿರಿ ರಂಗನಾಯ್ಕ, ಪುಟ್ಟಸ್ವಾಮಿ, ನಂದೀಶ್, ಲಿಂಗರಾಜು, ನಾಗೇಂದ್ರ, ಮಹೇಶ, ಆನಂದ ಇದ್ದರು.

ಸೊಸೈಟಿ ಸಮಗ್ರ ತನಿಖೆಗೆ ಒತ್ತಾಯಿಸಿ ಡಿಸಿಗೆ ಮನವಿ



ಚಾಮರಾಜನಗರ, ಅ.6– ತಾಲೂಕಿನ ಮೂಡಹಳ್ಳಿ ಅಗ್ರಿಕಲ್ಚರಲ್ ಕೋ ಅಪರೇಟಿವ್ ಜಾಯಿಂಟ್ ಫಾರ್ಮಿಂಗ್ ಸೊಸೈಟಿಯನ್ನು ಸಮಗ್ರ ತನಿಖೆ ನಡೆಸಿ ಸಾಗುವಳಿದಾರರನ್ನು ವಂಚಿಸಿರುವ ಅಧ್ಯಕ್ಷ, ಕಾರ್ಯದರ್ಶಿಯ ಮೇಲೆ ದೂರು ದಾಖಲಿಸಿ ಕಾನೂನು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿ ದೊಡ್ಡಮೂಡಹಳ್ಳಿ ಭೂ ಅಭಿವೃದ್ಧಿ ಜಾಗೃತಿ ಹೋರಾಟ ಸಮಿತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾ ನಾಗ್ ಅವರಿಗೆ ಮನವಿ ಸಲ್ಲಿಸಲಾಯಿತು.

ಪರಿಶಿಷ್ಟ ಜಾತಿಯ ಸಮುದಾಯದ ಅಭಿವೃದ್ಧಿಯ ಹಿತದೃಷ್ಟಿಯಿಂದ ಸೊಸೈಟಿಯ ಮುಖಾಂತರ ವ್ಯವಸಾಯ ಮಾಡಿಕೊಂಡು ಅಭಿವೃದ್ಧಿಯಾಗಲಿ ಎಂದು ಸರ್ಕಾರವು 1959, ಮೇ 18ರಲ್ಲಿ 600ಎಕರೆ ಭೂಮಿಯನ್ನು ಅರಣ್ಯ ಇಲಾಖೆಯಿಂದ ಬಿಡುಗಡೆಗೊಳಿಸಿ 1961, ಅ. 26ರಲ್ಲಿ 500ಎಕರೆ ಜಮೀನನ್ನು ಸೊಸೈಟಿಯ ಸ್ವಾಧೀನಕ್ಕೆ ನೀಡಿ 1964, ಏ. 6ರಲ್ಲಿ ಸರ್ಕಾರ ಸೊಸೈಟಿಗೆ ಹಸ್ತಾಂತರ ಮಾಡಿ 112 ಫಲಾನುಭವಿಗಳಿಗೆ ಸಾಗುವಳಿ ಚೀಟಿಗಳನ್ನು ಸೊಸೈಟಿ ಸ್ವಾಧೀನಕ್ಕೆ ನೀಡಿದೆ. ಆದರೆ ಸೊಸೈಟಿ ಅಧ್ಯಕ್ಷ ಆರ್.ಎಂ. ಕಾಂತರಾಜು ಅವರು ಸುಮಾರು ವರ್ಷಗಳಿಂದಲೂ ಸೊಸೈಟಿಗೆ ಸಂಬಂಧಪಟ್ಟಂತೆ ಯಾವುದೇ ಅಧಿಕೃತವಾದ ಕಚೇರಿಯನ್ನು ಮೂಡಹಳ್ಳಿ ಕಾಲೋನಿಯಲ್ಲಿ ಇದುವರೆಗೂ ತೆರೆದಿಲ್ಲ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

2023–24ನೇ ಸಾಲಿನಲ್ಲಿ ಸದಸ್ಯರಲ್ಲದವರನ್ನು ಗುಂಪು ಸೇರಿಸಿಕೊಂಡು ಆಹ್ವಾನ ಪತ್ರಿಕೆ ಮುದ್ರಿಸಿ ಸಾಮಾನ್ಯ ಸಭೆ ನಡೆದಿದೆಂದು ಸುಳ್ಳು ಮಾಹಿತಿ ನೀಡಿರುತ್ತಾರೆ. ಆದ್ದರಿಂದ ತುರ್ತಾಗಿ ಸೊಸೈಟಿಯ ಕಚೇರಿಯ ವಹಿವಾಟಿನ ಕಡತ ಪರಿಶೀಲಿಸಿ ಅಧ್ಯಕ್ಷ, ಕಾರ್ಯದರ್ಶಿ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಈ ವೇಳೆ ದೊಡ್ಡಮೂಡಹಳ್ಳಿ ಭೂ ಅಭಿವೃದ್ಧಿ ಜಾಗೃತಿ ಹೋರಾಟ ಸಮಿತಿ ಅಧ್ಯಕ್ಷ ಎಚ್. ಮೂರ್ತಿ, ಗೌರವ ಸಲಹೆಗಾರ ಚಾ.ಗು. ನಾಗರಾಜು, ಗೌರವಾಧ್ಯಕ್ಷ ಸಿ. ಚನ್ನಬಸವಯ್ಯ, ಸಮಿತಿ ಸಂಚಾಲಕ ಶಿವಕುಮಾರ್, ಕಾರ್ಯದರ್ಶಿ ಎಂ. ಶಿವಕುಮಾರ್, ಖಜಾಂಚಿ ಆರ್.ಎನ್. ಶಿವಣ್ಣ, ನಿರ್ದೇಶಕ ಎಚ್. ಲಿಂಗರಾಜು ಇತರರು ಹಾಜರಿದ್ದರು.

ಪಿಎಂ ಸ್ವ–ನಿಧಿ ಸಾಲ ಸೌಲಭ್ಯದಿಂದ ಅಭಿವೃದ್ಧಿ ಹೊಂದಿ

ಪಿಎಂ ಸ್ವನಿಧಿ ಸಮ್ಮಾನ್ ಯೋಜನೆಗೆ ಏಜೆಂಟರು, ವಿತರಕರನ್ನು ನೋಂದಾಯಿಸಿ ರಾಜ್ಯ ಸಂಚಾಲಕ ಎ.ಎಸ್. ರಾಮದಾಸ್ ಕರೆ



ಚಾಮರಾಜನಗರ, ಅ.6– ಕೇಂದ್ರ ಸರ್ಕಾರದ ಪಿಎಂ ಸ್ವ–ನಿಧಿಯಿಂದ ಸಮ್ಮಾನ್‌ವರೆಗೆ ಅನುಷ್ಠಾನದ 8 ಯೋಜನೆಯಡಿ ಪತ್ರಿಕಾ ವಿತರಕರು ನೋಂದಣಿ ಮಾಡಿಸಿಕೊಂಡು ಸಾಲ ಸೌಲಭ್ಯಗಳನ್ನು ಪಡೆದು ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು ಎಂದು ಮಾಜಿ ಸಚಿವ ಹಾಗೂ ಸ್ವನಿಧಿ ಸಮ್ಮಾನ್ ಯೋಜನೆಯ ರಾಜ್ಯ ಸಂಚಾಲಕ ಎಸ್.ಎ. ರಾಮದಾಸ್ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಜಿಲ್ಲಾ ಘಟಕದಿಂದ ನಡೆದ ಪಿಎಂ ಸ್ವ–ನಿಧಿ ಸಮ್ಮಾನ್ ಯೋಜನೆಯ ಕುರಿತು ಪತ್ರಿಕಾ ಏಜೆಂಟರು ಮತ್ತು ವಿತರಕರನ್ನು ನೋಂದಾಯಿಸಿ, ಕೇಂದ್ರ ಸರ್ಕಾರದ ಯೋಜನೆ ಕುರಿತು ಅರಿವು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಪತ್ರಿಕಾ ಏಜೆಂಟರ್‌ಗಳು, ವಿತರಕರು ಸಹ ಅಸಂಘಟಿತ ಕಾರ್ಮಿಕ ವಲಯಗಳಿಗೆ ಸೇರ್ಪಡೆಯಾಗುತ್ತಿದ್ದಾರೆ. ಇದುವರೆಗೆ ಯಾವುದೇ ಯೋಜನೆಗಳಿಗೆ ಇವರನ್ನು ಪರಿಗಣಿಸುತ್ತಿರಲಿಲ್ಲ. ಆದರೆ, ಮನೆ ಮನೆಗಳಿಗೆ ಪತ್ರಿಕೆಗಳನ್ನು ಮಳೆ, ಗಾಳಿ, ಚಳಿ ಎನ್ನದೇ ಮುಂಜಾನೆ ತಲುಪಿಸುವ ಕಾಯಕವನ್ನು ಮಾಡುತ್ತಿರುವವರ ವೃತ್ತಿ ಬದುಕು ಸಹ ಉಜ್ವಲಗೊಳ್ಳಬೇಕು. ಅವರಿಗೆ ಪಿಎಂ ಸ್ವ–ನಿಧಿ ಯೋಜನೆ ಅನ್ವಯವಾಗುವಂತೆ ಮಾಡಲು ಶ್ರಮವಹಿಸಿದ್ದೇನೆ ಎಂದರು.

ಇದರ ಫಲವಾಗಿ ಪ್ರಧಾನ ಮಂತ್ರಿಗಳು 8 ಅಂಶಗಳನ್ನು ಒಳಗೊಂಡು ಯೋಜನೆಯನ್ನು ಜಾರಿ ಮಾಡಿದ್ದು, ಪಿಎಂ ಸ್ವ–ನಿಧಿ ಸಮ್ಮಾನ ಯೋಜನೆ ಜಾರಿ ಮಾಡಿ, ಈ ಯೋಜನೆಯಡಿ 10ಸಾವಿರದಿಂದ 10 ಲಕ್ಷದವರೆಗೆ ಸಾಲ ಸೌಲಭ್ಯ ದೊರೆಯುತ್ತದೆ. ಅಲ್ಲದೇ, ಪಿಂಚಣಿ ಯೋಜನೆ, ಮಕ್ಕಳ ಮದುವೆಗಾಗಿ ಸಹಾಯಧನ, ಹೆರಿಗೆ ಭತ್ಯೆ, ಮಕ್ಕಳ ಪಾಲನೆ, ಪೋಷಣೆ ಭತ್ಯೆ, ಪ್ರಧಾನ ಮಂತ್ರಿ ಜೀವನ ಸುರಕ್ಷಾ ಯೋಜನೆ, ಅಪಘಾತ ವಿಮೆ, ಅಂಗವೈಕಲ್ಯತೆಗೆ ಒಳಗಾದರೆ ಚಿಕಿತ್ಸೆ ವೆಚ್ಚ ಸೇರಿದಂತೆ 8 ಯೋಜನೆಗಳನ್ನು ಒಳಗೊಂಡಂತೆ ಯೋಜನೆಯನ್ನು ಪ್ರಧಾನ ಮಂತ್ರಿಗಳು ಜಾರಿ ಮಾಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕೇಂದ್ರ ಬರ ಪರಿಹಾರ ಸಮಿತಿಯ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಚಾಮುಲ್ ಅಧ್ಯಕ್ಷ ವೈ.ಸಿ. ನಾಗೇಂದಸ್ರ, ಬಿಜೆಪಿ ಜಿಲ್ಲಾಧ್ಯಕ್ಷ ಜಿ. ನಾರಾಯಣಪ್ರಸಾದ್, ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್, ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಸಿ. ಪುರುಷೋತ್ತಮ್, ಪ್ರಧಾನ ಕಾರ್ಯದರ್ಶಿ ಎನ್. ಅಕ್ಷಯ್, ಗೌರವಾಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ದೇಮಹಳ್ಳಿ ಶಿವಕುಮಾರ್, ಶಿವಲಿಂಗಮೂರ್ತಿ, ರೇಣುಕೇಶ್, ಲಿಂಗಪ್ಪ ನವೀನ್, ಬದನಗುಪ್ಪೆ ಮಲ್ಲಣ್ಣ, ಶೇಖರಪ್ಪ, ಬಸವರಾಜು, ಶಿವಣ್ಣ, ರಾಜಣ್ಣ, ಸಿದ್ದು ಇದ್ದರು.

ಕಾನೂನು ತಿದ್ದುಪಡಿ ಮೂಲಕ ಸೋಲಿಗರ ಪೋಡುಗಳ ಅಭಿವೃದ್ಧಿಗೆ ಎಆರ್‌ಕೆ ಮನವಿ



ಯಳಂದೂರು, ಅ.6– ಕೇಂದ್ರ ಸರ್ಕಾರವು ಅರಣ್ಯ ಕಾಯ್ದೆಯಡಿಯಲ್ಲಿನ ಕಾನೂನುಗಳನ್ನು ತಿದ್ದುಪಡಿ ಮಾಡುವ ಮೂಲಕ ಸೋಲಿಗರು ವಾಸಿಸುವ ಪೋಡುಗಳ ಅಭಿವೃದ್ಧಿಗೆ ಅವಕಾಶ ಕಲ್ಪಿಸಬೇಕಿದೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ತಾಲೂಕಿನ ಬಿಳಿಗಿರಿರಂಗನಬೆಟ್ಟದ ಯರಕನಗದ್ದೆ ಕಾಲೋನಿಯಲ್ಲಿ ಆಯೋಜಿಸಿದ್ದ 69ನೇ ವನ್ಯಜೀವಿ ಸಪ್ತಾಹ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರಾಜ್ಯ ಸರ್ಕಾರ ಅರಣ್ಯದ ಉಳಿವಿಗೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದೆ. ಗಿರಿಜನ ಹಾಡಿಗಳು ಮೂಲ ಸೌಕರ್ಯಗಳಿಂದ ವಂಚಿತವಾಗಿದ್ದು ಕಾನೂನು ತಿದ್ದುಪಡಿ ಮಾಡುವ ಮೂಲಕ ಹಾಡಿಗಳಿಗೆ ಮೂಲ ಸೌಕರ್ಯ ಒದಗಿಸಲು ಅವಕಾಶ ಕಲ್ಪಿಸಬೇಕಿದೆ. ಆ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮುಂದಾಗಬೇಕು. ಅರಣ್ಯ ರಕ್ಷಣೆಯಲ್ಲಿ ಸೋಲಿಗರ ಪಾತ್ರ ಬಹಳ ಮುಖ್ಯ ಎಂದರು.

1960ರ ಅವಧಿಯಲ್ಲಿ ಸಚಿವರಾಗಿದ್ದ ಬಿ.ರಾಚಯ್ಯ ಅವರು ಬಿಆರ್‌ಟಿ ಅರಣ್ಯ ವ್ಯಾಪ್ತಿಯ ಬೂದಿಪಡಗದಲ್ಲಿ ವಿದ್ಯಾರ್ಥಿ ನಿಲಯ ಪ್ರಾರಂಭಿಸಿ ಗಿರಿಜನರ ಮಕ್ಕಳು ವಿದ್ಯಾಭ್ಯಾಸ ಮಾಡಲು ಅನುಕೂಲ ಕಲ್ಪಿಸಿದ್ದರು. ಪ್ರಸ್ತುತ ಅನೇಕ ಸೋಲಿಗರು ಶೈಕ್ಷಣಿಕ, ಸಾಮಾಜಿಕ, ಆರ್ಥಿಕವಾಗಿ ಸ್ವಾವಲಂಬಿಯಾಗಿ ಬದುಕುತ್ತಿದ್ದಾರೆ. ಜೊತೆಗೆ ತಮ್ಮ ಸಂಸ್ಕೃತಿಯ ಉಳಿವಿಗೂ ಶ್ರಮಿಸುತ್ತಿದ್ದಾರೆ. ಸೋಲಿಗರ ಗೊರುಕನ ನೃತ್ಯ ಹಾಗೂ ಹಾಡು ಉತ್ತಮವಾಗಿದೆ. ಕಾಡಿನಲ್ಲಿ ವಾಸಿಸುವ ಸೋಲಿಗರು ಕೂಡ ನಮ್ಮಂತೆ ಬದುಕು ರೂಪಿಸಿಕೊಳ್ಳಬೇಕು. ಮನುಷ್ಯರು ಅಂದರೆ ಎಲ್ಲರೂ ಒಂದೇ. ಬಿಆರ್‌ಟಿ ಅರಣ್ಯ ವ್ಯಾಪ್ತಿಯಲ್ಲಿರುವ ಪೋಡುಗಳಲ್ಲಿ ಮೂಲ ಸೌಕರ್ಯಗಳಿಲ್ಲ. ಇದರಿಂದಾಗಿ ಸೋಲಿಗರ ಬಡಾವಣೆಗಳು ರಸ್ತೆ, ಮನೆ, ಕುಡಿಯುವ ನೀರು, ವಿದ್ಯುತ್ ವ್ಯವಸ್ಥೆ ಇಲ್ಲದೇ ವಂಚಿತವಾಗಿವೆ ಎಂದು ತಿಳಿಸಿದರು.

ಬಿಆರ್‌ಟಿ ಹುಲಿ ಯೋಜನೆ ನಿರ್ದೇಶಕಿ ದೀಪ್ ಜೆ.ಕಂಟ್ರಾಕ್ಟರ್ ಮಾತನಾಡಿ, ವನ್ಯಜೀವಿ ಸಪ್ತಾಹವನ್ನು ಪ್ರತಿ ವರ್ಷ ಉತ್ಸವ ರೀತಿ ಆಚರಣೆ ಮಾಡಲಾಗುತ್ತಿದೆ. ಅರಣ್ಯ ಹಾಗೂ ವನ್ಯಜೀವಿ ರಕ್ಷಣೆ ಎಲ್ಲರ ಸಹಕಾರ ಅಗತ್ಯ. ಎಲ್ಲರ ಸಹಕಾರ ಇಲ್ಲದೇ ಅರಣ್ಯ ಸಂರಕ್ಷಣೆ ಸಾಧ್ಯವಿಲ್ಲ. ಆದ್ದರಿಂದ ಸರ್ಕಾರ ಕೂಡ ಅರಣ್ಯದ ಕಡೆ ಗಮನಹರಿಸಿ ಈ ಘೋಷವಾಕ್ಯದಡಿ ಆಚರಿಸಲಾಗುತ್ತಿದೆ. ಇದು ಬೇರೆ ಕಡೆ ಹೊಸದಾಗಿ ಇರಬಹುದು. ಆದರೆ, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶಕ್ಕೆ ಇದು ಹೊಸದಲ್ಲ. ಇಲ್ಲಿನ ಸೋಲಿಗರು ಕಾಡನ್ನು ರಕ್ಷಣೆ ಮಾಡುತ್ತಿದ್ದಾರೆ. ಸೋಲಿಗರ ಸಹಕಾರದಿಂದಲೇ ಅರಣ್ಯ ರಕ್ಷಣೆ ಸಾಧ್ಯವಾಗಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಅರಣ್ಯದಲ್ಲಿ ಗಣ್ಯರು ಗಿಡ ನೆಟ್ಟು ನೀರೆರೆದರು. ಇದೇ ಸಂದರ್ಭದಲ್ಲಿ ಸೋಲಿಗರಿಗೆ ಉಚಿತ ಸಿಲಿಂಡರ್ ವಿತರಣೆ ಮಾಡಲಾಯಿತು.

ಮ. ನರೇಗಾ ಕುರಿತ ಮಾಹಿತಿ, ದೂರುಗಳಿಗೆ ಉಚಿತ ಸಹಾಯವಾಣಿ

ಚಾಮರಾಜನಗರ, ಅ.6– ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದ ಸೌಲಭ್ಯಗಳು, ಮಾಹಿತಿ ಪಡೆಯಲು ಹಾಗೂ ದೂರು, ಸಮಸ್ಯೆಗಳನ್ನು ತಿಳಿಸಲು ನಗರದ ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಉಚಿತ ಸಹಾಯವಾಣಿ 08226–224015 ಸೌಲಭ್ಯ ಲಭ್ಯವಿದೆ.

ಉದ್ಯೋಗ ಖಾತರಿ ಯೋಜನೆಯಡಿ ಉದ್ಯೋಗ ಚೀಟಿ ನೊಂದಣಿ, ಗ್ರಾಮೀಣ ಜನರ ಉದ್ಯೋಗ ಬೇಡಿಕೆ, ಕೂಲಿ ಪಾವತಿ, ವೈಯಕ್ತಿಕ ಸೌಲಭ್ಯಗಳ ಮಾಹಿತಿಗಳನ್ನು ಉಚಿತ ಸಹಾಯವಾಣಿ ಮೂಲಕ ಪಡೆಯಬಹುದಾಗಿದೆ. ಅಲ್ಲದೆ ದೂರುಗಳನ್ನು ಸಹ ಸಲ್ಲಿಸಬಹುದಾಗಿದೆ. ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು. ಸಾರ್ವಜನಿಕರು ಕಚೇರಿ ಅವಧಿಯಲ್ಲಿ ಉಚಿತ ಸಹಾಯವಾಣಿ ಸಂಪರ್ಕಿಸಿ ಉದ್ಯೋಗ ಖಾತರಿ ಯೋಜನೆ ಕುರಿತ ಮಾಹಿತಿ ಪಡೆದು ಸಮಸ್ಯೆ ಪರಿಹರಿಸಿಕೊಳ್ಳುವ ಸೌಲಭ್ಯವನ್ನು ಸದುಪಯೋಗ ಮಾಡಿಕೊಳ್ಳುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

HOUSE FOR RENT
3 BHK 1st Floor East facing Behind Agarwal Eye Clinic 'K' Block, Kuvempunagar
8105925487

SITE SALE
Muda Approved
Nithyananda Sagara 30x40
Paramananda Sagara30x40
Kuberananda Sagara 30x40
Athmananda Sagar 30x40
Kuberananda Sagara 50x80
Call JK 8951144240

ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀ ಮಹಾದೇಶ್ವರ ಸೂಪರ್ ಸರ್ವೀಸ್ (HPCL ಪೆಟ್ರೋಲ್ ಬಂಕ್) ವಿವೇಕಾನಂದ ಸರ್ಕಲ್ ಬಳಿ, ವಿವೇಕಾನಂದನಗರ, ಮೈಸೂರು–570023. ಸಂಪರ್ಕಿಸಿ:
8951195363,7259849439

ತಕ್ಷಣ ಬೇಕಾಗಿದ್ದಾರೆ
1. ಸೆಕ್ಯೂರಿಟಿ ಗಾರ್ಡ್ಸ್ 10th/PUC ಗರಿಷ್ಠ 40 ವರ್ಷ, ಹೆಬ್ಬಾಳ್ ರಿಂಗ್ ರೋಡ್ ಪಕ್ಕ, ESI, PF ಸೌಲಭ್ಯ ಇದೆ.
9972945905
9900481819

ದಸರಾ ಹಬ್ಬದ ಪ್ರಯುಕ್ತ
10 ದಿನದ ಸುಂದರ ಬರವಣಿಗೆ ಕಾರ್ಯಾಗಾರ
7ನೇ ತರಗತಿ ಮೇಲ್ಪಟ್ಟವರಿಗೆ ಮಾತ್ರ ಮಾಧ್ಯಮ (ಇಂಗ್ಲೀಷ್)
ಪ್ರಾಥಮಿಕ ಶಾಲೆಯವರಿಗೆ 3 ತಿಂಗಳ ಅಲ್ಪಾವಧಿ ತರಗತಿಗಳು.
ಸಂಪರ್ಕಿಸಿ: ಎಸ್. ನಾರಾಯಣ್
Mob: 9980337759
ಮಹಿಳಾ ಸಮಾಜ, ಜೆಎಲ್‌ಬಿ ರಸ್ತೆ, ಸಿಕೆಸಿ ಕಾನ್ವೆಂಟ್ ಹತ್ತಿರ ಮೊದಲು ಬಂದವರಿಗೆ ಆದ್ಯತೆ.

ಛತ್ರ ಖಾಲಿ ಇದೆ
ದಿನಾಂಕ: 03, 05, 08, 10, 17 ನವೆಂಬರ್ 2023
ಮಾಧವ ಶೈಣೈ ಕಲ್ಯಾಣ ಮಂಟಪ 19/ಎ, ಇಂಡಸ್ಟ್ರಿಯಲ್ ಸಬರ್ಬ್, ವಿಶ್ವೇಶ್ವರನಗರ, ಮೈಸೂರು
0821-2486426, 8123389500
9845835677

WANTED
35 year Young Self Employed Person having Own House in Mysore. 30 year Young Lingayat Lady Wanted.
9845058051

ತಕ್ಷಣ ಬೇಕಾಗಿದ್ದಾರೆ
ಹೋಟೆಲ್ ಈಗಲ್ ಟಾಪ್–1 ಹೊಸದಾಗಿ ಸ್ಥಾಪನೆಯಾಗಿರುವ ಹೋಟೆಲ್ ಮತ್ತು ಲಾಡ್ಜ್ ರಿಸೆಪ್‌ನಿಸ್ಟ್ ಅನುಭವವುಳ್ಳರು ಬೇಕಾಗಿದ್ದಾರೆ.
9901369901

SITE FOR SALE
Vijayanagar 4th Stage 40x60 West Face KBL Enclave Site No.13
9342599159
9980210607

ಕೆಲಸಕ್ಕೆ ಬೇಕಾಗಿದ್ದಾರೆ
ಮೇಟಗಳ್ಳಿ ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಟ್ಯೂಬ್ ತಯಾರಿಕಾ ಕಾರ್ಖಾನೆಗೆ ಯುವಕರು ಬೇಕಾಗಿದ್ದಾರೆ.
ವಯಸ್ಸು : 18 ರಿಂದ 45 ವರ್ಷ
ವಿದ್ಯಾರ್ಹತೆ 7, 8, 9, 10, ಪಿಯುಸಿ, ಐಟಿಐ ರಿಯಾಯಿತಿ ದರದಲ್ಲಿ ವಸತಿ ಹಾಗೂ ಊಟ, ತಿಂಡಿಯ ವ್ಯವಸ್ಥೆ ಇರುತ್ತದೆ.
9972440258

HOUSE FOR RENT
30x40 HOUSE Ground Floor, 2 BHK West Facing, Parking Solar water, Dattagalli, Mysore.
Call : 94801 02135
After 6pm : 94489 58429

MICROWAVE OVEN SERVICES INDIAN/IMPORTED CALL FOR MICROWAVE OVEN REPAIR
9900237315, 9845963421
08214266495

ಮನೆ ಬಾಡಿಗೆಗೆ
HOUSE FOR RENT
2 BHK 1, 1 BHK 2
3 ROOMS
Only for Ladies & Family
Contact:
9513861395
101 ಗಣಪತಿ ಹತ್ತಿರ, ಅಗ್ರಹಾರ, ಮೈಸೂರು

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿಯೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

SITE FOR SALE
30x40 S/F, Site For Sale SBM, Layout, Srirampura IInd Stage, Near Vivekananda Circle
9008267070

HOUSE FOR RENT
Gokulam KRS Road Double BED Room 1st Floor Rent 12000/-
9900237315

CHANGE OF NAME
I, Smt. Bibi Hajira, aged 47 yrs, W/o. Abdul Waheed, residing at No. 53/2, 1st floor, 2nd cross, Mahadevapura Extension, Udayagiri, Mysore state on oath that in my passport my name is mentioned as Bibi Hajira Abdul Waheed (Old Name) now I have changed my name as Bibi Hajira for all purposes on my own free will vide affidavit sworn in before Notary Akbar Shariff on 14.08.2023
Sd/- Bibi Hajira

WANTED
Computer Typist (Male/Female) For Advocate Office
Qualification : Typing - English & Kannada (Kan- Nudi / Baraha) in M.S. Word & Excel / Page Maker
9.30am to 5.30pm | Sunday : 10.30am to 3.00pm
Salary Rs. 15,000/- Per Month
FOR EVENING : (MALE ONLY)
6.30pm to 11.00pm | Salary Rs.6,000/- PM
Call : 73493 37469 / 94485 25072

DOCUMENTS LOST
I, Praveen Kumar S N, MIG 4, Lakshmi kanthanagar, 1st Stage Hebbal, Mysore-17 have lost the original allotment letter and Khatha (Name of the Khatha holder S.Nataraju, S/o Late Siddaiah) of House No.678, 6th Cross, Hebbal 2nd Stage, Mysore while shifting the house.
Finders Please Contact :
97419 08336

ಸುವರ್ಣ ಯಾತ್ರ
1. ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 9 ದಿನಗಳು 26–10–23
2. 2 ಜ್ಯೋತಿರ್ಲಿಂಗ ಸೇರಿ ಕಾಶಿ ಪ್ರವಾಸ 7 ದಿನಗಳು 27–10–2023
3) ಪುರಿ ಜಗನ್ನಾಥ ಪ್ರವಾಸ 4 ದಿನಗಳು 26–10–23
4) ಗುಜರಾತ್ ಪ್ರವಾಸ 8 ದಿನಗಳು 31–10–23
9480843945
9008381022

SITE FOR SALE
30x40 Site For Sale Judicial Layout & Railway Layout
9880273834

SITE FOR SALE
40x60 site in Jnanaganaga layout (Subramanya Nagar) 40x60 Site in Kaverigramina Layout
9740088990

WANTED
SALES EXECUTIVE FOR JEWELLERY SHOWROOM ATTRACTIVE SALARY MIN EXP 6 TO 8 YEARS
9448043796

MUDA APPROVED SITES FOR SALE
30x40, 30x50 & 40x60 price 18 Lacks Onwards Near KIT Eng. College Next to Lalbahadur Shastri Nagar Off. T-Narasipura Road
7795609173

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

Shraddhaa Packaging
Weavers Colony, Hebbal Indl. Area, Mysore.
MOB: 9886412655
WANTED WORKERS
Printing works Ladies and Gents PUC Pass or Fail.

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೇಲ್ಸ್ ಮ್ಯಾನ್ ಮತ್ತು ಸೇಲ್ಸ್ ಗರ್ಲ್ಸ್ ಆಕರ್ಷಕ ಸಂಬಳ + ESI, PF, Incentive
ಗಾಂಧಿ ಸರ್ಕಲ್, ಮೈಸೂರು
9980620678

ತಕ್ಷಣ ಬೇಕಾಗಿದ್ದಾರೆ
ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
ವಯೋಮಿತಿ : 18 ರಿಂದ 35 ರೊಳಗೆ
ವಿದ್ಯಾರ್ಹತೆ: SSLC ಮೇಲ್ಪಟ್ಟು
ಉಚಿತ: ತಿಂಡಿ, ಊಟ ವೇತನ 16000(ESI+PF) & Bonus
ಸ್ಥಳ: ಆಲನಹಳ್ಳಿ Bus Stop, Mysore
9538886304
9035269781

ಮನೆ ಮಾರಾಟಕ್ಕಿದೆ
ಕೆ.ಆರ್.ನಗರ ಟೌನ್, ಹುಣಸೂರು ರಸ್ತೆಯಲ್ಲಿ 3 Bed Room with Furnished Independent 30x40 ಅಳತೆ ಮನೆ ಮಾರಾಟಕ್ಕಿದೆ. ಕೆ.ಆರ್.ನಗರ ಚೀರನಹಳ್ಳಿ, ರಸ್ತೆಯಲ್ಲಿ DTCP ಅನುಮೋದಿತ ನಿವೇಶನಗಳು ಮಾರಾಟಕ್ಕಿವೆ.
9483796437

ಕೆಲಸಕ್ಕೆ ಬೇಕಾಗಿದ್ದಾರೆ
ಸಪ್ತಗಿರಿ ರಿಯಲ್ ಎಸ್ಟೇಟ್ ಪತ್ರ ಬರಹಗಾರರು ನುರಿತ ಕನ್ನಡ & ಇಂಗ್ಲೀಷ್ ಬೆರಳಚ್ಚುಗಾರರು, ಕೆಲಸಕ್ಕೆ ಬೇಕಾಗಿದ್ದಾರೆ.
ವಿಳಾಸ: ಉಪ ನೋಂದಣಾಧಿಕಾರಿಗಳ ಕಛೇರಿ ಪೂರ್ವ ರಾಜಕುಮಾರ್ ರಸ್ತೆ, ತ್ರಿವೇಣಿ ಸರ್ಕಲ್ ಶಕ್ತಿನಗರ, ಮೈಸೂರು.
ಸಂಬಳ: 10000/– ರಿಂದ 15000/–
ಜಗನ್ನಾಥ್
9980731333,9986807121

ಬೇಕಾಗಿದ್ದಾರೆ
ನುಡಿ ಟೈಪಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ 12000-15000/-
Ph.9380142144

9/11A ಹಾಗೂ 11B ಖಾತೆಗಳಿಗೆ ಲೋನ್ ಮಾಡಿಕೊಡಲಾಗುವುದು
ಶೀಟಿನ ಮನೆ, ಹೆಂಚಿನ ಮನೆ, ಆರ್‌ಸಿಸಿ ಮನೆ ಮೇಲೆ ಸಾಲ ಮತ್ತು ಮನೆ ಖರೀದಿಸಲು, ಮನೆ ನವೀಕರಣ ಮಾಡಲು ಬ್ಯಾಂಕ್ ಲೋನ್ ಮಾಡಿಕೊಡಲಾಗುವುದು
9008504456

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

ಕೆಲಸಕ್ಕೆ ಬೇಕಾಗಿದ್ದಾರೆ
ನಾನ್ ವೆಜ್ ಹೋಟೆಲ್ ಕೆಲಸಕ್ಕೆ ಸಪ್ಲೈಯರ್ಸ್, ಕ್ಲೀನರ್ಸ್ ಹಾಗೂ ಅಡುಗೆ ಭಟ್ಟರು ಬೇಕಾಗಿದ್ದಾರೆ.
7892176372
8970856325
ಅಕ್ಕಿಚೌಕ, ಕೆ.ಟಿ. ಸ್ಟ್ರೀಟ್, ಕೆ.ಆರ್.ಹಾಸ್ಪಿಟಲ್ ರೋಡ್, ಮೈಸೂರು

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

SITE FOR SALE
1) 33x40 (1320 Sqft) N/W Corner Gayathri Layout (Shankara Nagar) Opp. University Layout
2) SEMI COMMERCIAL SITE KBL Gardenia, South 60ft Road, Near Vijayanagar, 4th Stage-2631 Sqft
9141512156

ಸೈಟ್ ಮಾರಾಟಕ್ಕಿದೆ
ಎಂಪೈರ್ ಹೋಟೆಲ್ ಡೆಡ್‌ಎಂಡ್, 16ನೇ ಕ್ರಾಸ್, ಒಂಟಿಕೊಪ್ಪಲ್, ಮೈಸೂರು. ಕಾರ್ನರ್ ಸೈಟ್, 20x30 E/N 2 ಸೈಡ್ 40 ಫೀಟ್ ರಸ್ತೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
9141534408

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗ ದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

ಸಂಪು ಟ್ಯಾಂಕ್ ಕ್ಲೀನಿಂಗ್
ಸಂಪರ್ಕಿಸಿ:
7975101020

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ,
Mob: 9008711654

Document Lost
S.G. Vishalakshi, No. 2582, 1st Cross, Kalidasa Road, Vontikoppal, Gokulam, Mysore-570 002, lost my house document. Finders please contact:
Mob: 9008831030

ಮನೆ ಬಾಡಿಗೆಗೆ ಇದೆ
ಅಲ್ಲಮ್ಮ ಪ್ರಭು ಮಾರ್ಗ ಬಿಟಿಎಂ ಲೇಔಟ್, 2ನೇ ಅಡ್ಡರಸ್ತೆ, ತಾಲ್ಲೂಕು ಆಫೀಸ್ ಹತ್ತಿರ ಪದವಿ ಪೂರ್ವ ಕಾಲೇಜ್ ಮುಂದೆ ನಂಜನಗೂಡು. ಪೂರ್ವ ಬಾಗಿಲು, ಸೋಲಾರ್, ಬೋರ್‌ವೆಲ್ ನೀರು. 2BHK
7975023201
7815812948

ಕಳೆದಿದೆ
ವಿ.ನಾಗರತ್ನಮ್ಮ # 318, 18ನೇ ಮುಖ್ಯರಸ್ತೆ, ಚಾಮುಂಡೇಶ್ವರಿ ರೈಲ್ವೆ ಬಡಾವಣೆ, ಕೆ.ಆರ್.ಎಸ್.ರಸ್ತೆ, ಮೈಸೂರು–570016ರಲ್ಲಿ ವಾಸವಾಗಿರುವ ಇವರ ಮನೆಯ ಸೇಲ್ ಡೀಡ್ ಸಂಖ್ಯೆ 1ನೇ ಪುಸ್ತಕದ ದಾಸ್ತಾವೇಜು ನಂ. BLN-1-02398-2006-07 ಆಗಿ CD No-BLND252 ನೇ ದಲ್ಲಿ ದಿನಾಂಕ 12-4-2006 ಹಾಗೂ ಖಾಲಿ ನಿವೇಶನದ 1ನೇ ಪುಸ್ತಕದ ದಾಸ್ತಾವೇಜು ನಂ. NMG-1-04997-2005-2006 ಆಗಿ CD No-NMGD45ನೇ ರಲ್ಲಿ ದಿನಾಂಕ: 21–01–2006ರಂದು ನೋಂದಾಯಿಸಲಾಗಿರುತ್ತದೆ.
9986655095



ಟೇಬಲ್ ಮೌಲ್ಡ್ ಇಟ್ಟಿಗೆಗಳು
82178 93849
98442 24480

ಸೋಫಾ ರಿಪೇರ್ಸ್ ಅಂಡ್ ವರ್ಕ್ಸ್
9591012944

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

ಫ್ರಿಡ್ಜ್, ವಾಷಿಂಗ್ ಮಷಿನ್, ಮೈಕ್ರೋ ಓವನ್, LCD, LED TVs Doorstep Service
Mob: 9886226672

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
22–10–23: ಶಿರಡಿ, ಪಂಡರಾಪುರ, ನಾಸಿಕ್, ತ್ರಯಂಬಕೇಶ್ವರ್, ಪುಣೆ ಬಾಲಾಜಿ, ಕೊಲ್ಲಾಪುರ್ ಮಹಾಲಕ್ಷ್ಮೀ.
9–11–2023: ಪುರಿ ಜಗನ್ನಾಥ್, ಕೋಣಾರ್ಕ್, ಚಂದ್ರಭಾಗ್ ಬೀಚ್.
16–11–2023: ದೆಹಲಿ, ವೈಷ್ಣೋದೇವಿ, ಹರಿದ್ವಾರ್, ಋಷಿಕೇಶ್, ಜಮ್ಮು ವೈಷ್ಣೋದೇವಿ.
24–11–2023: ರಾಜಸ್ತಾನ್ ಪ್ಯಾಕೇಜ್.
9964527782, 9591017782

FOR RENT- 1 BHK HOUSE & 2 SHOPS
Mysore Vidyaranyapuram 4th Main, 27th Cross Corner Ground floor 894/A House, North facing having all facilities Vehicle Parking, Solar, Ward Robes, Water Sump, Automatic Motor Pump, Water Tank, Show Case, 2 Fans fitted, Separate Washing Stone.
2 shops west facing measuring 10 x 10 feet available near Sterling theatre.
9448872684/9900079871

SITE FOR SALE
DTCP Approved Site in prime location Nagawala. Featuring top-notch amenities. Priced at just Rs. 1200/sqft. Don't miss this golden opportunity! Contact us today!
6360350541

SITE FOR SALE
30x40 Corner, MUDA Registered premium site for sale, behind Golf Course. Contact:
Mob: 9611346288

MUDA SITE FOR SALE
40x60 East face Hanchya Sathagally Layout, Ring Road, Opp. VTU, adjacent to Service Road. Brokers Excuse. Contact:
9972042115, 9611524504

ಪ್ರಮಾಣ ಪತ್ರ
ಅಮೃತವಲ್ಲಿ ಕೋಂ ಎಂ.ಎಸ್. ಶಂಕರಶೆಟ್ಟಿ, ಅರ್ಕೇಶ್ವರನಗರ, ಕಂಠೇನಹಳ್ಳಿ ಬಡಾವಣೆ, ಕೆ.ಆರ್. ನಗರ ಟೌನ್, ಮೈಸೂರು ಜಿಲ್ಲೆಯಲ್ಲಿ ವಾಸವಾಗಿರುವ ನಾನು ಹೇಳುವುದೇನೆಂದರೆ, ನನ್ನ ಹೆಸರು ಅಮೃತವಲ್ಲಿ, ನನ್ನ ಎಲ್ಲಾ ದಾಖಲಾತಿಗಳಲ್ಲಿ ನನ್ನ ಹೆಸರು ಅಮೃತವಲ್ಲಿ ಎಂದು ಸರಿಯಾಗಿ ನಮೂದು ಆಗಿರುತ್ತದೆ. ಶ್ರೀ ಕನ್ನಿಕಾಪರಮೇಶ್ವರಿ ಕೋ ಆಪರೇಟಿವ್ ಬ್ಯಾಂಕ್ ಲಿ., ಮೈಸೂರಿನ ಷೇರಿನ ದಾಖಲಾತಿಗಳಲ್ಲಿ ಮಾತ್ರ ನನ್ನ ಹೆಸರು ಅಮೃತ ಶಂಕರ್ ಎಂದು ನಮೂದಾಗಿರುತ್ತದೆ. ಆದ್ದರಿಂದ ಅಮೃತವಲ್ಲಿ ಮತ್ತು ಅಮೃತ ಶಂಕರ್ ಈ ಎರಡು ಹೆಸರುಗಳು ನನಗೆ ಸಂಬಂಧಪಟ್ಟ ಹೆಸರುಗಳಾಗಿರುತ್ತವೆ ಎಂದು ನೋಟರಿ ವಿಜಯಕುಮಾರ್ ರವರ ಎದುರು ದಿನಂಕ 6–10–2023ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಅಮೃತವಲ್ಲಿ

ಪ್ರಮಾಣ ಪತ್ರ
ಎಂ.ಎಸ್. ಶಂಕರಶೆಟ್ಟಿ ಬಿನ್ ಲೇಟ್ ಬಿ.ವಿ. ಶ್ರೀಕಂಠಶೆಟ್ಟಿ, ನಂ. 6, ಅರ್ಕೇಶ್ವರನಗರ, ಕಂಠೇನಹಳ್ಳಿ ಬಡಾವಣೆ, ಕೆ.ಆರ್. ನಗರ ಟೌನ್, ಮೈಸೂರು ಜಿಲ್ಲೆಯಲ್ಲಿ ವಾಸವಾಗಿರುವ ನಾನು ಹೇಳುವುದೇನೆಂದರೆ, ನನ್ನ ಹೆಂಡತಿಯ ಹೆಸರು ಅಮೃತವಲ್ಲಿ ಹಾಗೂ ನನ್ನ ಮತ್ತು ಅವರ ಎಲ್ಲಾ ದಾಖಲಾತಿಗಳಲ್ಲಿ ಅವರ ಹೆಸರು ಅಮೃತವಲ್ಲಿ ಎಂದು ಸರಿಯಾಗಿ ನಮೂದಾಗಿರುತ್ತದೆ. ನಾನು ಕೆ.ಎಸ್.ಆರ್.ಟಿ.ಸಿ.ಯ ನೌಕರನಾಗಿ ನಿವೃತ್ತಿ ಹೊಂದಿದ್ದು, ಕೆ.ಎಸ್.ಆರ್.ಟಿ.ಸಿ.ಯ ದಾಖಲಾತಿಗಳಲ್ಲಿ ಮಾತ್ರ ನನ್ನ ಹೆಸರು ಅಮೃತ ಶಂಕರ್ ಎಂದು ನಮೂದಾಗಿರುತ್ತದೆ. ಆದ್ದರಿಂದ ಅಮೃತವಲ್ಲಿ ಮತ್ತು ಅಮೃತ ಶಂಕರ್ ಈ ಎರಡು ಹೆಸರುಗಳು ನನ್ನ ಹೆಂಡತಿಗೆ ಮಾತ್ರ ಸಂಬಂಧಪಟ್ಟ ಹೆಸರುಗಳಾಗಿರುತ್ತದೆ ಎಂದು ನೋಟರಿ ವಿಜಯಕುಮಾರ್ ರವರ ಎದುರು ದಿನಾಂಕ 6–10–2023ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಎಂ.ಎಸ್. ಶಂಕರಶೆಟ್ಟಿ

Sudarshan Saur



ಸೇಲ್ಸ್ & ಸರ್ವೀಸ್
10 ವರ್ಷಗಳ ಗ್ಯಾರಂಟಿ
ATTRACTIVE OFFER
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

S.K.CONSTRUCTION
ಕನಸು ನಿಮ್ಮದು ನನಸು ನಮ್ಮದು ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ, Loan ಮಾಡಿಸಿ ಪ್ರಾರಂಭ 25% ನಾವೇ ಹಾಕಿ 3D Plan ಸಹಿತ ಉತ್ತಮ ಗುಣಮಟ್ಟದ ಮನೆ ಮಾಡಿಕೊಡುತ್ತೇವೆ.
9620528490

SITE FOR SALE MUDA APPROVED & TOWN PANCHAYATH
30x30 Bogadi Gaddige Road 30x40 & 40x60 @ KRS Road
7026901111

SITE FOR SALE
MUDA Approved Bank loan available. 30x40 East Face Near Yadahalli (ಯಡಹಳ್ಳಿ), Mysore
Mob: 9916503184

ಹುಡುಗರು ಬೇಕಾಗಿದ್ದಾರೆ
ಪೈಂಟ್ ಮತ್ತು ಹಾರ್ಡ್‌ವೇರ್ ಅಂಗಡಿಗೆ ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ
ವಜ್ರಕಾಯ ಟ್ರೇಡರ್ಸ್
ಹಳೆ ಕೆಸರೆ MIT ಕಾಲೇಜ್ ರಸ್ತೆ, RBL ಬ್ಯಾಂಕ್ ಹತ್ತಿರ.
9611220060

SITES FOR SALE
30x40 - North Face
30x40 South Face
40x60 West Face
Opp. University Layout, Near Ring Road, 30x40 ATME College, Bannur Road.
Mob: 9900372792

ವಧು–ವರರ ಮಾಹಿತಿ ಕೇಂದ್ರ
ಒಕ್ಕಲಿಗ / ಲಿಂಗಾಯತ / ಕುರುಬ / ನಾಯಕ / SC & ಎಲ್ಲಾ ಜಾತಿಯ ವಧು–ವರರಿಗಾಗಿ ಸಂಪರ್ಕಿಸಿ:
(Second Marriage Also)
Mob: 9343175000

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾದಲ್ಲಿ ITI (Welder) ವೆಲ್ಡರ್ ಹಾಗೂ Diploma in Quality Control ಕೆಲಸಕ್ಕೆ ಪಾಸಾಗಿರುವ, ಅನುಭವವಿರುವ ಹುಡುಗರು ಬೇಕಾಗಿದ್ದಾರೆ ಹಾಗೂ ಮೈಸೂರಿನ ವಿಶ್ವೇಶ್ವರನಗರ ಕಂಪನಿಗೆ House-keeping (ಹೌಸ್‌ಕೀಪಿಂಗ್) ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ಸಂಪರ್ಕಿಸಿ:
8050958451, 9731976148

HOUSE FOR RENT
2BHK HOUSE 1st Floor with Solar and Wardboof Italian Kitchen Near Akshaya Bhandar
9845505706

ಕೆಲಸಕ್ಕೆ ಬೇಕಾಗಿದ್ದಾರೆ
ಕೂರ್ಗಳ್ಳಿ, ಮೇಟಗಳ್ಳಿ, ಭೋಗಾದಿ, ದಟ್ಟಗಳ್ಳಿ, ಇಲ್ಲಿ ಮಿಷನ್ ಆಪರೇಟರ್, Helper ಟೆಲಿಕಾಲರ್, ಸೆಕ್ಯೂರಿಟಿ, ಹೌಸ್ ಕೀಪಿಂಗ್, ಕೆಲಸ ಮಾಡಲು 8th, 9th, 10th, PUC, Any Degree ITI, Deploma, Pass & Fail ಉನ್ನತ ಸಂಬಳ ಹಾಗೂ ವಸತಿ ಸೌಲಭ್ಯ (ಮಹಿಳೆಯರಿಗಾಗಿ ಮಾತ್ರ) ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ:
9036461347,9108180329

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ್ ನಾಲ್ವರ ದೈವ ಚೌಡಿ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಛೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

HOUSE FOR SALE
40x60 Ground & First floor & 25x40 ground floor for sale at Ramakrishnanagar. 30x40 Duplex at Srirampura. Contact:
Mob: 8792538993

ಕೆಲಸಕ್ಕೆ ಬೇಕಾಗಿದ್ದಾರೆ
1. ಸೆಕ್ಯೂರಿಟಿ ಗಾರ್ಡ್ (ಪುರುಷರು): ಡಿ.ಅರಸು ರಸ್ತೆ, ಬನ್ನಿಮಂಟಪ ಹೈವೇ ಸರ್ಕಲ್, ಚಾಮುಂಡಿಪುರಂ, ಕುವೆಂಪುನಗರ, ಕೆ.ಆರ್.ಎಸ್ ಹಿನಕಲ್ ಹತ್ತಿರ
2. ಸೆಕ್ಯೂರಿಟಿ, ಸೂಪರ್‌ವೈಸರ್ ಬೇಕಾಗಿದ್ದಾರೆ. (ಎಸ್‌ಎಸ್‌ಎಲ್‌ಸಿ ಪಾಸ್, ಸ್ಕೂಟರ್ ಇರಬೇಕು, ವಯಸ್ಸು 45ರ ಒಳಗೆ)
8310098788

HOUSE FOR LEASE
Newly Built 2BHK Independent House, Fully Furnished with Solar Ground Floor Only @ Lalithadri Nagar, Near Ring Road, Behind Indian Oil Petrol Bunk
9964414484

ಹೆಸರು ಬದಲಾವಣೆ
ಗೌರಮ್ಮ ಸಿ.ಕೆ. ಕೋಂ ಮುತ್ತಪ್ಪ ಎ.ಎಂ. # 905/25, 4ನೇ ಮೇನ್, 2ನೇ ಕ್ರಾಸ್, ವಿದ್ಯಾರಣ್ಯಪುರಂ, ಮೈಸೂರು –570008, ಆದ ನಾನು ನನ್ನ ಹೆಸರನ್ನು ರೇಖಾ ಮುತ್ತಪ್ಪ ಎ.ಎಂ ಎಂಬುದಾಗಿ ನೋಟರಿ ಕಾವೇರಪ್ಪ ಎಸ್.ಡಿ ಇವರ ಸಮ್ಮುಖದಲ್ಲಿ ದಿನಾಂಕ: 7–7–2023ರಂದು ಪೊನ್ನಂಪೇಟೆ ಕೊಡಗು ಜಿಲ್ಲೆಯಲ್ಲಿ ಬದಲಾಯಿಸಿಕೊಂಡಿರುತ್ತೇನೆ.
ಸಹಿ/– ರೇಖಾ ಮುತ್ತಪ್ಪ ಎ.ಎಂ.

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಮಧ್ಯ ಭಾಗದಲ್ಲಿರುವ ಲಾಡ್ಜ್‌ಗೆ ಲೇಡಿ ಸ್ವೀಪರ್ ಕೆಲಸಕ್ಕೆ ಬೇಕಾಗಿದ್ದಾರೆ. ವಯಸ್ಸು: 18 ರಿಂದ 40 ಮಧ್ಯವರ್ತಿಗಳಿಗೆ ಅವಕಾಶವಿಲ್ಲ
9663991888
9663427888
ಕೆಲಸದ ವೇಳೆ : 9 ರಿಂದ 5.30

SITE FOR SALE
30X40 ರಮಾಬಾಯಿ ನಗರ ರೈಲ್ವೆ ವರ್ಕ್‌ಶಾಪ್ ಲೇಔಟ್ (ಮಧ್ಯವರ್ತಿಗಳು ಕ್ಷಮಿಸಿ)
9972572465

ಬೇಕಾಗಿದ್ದಾರೆ/WANTED
ಮೈಸೂರನಲ್ಲಿ KD ರೋಡ್‌ನಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಅನುಭವವುಳ್ಳ
1) ದೋಸಾ ಚೆಫ್ DOSA CHEF,
2) ಸಪ್ಲೈರ್ Supplier, 3) ಹೆಚ್ಚುವುದು ರುಬ್ಬುವ
4) TEA, COFFEE ಟೀ ಕಾಫಿಗೆ ಬೇಕಾಗಿದ್ದಾರೆ.
ಆಕರ್ಷಕ ಸಂಬಳ ಹಾಗೂ ಉತ್ತಮ ಸೌಲಭ್ಯಗಳನ್ನು ನೀಡಲಾಗುತ್ತದೆ.
8884066266

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರಿನಲ್ಲಿ ಕ್ಯಾಂಪಸ್ ತೆರೆಯಲು

ಅಮೇರಿಕಾದ ಎಕಾಗ್ರಿಡ್ ವಿಶ್ವವಿದ್ಯಾನಿಲಯ ಉತ್ಸುಕತೆ

ಇದಕ್ಕಾಗಿ 200 ಎಕರೆ ಭೂಮಿಗೆ ಬೇಡಿಕೆ

● ಅಮೇರಿಕಾದಲ್ಲಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಜೊತೆ ಚರ್ಚೆ ● ಕೃತಕ ಬುದ್ಧಿಮತ್ತೆ ಬಗ್ಗೆ ಉನ್ನತ ಸಂಶೋಧನೆ ಉದ್ದೇಶ ● ಮೈಸೂರಿನಲ್ಲಿ ಕ್ಯಾಂಪಸ್ ನಿರ್ಮಾಣವಾದರೆ ಸ್ಥಳೀಯರಿಗೆ ಸಾಕಷ್ಟು ಉದ್ಯೋಗಾವಕಾಶ



ಮೈಸೂರು, ಅ.6(ಬಿಎಲ್‌ಯು)– ಕೃತಕ ಬುದ್ಧಿಮತ್ತೆಯ ಸಂಶೋಧನೆ ಸೇರಿದಂತೆ ಆಧುನಿಕ ತಂತ್ರಜ್ಞಾನ ಕ್ಷೇತ್ರದ ಹಲವು ಸಂಶೋಧನಾ ಕಾರ್ಯದ ಮೂಲಕ ಹೆಸರುವಾಸಿಯಾಗಿರುವ ಅಮೇರಿಕಾದ ಎಕಾಗ್ರಿಡ್ ವಿಶ್ವವಿದ್ಯಾನಿಲಯವು ಮೈಸೂರಿನಲ್ಲಿ ಹೊಸ ಕ್ಯಾಂಪಸ್ ತೆರೆಯಲು ಆಸಕ್ತಿ ತೋರಿದೆ.

ಮೈಸೂರಿನಲ್ಲಿ ಕ್ಯಾಂಪಸ್ ತೆರೆಯಲು 200 ಎಕರೆ ಭೂಮಿ ಅವಶ್ಯಕತೆ ಇದೆ ಎಂದು ವಿಶ್ವವಿದ್ಯಾನಿಲಯದ ಪ್ರತಿನಿಧಿಗಳು ಕರ್ನಾಟಕ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಿದ್ದಾರೆ.

ಸದ್ಯ ಅಮೇರಿಕಾ ಪ್ರವಾಸದಲ್ಲಿರುವ ಬಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ಎಕಾಗ್ರಿಡ್ ವಿಶ್ವವಿದ್ಯಾನಿಲಯದ ಸಿಒಒ ಶೈಲೇಂದ್ರ ಕುಮಾರ್ ಹಾಗೂ ಪ್ರೊ.ಕೃಷ್ಣ ಸಾರಸ್ವತ್ ಅವರೊಡನೆ ಈ ಸಂಬಂಧ ಸುದೀರ್ಘ ಮಾತುಕತೆ ನಡೆಸಿದ್ದಾರೆ. ಬೆಂಗಳೂರು ಅಥವಾ ಮೈಸೂರಿನಲ್ಲಿ ಕ್ಯಾಂಪಸ್ ತೆರೆಯಲು ನಾವು ಉತ್ಸುಕರಾಗಿದ್ದೇವೆ. ಇದಕ್ಕಾಗಿ 200 ಎಕರೆ ಭೂಮಿ ಅವಶ್ಯವಿದೆ ಎಂದು ಬೇಡಿಕೆ ಸಲ್ಲಿಸಿರುವ ಎಕಾಗ್ರಿಡ್ ವಿಶ್ವವಿದ್ಯಾನಿಲಯದ ಪ್ರೊ.ಕೃಷ್ಣ ಸಾರಸ್ವತ್, ತಮ್ಮ ವಿಶ್ವವಿದ್ಯಾನಿಲಯದ ಸಂಶೋಧನಾ ಕಾರ್ಯಗಳೇನು ಎಂಬುದನ್ನು ಎಂ.ಬಿ.ಪಾಟೀಲ್‌ಗೆ ಮನದಟ್ಟು ಮಾಡಿಕೊಟ್ಟಿದ್ದಾರೆ.

ಉನ್ನತ ಶಿಕ್ಷಣ ಕ್ಷೇತ್ರದ ಬೆಳವಣಿಗೆಗೆ ಕರ್ನಾಟಕ ಸರ್ಕಾರದ ಅತ್ಯುತ್ತಮ ನೀತಿಗಳನ್ನು ಈ ವೇಳೆ ಎಂ.ಬಿ.ಪಾಟೀಲ್ ಎಕಾಗ್ರಿಡ್ ವಿಶ್ವವಿದ್ಯಾನಿಲಯದ ಪ್ರತಿನಿಧಿಗಳಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಎಕಾಗ್ರಿಡ್ ವಿಶ್ವವಿದ್ಯಾನಿಲಯವು 2018ರಲ್ಲಿ ಭಾರತದಲ್ಲಿ ಕಾರ್ಯಾರಂಭ ಮಾಡಿದೆ. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕ್ಷೇತ್ರದಲ್ಲಿ ಸಂಶೋಧನೆ ನಡೆಸಲು ವಿಶ್ವದ ಪ್ರತಿಷ್ಠಿತ ಕಂಪನಿಗಳು ತೊಡಗಿವೆ. ಈ ಹಿನ್ನೆಲೆ ಎಕಾಗ್ರಿಡ್ ವಿಶ್ವವಿದ್ಯಾನಿಲಯವು ಕೃತಕ ಬುದ್ಧಿಮತ್ತೆ ಸಂಶೋಧನೆ ಬಗ್ಗೆ ಉನ್ನತ ಮಟ್ಟದ ಗುರಿ ಹೊಂದಿದೆ.

ಕರ್ನಾಟಕ ಸರ್ಕಾರ ಮೈಸೂರು ಇಲ್ಲವೇ ಬೆಂಗಳೂರಿನಲ್ಲಿ ಅವಶ್ಯವಿರುವ 200 ಎಕರೆ ಭೂಮಿ ನೀಡಿದರೆ ಇಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸಲು ಎಕಾಗ್ರಿಡ್ ವಿಶ್ವವಿದ್ಯಾನಿಲಯ ಉದ್ದೇಶಿಸಿದೆ. ಈ ಮೂಲಕ ಭಾರತದ ಅಗ್ರಶ್ರೇಣಿಯ ವಿಶ್ವವಿದ್ಯಾನಿಲಯದಲ್ಲಿ ಎಕಾಗ್ರಿಡ್ ವಿಶ್ವವಿದ್ಯಾನಿಲಯವನ್ನು ಒಂದಾಗಿಸಲು ವಿಶ್ವವಿದ್ಯಾನಿಲಯದ ಪ್ರತಿನಿಧಿಗಳು ಮಹಾತ್ವಾಕಾಂಕ್ಷೆ ಹೊಂದಿದ್ದಾರೆ.

ಮೈಸೂರಿನಲ್ಲಿ ಈಗಾಗಲೇ ಯಶಸ್ವಿಯಾಗಿ ಮುನ್ನಡೆಯುತ್ತಿರುವ ಇನ್ಫೋಸಿಸ್, ವಿಪ್ರೋದಂತಹ ಐಟಿ ದಿಗ್ಗಜ ಕಂಪನಿಗಳ ಜೊತೆಗೆ ಅಮೆರಿಕಾ ಮೂಲದ ಮತ್ತೊಂದು ವಿಶ್ವವಿದ್ಯಾನಿಲಯದ ಕ್ಯಾಂಪಸ್ ಇಲ್ಲಿ ಸ್ಥಾಪನೆಯಾದರೆ ಸಾಂಸ್ಕೃತಿಕ ನಗರಿ ಮೈಸೂರಿನ ಹಿರಿಮೆಗೆ ಮತ್ತೊಂದು ಗರಿ ಸೇರ್ಪಡೆಯಾಗಲಿದೆ.

ಈ ಮೂಲಕ ಎಕಾಗ್ರಿಡ್ ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸ ಮಾಡಲು ದೇಶ-ವಿದೇಶದ ಹಲವು ವಿದ್ಯಾರ್ಥಿಗಳು ಮೈಸೂರಿಗೆ ಆಗಮಿಸಲಿದ್ದಾರೆ. 200 ಎಕರೆ ಪ್ರದೇಶದಲ್ಲಿ ಕ್ಯಾಂಪಸ್ ನಿರ್ಮಾಣವಾಗುವ ಕಾರಣ ಸ್ಥಳಿಯರಿಗೆ ಸಾಕಷ್ಟು ಉದ್ಯೋಗಾವಕಾಶ ಕೂಡ ದೊರೆಯಲಿದೆ.

ಬೆಂಗಳೂರು ಅಥವಾ ಮೈಸೂರಿನಲ್ಲಿ ಎಕಾಗ್ರಿಡ್ ವಿಶ್ವವಿದ್ಯಾನಿಲಯದವರು 200 ಎಕರೆ ಭೂಮಿ ಕೇಳುತ್ತಿದ್ದಾರೆ. ಆದರೆ ಬೆಂಗಳೂರಿನಲ್ಲಿ ಇವರು ಬೇಡಿಕೆ ಸಲ್ಲಿಸಿರುವಷ್ಟು ಭೂಮಿ ಸಿಗುವುದು ಕಷ್ಟ.

ಫಾಕ್ಸ್ ಕಾನ್ ಸೇರಿದಂತೆ ಹಲವು ಕಂಪನಿಗಳು ಬೆಂಗಳೂರಿನಲ್ಲಿ ಕಂಪನಿ ಸ್ಥಾಪಿಸಲು ಕರ್ನಾಟಕ ಸರ್ಕಾರದ ಜೊತೆ ಒಪ್ಪಂದ ಮಾಡಿಕೊಂಡಿವೆ. ಈ ಕಂಪನಿಗಳಿಗೆ ಭೂಮಿ ನೀಡಲಾಗುತ್ತಿದೆ. ಇದು ಬೆಂಗಳೂರಿಗೆ ಸುಮಾರು 80 ಕಿಲೋಮೀಟರ್ ದೂರದಲ್ಲಿದೆ. ಇದನ್ನೆಲ್ಲಾ ಲೆಕ್ಕಾಚಾರ ಮಾಡಿಯೇ ಎಕಾಗ್ರಿಡ್ ವಿಶ್ವವಿದ್ಯಾನಿಲಯ ಮೈಸೂರಿನಲ್ಲಿ ಕ್ಯಾಂಪಸ್ ತೆರೆಯಲು ಉತ್ಸುಕತೆ ತೋರಿದೆ.

ಮೈಸೂರಿನಲ್ಲಿ ಏರ್‌ಪೋರ್ಟ್ ಸೌಲಭ್ಯವಿದೆ. ನಗರದ ಸನಿಹದಲ್ಲಿ ನದಿ ಪಾತ್ರವಿರುವ ಕಾರಣ ನೀರಿಗೆ ಯಾವುದೇ ತೊಂದರೆ ಇಲ್ಲ. ರಾಜಧಾನಿ ಬೆಂಗಳೂರಿಗೆ ಎಕ್ಸ್‌ಪ್ರೆಸ್ ಹೈವೆ, ಸುಸಜ್ಜಿತ ರೈಲು ಸಂಪರ್ಕ ಸೌಲಭ್ಯವೂ ಇದೆ. ಈ ಹಿನ್ನೆಲೆಯಲ್ಲಿ ಉತ್ತಮ ಪರಿಸರವಿರುವ ಮೈಸೂರಿನಲ್ಲಿ ಎಕಾಗ್ರಿಡ್ ವಿಶ್ವವಿದ್ಯಾನಿಲಯ ಅಂತಿಮವಾಗಿ ಇಲ್ಲೇ ಕ್ಯಾಂಪಸ್ ತೆರೆಯುವ ಸಾಧ್ಯತೆ ಇದೆ.

ಈ ಬಾರಿ ಶ್ರೀಸಾಮಾನ್ಯರ ದಸರಾ ಆಗಬೇಕು

ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಗ್ರಹ



ಮೈಸೂರು, ಅ.6–ಜಾಗತಿಕ ಮಟ್ಟದಲ್ಲಿ ಐತಿಹಾಸಿಕ ಮೈಸೂರು ದಸರಾ ಮಹೋತ್ಸವದ ಪ್ರಚಾರವಾಗಬೇಕು ಹಾಗೂ ಅದು ಜನಸಾಮಾನ್ಯರ ದಸರಾ ಆಗಿರಬೇಕು ಎಂದು ಮಾಜಿ ಮೇಯರ್ ಸಂದೇಶ್ ಒತ್ತಾಯಿಸಿದ್ದಾರೆ.

ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ವಿಮಾನ ನಿಲ್ದಾಣ ಇನ್ನಿತರ ಸ್ಥಳಗಳಲ್ಲಿ ಪೋಸ್ಟರ್ ಅಂಟಿಸಿ, ಸ್ಥಳೀಯವಾಗಿ ದಸರಾ ಬಗ್ಗೆ ಪ್ರಚಾರ ಮಾಡಿದರೆ ಪ್ರಯೋಜನವಿಲ್ಲ. ಇಲ್ಲಿನ ಮೈಸೂರಿನ ಪ್ರವಾಸೋದ್ಯಮಕ್ಕೆ ದಸರಾ ಆಕ್ಸಿಜನ್ ಇದ್ದಂತೆ. ವರ್ಷವಿಡೀ ನಷ್ಟವಾಗಿದ್ದರೂ ವರ್ತಕರು ದಸರಾದಲ್ಲಿ ಒಂದಷ್ಟು ಚೇತರಿಕೆ ಕಾಣುತ್ತಾರೆ. ಈ ನಿಟ್ಟಿನಲ್ಲಿ ದೇಶ–ವಿದೇಶಗಳಿಂದ ಹೆಚ್ಚಿನ ಸಂಖ್ಯೆಯ ಪ್ರವಾಸಿಗರನ್ನು ದಸರೆಗೆ ಸೆಳೆಯಬೇಕು. ಹೀಗಾಗಿ ವ್ಯವಸ್ಥಿತವಾಗಿ ಜಾಗತಿಕ ಮಟ್ಟದಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಎಂದು ಹೇಳಿದ್ದಾರೆ.

ಗೋಲ್ಡ್ ಪಾಸ್ ವ್ಯವಸ್ಥೆಯೇ ಅರ್ಥವಾಗುವುದಿಲ್ಲ ಎಂದಿರುವ ಅವರು, ಪ್ರತಿವರ್ಷ ಎಷ್ಟು ಗೋಲ್ಡ್ ಪಾಸ್ ಪ್ರಿಂಟ್ ಮಾಡಿಸಲಾಗುತ್ತದೆ, ಅದಕ್ಕೆ ತಗಲುವ ವೆಚ್ಚ ಎಷ್ಟು, ಎಷ್ಟು ಜನರಿಗೆ ಮಾರಾಟ ಮಾಡಲಾಗುತ್ತದೆ, ಉಳಿದವುಗಳನ್ನು ಏನು ಮಾಡುತ್ತಾರೆ ಎನ್ನುವುದು ನಿಗೂಢ ರಹಸ್ಯ. ಈ ಬಗ್ಗೆ ಯಾವುದೇ ಮಾಹಿತಿ ಸಿಗುವುದಿಲ್ಲ. ಅಧಿಕಾರಿಗಳು ಹೇಳುವ ಅಂಕಿಅಂಶ ವಾಸ್ತವಕ್ಕೆ ದೂರವಾಗಿರುತ್ತದೆ. ಅವರು ಹೇಳಿದ್ದಕ್ಕಿಂತ ಹತ್ತು ಪಟ್ಟು ಜನರಲ್ಲಿ ಗೋಲ್ಡ್ ಪಾಸ್ ಇರುತ್ತದೆ. ಕಡೇ ಗಳಿಗೆಯಲ್ಲಿ ಬ್ಲಾಕ್ ಟಿಕೆಟ್‌ನಂತೆ ಭಾರೀ ಮೊತ್ತಕ್ಕೆ ಮಾರಾಟ ಮಾಡುವುದೂ ಉಂಟು. ಇದರ ಪರಿಣಾಮ ಜಂಬೂ ಸವಾರಿ ದಿನ ಅರಮನೆ ಆವರಣ ಹಾಗೂ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಅದ್ವಾನವಾಗುತ್ತದೆ. ಹದಿನೈದು ಸಾವಿರಕ್ಕೆ ಬದಲಾಗಿ ಮೂವತ್ತು ನಲವತ್ತು ಸಾವಿರ ಜನ ಅರಮನೆ ಆವರಣ ಸೇರುತ್ತಾರೆ. ಹಾಗಾದರೆ ಅವರೆಲ್ಲಾ ಯಾರು ಎಂಬುದೇ ಚಿದಂಬರ ರಹಸ್ಯ. ದಸರಾ ವಿಶೇಷಾಧಿಕಾರಿಗಳೂ ಆದ ಜಿಲ್ಲಾಧಿಕಾರಿಗಳು ಈ ಬಗ್ಗೆ ಗಮನಹರಿಸಬೇಕು. ಮುಖ್ಯಮಂತ್ರಿಗಳೂ ಮೈಸೂರು ಜಿಲ್ಲೆಯವರಾಗಿರುವುದರಿಂದ ಈ ಬಾರಿ ದಸರಾ ಅತ್ಯಂತ ವ್ಯವಸ್ಥಿತವಾಗಿ ನಡೆಸಬೇಕು. ಮುಖ್ಯವಾಗಿ ಗೋಲ್ಡ್ ಕಾರ್ಡ್ ವ್ಯಾಪಾರೀಕರಣಕ್ಕೆ ಅವಕಾಶ ಕೊಡಬಾರದು. ಆರಂಭಿಕ ಹಂತದಲ್ಲೇ ನಿಗಾ ವಹಿಸಿದರೆ ಹಣ ಮಾಡುವ ಜಾಲ ತಡೆಯಬಹುದು. ಈ ನಿಟ್ಟಿನಲ್ಲಿ ಸೂಕ್ತ ಕ್ರಮ ವಹಿಸುವ ಮೂಲಕ ಕೇವಲ ರಾಜಕಾರಣಿಗಳು, ಅಧಿಕಾರಿಗಳು, ಹಣವಂತರ ದಸರಾ ಆಗದೆ ಜನಸಾಮಾನ್ಯರ ದಸರಾ ಆಚರಣೆಗೆ ಮುನ್ನುಡಿ ಬರೆಯಬೇಕು ಎಂದು ಸಂದೇಶ್ ಸ್ವಾಮಿ ಆಗ್ರಹಿಸಿದ್ದಾರೆ.

ಇಂದಿನಿಂದ KSRTC 'ಪಲ್ಲಕ್ಕಿ' ಸಂಚಾರ



ಬೆಂಗಳೂರು: ಹವಾನಿಯಂತ್ರಿತ ಬಸ್‌ಗಳನ್ನಷ್ಟೇ ಬ್ರ್ಯಾಂಡ್ ಮಾಡಿಕೊಳ್ಳುತ್ತಾ ಬಂದಿದ್ದ ಕೆಎಸ್‌ಆರ್‌ಟಿಸಿ ಇದೇ ಮೊದಲ ಬಾರಿಗೆ ಹವಾನಿಯಂತ್ರಿತ ರಹಿತ ಬಸ್ 'ಪಲ್ಲಕ್ಕಿ'ಯನ್ನು ಹೊಸ ಬ್ರ್ಯಾಂಡ್ ಮಾಡಿ ರಸ್ತೆ ಗಿಳಿಸುತ್ತಿದೆ. ಈ ಬಸ್‌ಗೆ ನಾಳೆ (ಅ. 7) ಮುಖ್ಯಮಂತ್ರಿ ಸಿದ್ದ ರಾಮಯ್ಯ ಚಾಲನೆ ನೀಡಲಿದ್ದಾರೆ. ಮಂಗಳೂರು, ಉಡುಪಿ, ಪುತ್ತೂರು, ಶಿವಮೊಗ್ಗ, ಕಾರವಾರ, ಬೆಳಗಾವಿ, ಹುಬ್ಬಳ್ಳಿ, ಬೀದರ್, ಕಲಬುರಗಿ, ರಾಯಚೂರು, ಕೊಪ್ಪಳ, ಯಾದಗಿರಿ ಸಹಿತ ರಾಜ್ಯಾದ್ಯಂತ ಸಂಚರಿಸಲಿರುವ ಪಲ್ಲಕ್ಕಿಯ ಸೌಲಭ್ಯ ಪಾಂಡಿಚೇರಿ, ಚೆನ್ನೈ, ಕೊಯಮತ್ತೂರು, ಮಂತ್ರಾಲಯ, ಕುಂಭಕೋಣಕ್ಕೆ ಪ್ರಯಾಣಿಸುವವರಿಗೂ ಸಿಗಲಿದೆ.

100 ಸಾರಿಗೆ ಬಸ್: ಈಗಿರುವ ಸಾರಿಗೆ ಬಸ್‌ಗಳಿಗಿಂತ ಉನ್ನತೀಕರಿಸಲಾಗಿರುವ 100 ಸಾರಿಗೆ ಬಸ್‌ಗಳಿಗೂ ಶನಿವಾರ ಚಾಲನೆ ದೊರೆಯಲಿದೆ. ಸೀಟುಗಳ ಸಂಖ್ಯೆ 54/56ರಿಂದ 51ಕ್ಕೆ ಇಳಿಸಲಾಗಿದೆ. ಕಿಟಕಿಗಳನ್ನು, ಎದುರಿನ ಗಾಜುಗಳನ್ನು ದೊಡ್ಡದಾಗಿ ಮಾಡಲಾಗಿದೆ. ಉತ್ತಮ ಸೀಟು ಅಳವಡಿಸಲಾಗಿದೆ. ಎಲ್ಲ ಜಿಲ್ಲೆಗಳಿಗೂ ಈ ಸಾರಿಗೆ ಹೊಸ ಬಸ್‌ಗಳು ಸಂಚರಿಸಲಿವೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇರಾನಿನ ನರ್ಗೆಸ್ ಮೊಹಮ್ಮದಿಗೆ ನೊಬೆಲ್ ಶಾಂತಿ ಪ್ರಶಸ್ತಿ!

ಮಹಿಳೆಯರ ಮೇಲಿನ ದಬ್ಬಾಳಿಕೆ ವಿರುದ್ಧ ಹೋರಾಟ ನಡೆಸಿದ್ದಕ್ಕಾಗಿ 31 ವರ್ಷ ಶಿಕ್ಷೆಗೆ ಗುರಿಯಾಗಿ ಜೈಲಿನಲ್ಲಿರುವ ನರ್ಗೆಸ್



ಸ್ಟಾಕ್ ಹೋಮ್, ಅ.6– ಇರಾನ್‌ನಲ್ಲಿ ಮಹಿಳೆಯರ ಮೇಲಿನ ದಬ್ಬಾಳಿಕೆ, ಮಾನವ ಹಕ್ಕುಗಳು ಮತ್ತು ಎಲ್ಲರ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ ನರ್ಗೆಸ್ ಮೊಹಮ್ಮದಿ ಅವರನ್ನು 2023ನೇ ಸಾಲಿನ ನೊಬೆಲ್ ಶಾಂತಿ ಪ್ರಶಸ್ತಿ ಲಭಿಸಿದೆ. ನರ್ಗೆಸ್ ಮೊಹಮ್ಮದಿ ಮಹಿಳಾ ಮತ್ತು ಮಾನವ ಹಕ್ಕುಗಳ ಪರ ವಕೀಲೆ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾಗಿದ್ದಾರೆ.

ಈ ವರ್ಷದ ಶಾಂತಿ ಪ್ರಶಸ್ತಿಯು ಮಹಿಳೆಯರನ್ನು ಗುರಿಯಾಗಿಸುವ ತಾರತಮ್ಯ ಮತ್ತು ದಬ್ಬಾಳಿಕೆಯ ಪ್ರಭುತ್ವದ ಆಡಳಿತದ ನೀತಿಗಳ ವಿರುದ್ಧ ಪ್ರದರ್ಶಿಸಿದ ಲಕ್ಷಾಂತರ ಜನರನ್ನು ಗುರುತಿಸುತ್ತದೆ ಎಂದು ನೊಬೆಲ್ ಸಮಿತಿಯು ಹೇಳಿದೆ.

ಅಪಾರವಾದ ವೈಯಕ್ತಿಕ ನಷ್ಟದೊಂದಿಗೆ ಮೊಹಮ್ಮದಿ ಹೋರಾಟ ಮಾಡಿಕೊಂಡು ಬಂದಿದ್ದು, ಇರಾನ್ ಆಡಳಿತ 13 ಬಾರಿ ಅವರನ್ನು ಬಂಧಿಸಿದೆ. ಐದು ಬಾರಿ ಅಪರಾಧಿ ಎಂದು ತೀರ್ಪು ನೀಡಿದೆ. ಅಲ್ಲದೇ ಆಕೆಗೆ ಒಟ್ಟು 31 ವರ್ಷಗಳ ಜೈಲು ಶಿಕ್ಷೆ ಮತ್ತು 154 ಛಡಿ ಏಟಿನ ಶಿಕ್ಷೆ ವಿಧಿಸಿದೆ. ಮೊಹಮ್ಮದಿ ಇನ್ನೂ ಕೂಡ ಜೈಲಿನಲ್ಲಿದ್ದಾರೆ.

ಉಚಿತ ಮೂತ್ರಶಾಸ್ತ್ರ ತಪಾಸಣಾ ಶಿಬಿರ

ಮೈಸೂರು, ಅ. 6– ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ನಾರಾಯಣ ಮೆಡಿಕಲ್ ಸೆಂಟರ್‌ನಲ್ಲಿ ನಾಳೆ (ಅ. 7) ಬೆಳಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಉಚಿತ ಮೂತ್ರಶಾಸ್ತ್ರ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8904004606 ಸಂಪರ್ಕಿಸಬಹುದು.

ನಾಳೆ ಸರ್ಕಾರಿ ನೌಕರರ ಸಂಘದಿಂದ ಪ್ರತಿಭಾ ಪುರಸ್ಕಾರ



ಮೈಸೂರು, ಅ.6(ಜಿಎ)– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಮೈಸೂರು ಜಿಲ್ಲಾ ಘಟಕದ ವತಿಯಿಂದ ಅ.8ರಂದು ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11 ಗಂಟೆಗೆ ನಗರದ ಮಾನಸಗಂಗೋತ್ರಿ ಆವರಣದಲ್ಲಿರುವ ಸೆನೆಟ್ ಭವನದಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ. ಪ್ರತಿಭಾ ಪುರಸ್ಕಾರವನ್ನು ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ ನೀಡಿ ಗೌರವಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಶ್ರೀವತ್ಸ, ಕೆ.ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಮಧು.ಜಿ.ಮಾದೇಗೌಡ, ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ, ಜಿಲ್ಲಾಧಿಕಾರಿ, ನಗರ ಪೊಲೀಸ್ ಆಯುಕ್ತರು, ಜಿಪಂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಮಹಾನಗರ ಪಾಲಿಕೆ ಆಯುಕ್ತರು ಮತ್ತು ಕೇಂದ್ರ, ಜಿಲ್ಲಾ, ತಾಲೂಕು ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು, ಜಿಲ್ಲೆಯ ಎಲ್ಲಾ ಇಲಾಖೆಯ ಸಂಘಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಈ ಸಮಾರಂಭದಲ್ಲಿ 2022–23ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಯಲ್ಲಿ ಶೇ.90ರಷ್ಟು ಅಂಕ ಗಳಿಸಿರುವ 248 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಗುತ್ತಿದ್ದು, ಈ ಸಮಾರಂಭದಲ್ಲಿ ವಿದ್ಯಾರ್ಥಿಗಳು ಅವರ ಪೋಷಕರು ಸೇರಿ ಸುಮಾರು 700 ರಿಂದ 800 ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ರಮೇಶ್, ಸುರೇಶ್, ಗಿರೀಶ್, ಆನಂದ್ ಮತ್ತು ರೇವಣ್ಣ ಉಪಸ್ಥಿತರಿದ್ದರು.

ವಿವಿಧ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

ಮೈಸೂರು, ಅ.6– 2023–24ನೇ ಸಾಲಿಗೆ ಅರ್ಹ ವಿಕಲಚೇತನ ವ್ಯಕ್ತಿಗಳಿಗೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆ ವತಿಯಿಂದ ವಿವಿಧ ಸೌಲಭ್ಯಗಳನ್ನು ಒದಗಿಸಲು 8 ಯೋಜನೆಗಳಾದ ಮೆರಿಟ್ ವಿದ್ಯಾರ್ಥಿ ವೇತನಕ್ಕಾಗಿ ಬಹುಮಾನ ಹಣ, ಶಿಶುಪಾಲನಾ ಭತ್ಯೆ, ನಿರುದ್ಯೋಗ ಭತ್ಯೆ, ಆಧಾರ ಯೋಜನೆ, ಮರಣ ಪರಿಹಾರ ನಿಧಿ, ಸಾಧನೆ ಯೋಜನೆ, ಪ್ರತಿಭೆ ಯೋಜನೆ, ವೈದ್ಯಕೀಯ ಪರಿಹಾರ ನಿಧಿ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅಕ್ಟೋಬರ್ 15 ಕೊನೆಯ ದಿನಾಂಕವಾಗಿದ್ದು, https://sevasindhuservices.karnataka.gov.in ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ:0821–2490333 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ವಸ್ತುಪ್ರದರ್ಶನದಲ್ಲಿ ಮೂಡುತ್ತಿವೆ 'ಚಂದ್ರಯಾನ-3'; ಗ್ಯಾರಂಟಿ ಯೋಜನೆಗಳ ಆಕರ್ಷಕ ಮರಳಿನ ಕಲಾಕೃತಿ, ಸಂದೇಶಗಳು





● ಗಣೇಶ್.ಎ

ಮೈಸೂರು, ಅ.6–ಮೈಸೂರು ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಈ ಬಾರಿ ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿ ಯೋಜನೆ ಮತ್ತು ಚಂದ್ರಯಾನ–3ರ ವಿಕ್ರಮ್, ಪ್ರಗ್ಯಾನ್ ರೋವರ್ ಮರಳಿನ ಕಲಾಕೃತಿಗಳು ರೂಪುಗೊಂಡು ಜನರನ್ನು ಆಕರ್ಷಿಸಲಿವೆ.

ಕಳೆದ ಬಾರಿ ಮರಳಿನಲ್ಲಿ ನಟ ಪುನೀತ್ ರಾಜ್‌ಕುಮಾರ್, ಪ್ರಧಾನಿ ನರೇಂದ್ರ ಮೋದಿ, ಸ್ವಾತಂತ್ರ್ಯ ಹೋರಾಟಗಾರರ ಮರಳಿನ ಕಲಾಕೃತಿಗಳು ಆಕರ್ಷಿಸಿದ್ದವು. ಈ ಬಾರಿ ಮತ್ತಷ್ಟು ಜನರ ಆಕರ್ಷಿಸಲು ಮತ್ತು ಸರ್ಕಾರದ ಗ್ಯಾರಂಟಿ ಯೋಜನೆ ಬಗ್ಗೆ ಅರಿವು ಮೂಡಿಸಲು ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಒಂದು ಭಾಗದಲ್ಲಿ, ಮತ್ತೊಂದೆಡೆ ವಿಶ್ವವೇ ಭಾರತದತ್ತ ತಿರುಗಿನೋಡುವಂತೆ ಮಾಡಿದ ಚಂದ್ರಯಾನ–3ರ ಯಶಸ್ಸನ್ನು ಸಂಭ್ರಮಿಸಲು ಮುಂದಾಗಿದ್ದು ವಿಕ್ರಮ್, ಪ್ರಗ್ಯಾನ್ ರೋವರ್ ಕಲಾಕೃತಿಗಳ ನಿರ್ಮಾಣ ಭರದಿಂದ ಸಾಗಿದೆ.

ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷಗಳಿಂದ ಸ್ಥಗಿತಗೊಂಡಿದ್ದ ದಸರಾ ವಸ್ತು ಪ್ರದರ್ಶನವನ್ನು ವಿಭಿನ್ನ ಹಾಗೂ ವಿಶಿಷ್ಟವಾಗಿ ಆಯೋಜಿಸಲು ನಿರ್ಧರಿಸಿ, ಪ್ರಮುಖ ಆಕರ್ಷಣೆಯಾಗಿ ಮರಳಿನ ಕಲಾಕೃತಿ ಮೂಲಕ ಪ್ರವಾಸಿಗರನ್ನು ಸೆಳೆಯಲು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ನಿರ್ಧರಿಸಿ, ಹೆಚ್ಚು ಜನರು ಸೇರುವೆಡೆ ಮರಳಿನ ಆಕೃತಿಗಳನ್ನು ನಿರ್ಮಿಸಲಾಗುತ್ತಿದೆ.

ವಸ್ತುಪ್ರದರ್ಶನದ ಟೆಂಡರ್ 11.52 ಕೋಟಿ ರೂ.ಗೆ ಫನ್‌ವರ್ಲ್ಡ್ ತೆಕ್ಕೆಗೆ

ಈ ಬಾರಿಯ ದಸರಾ ವಸ್ತು ಪ್ರದರ್ಶನದ ಟೆಂಡರ್ ಅನ್ನು ಸರ್ಕಾರ 9 ಕೋಟಿ ರೂ.ಗೆ ನಿಗದಿ ಮಾಡಿತ್ತು. ಹರಾಜಿನಲ್ಲಿ ಒಂದು ಸಂಸ್ಥೆ 9.50 ಕೋಟಿ ರೂ. ಬಿಡ್ ಮಾಡಿದ್ದರು. ಆದರೆ, ಬೆಂಗಳೂರು ಮೂಲದ ಫನ್ ವರ್ಲ್ಡ್ ಸಂಸ್ಥೆ ಬರೋಬ್ಬರಿ 11.52 ಕೋಟಿ ರೂ. ಬಿಡ್ ಮಾಡುವ ಮೂಲಕ ಈ ಬಾರಿಯ ವಸ್ತುಪ್ರದರ್ಶನದ ಟೆಂಡರನ್ನು ಪಡೆದುಕೊಂಡಿದೆ ಎಂದು ಪ್ರಾಧಿಕಾರ ಸಿಇಓ ರಾಜೇಶ್ ಜಿ.ಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಟೆಂಡರ್ ಪಡೆದುಕೊಂಡಿರುವವರಿಗೆ ಟಿಕೆಟ್ ಕೌಂಟರ್, ವಾಣಿಜ್ಯ, ಆಹಾರ ಮಳಿಗೆ ಮತ್ತು ಅಮ್ಯೂಸ್‌ಮೆಂಟ್ ಪಾರ್ಕ್ ಸೇರುತ್ತದೆ. ಈಗಾಗಲೇ ಸರ್ಕಾರಿ ಇಲಾಖೆಗಳ ಮಳಿಗೆ ಕಾರ್ಯ ಆರಂಭವಾಗಿದೆ. ಆದರೆ, 7 ಇಲಾಖೆ ಮಾತ್ರ ಇನ್ನೂ ಆಸಕ್ತಿ ತೋರಿಲ್ಲ. ಅವರಿಗೆ ನಿರಂತರವಾಗಿ ಕರೆ ಮಾಡುವ ಮೂಲಕ ಸಂಪರ್ಕದಲ್ಲಿದ್ದೇವೆ.

ಅ.15ರಂದು ಈ ಬಾರಿ ವಸ್ತುಪ್ರದರ್ಶನ ಉದ್ಘಾಟನೆಗೊಳ್ಳಲಿದ್ದು, ಅಂದು ಸಂಜೆ ಮುಖ್ಯಮಂತ್ರಿಗಳೇ ಉದ್ಘಾಟಿಸುವ ಸಾಧ್ಯತೆ ಇದೆ. ಈ ಸಂಬಂಧ ನಾಳೆ ಮೈಸೂರಿಗೆ ಆಗಮಿಸುತ್ತಿರುವ ಅವರನ್ನು ಭೇಟಿ ಮಾಡಿ ಖಚಿತ ಪಡಿಸಿಕೊಳ್ಳಲಾಗುವುದು ಎಂದು ತಿಳಿಸಿದರು.

ನವರಾತ್ರಿಯ ಒಂಬತ್ತು ದಿನವೂ ಜನತೆ ವಿವಿಧ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ವಸ್ತುಪ್ರದರ್ಶನದ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವಾರಾಂತ್ಯದಲ್ಲಿ ಏರ್ಪಡಿಸಲು ಚಿಂತಿಸಲಾಗುತ್ತಿದೆ.

ಅಪ್ಪು ಆಕೃತಿ: ಕಬ್ಬಿಣದ ಪಿಲ್ಲರ್ ಹಾಗೂ ಶೀಟ್‌ಗಳನ್ನು ಬಳಸಿ 20X50 ಅಡಿಯ ಎರಡು ಪ್ರತ್ಯೇಕ ಶೆಡ್‌ಗಳನ್ನು ನಿರ್ಮಾಣ ಮಾಡಿದ್ದು, ಅದರಲ್ಲಿ ಮೈಸೂರಿನ ಹೆಸರಾಂತ ಮರಳು ಕಲಾವಿದೆ ಎಂ.ಎನ್. ಗೌರಿ 10 ಲೋಡ್ ಎಂ ಸ್ಯಾಂಡ್ ಬಳಸಿಕೊಂಡು ನಟ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ನೆನಪಿಗಾಗಿ ಒಂದು ಶೆಡ್‌ನಲ್ಲಿ 4 ರಿಂದ 5 ಕಲಾಕೃತಿಯನ್ನು ರೂಪಿಸಿ, ಅದರಲ್ಲಿ ಡಾ.ರಾಜ್‌ಕುಮಾರ್, ಪಾರ್ವತಮ್ಮ ರಾಜ್‌ಕುಮಾರ್ ಜೊತೆಗಿರುವ ಅಪ್ಪು ಬಾಲ್ಯದ ನೆನಪಿನ ಆಕೃತಿ, ತಮ್ಮ ಕಡೆಯ ಚಿತ್ರದಲ್ಲಿ ಕಾಣಿಸಿಕೊಂಡಿದ್ದ ಯೋಧನ ಭಂಗಿಯ ಆಕೃತಿ, ಪುನೀತ್ ಹೆಗಲ ಮೇಲೆ ಪಾರಿವಾಳ ಕುಳಿತಿರುವ ಭಂಗಿಯಲ್ಲಿರುವ ಆಕೃತಿಗಳನ್ನು ರೂಪಿಸಿ, ಇದರೊಟ್ಟಿಗೆ ಮತ್ತೊಂದು ಶೆಡ್‌ನಲ್ಲಿ ಯೋಗದ ಭಂಗಿಯಲ್ಲಿರುವ ಪ್ರಧಾನಿ ನರೇಂದ್ರ ಮೋದಿ, ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರರ ಆಕೃತಿಯನ್ನು ನಿರ್ಮಿಸುವ ಮೂಲಕ ಎಲ್ಲರ ಮೆಚ್ಚುಗೆ ಗಳಿಸಿದ್ದರು.

ಈ ಕಲಾಕೃತಿಯನ್ನು ವಸ್ತುಪ್ರದರ್ಶನ ಪ್ರಾಧಿಕಾರವು ಉಳಿಸಿಕೊಂಡಿದ್ದು, ಕಳೆದ ಒಂದು ವರ್ಷದಿಂದ ಮಳೆ, ಗಾಳಿ ಮತ್ತು ಬಿಸಿಲಿನಿಂದ ಮರಳಿನ ಒಳಭಾಗದಲ್ಲಿ ಹುಳಗಳು ಗೂಡು ಕಟ್ಟಿಕೊಂಡಿದ್ದು, ಕೆಲವು ಭಾಗದಲ್ಲಿ ಬಿರುಕು ಮೂಡಿದೆ. ನೂತನ ಆಕೃತಿಗಳೊಂದಿಗೆ ಈ ಪುನೀತ್ ರಾಜ್‌ಕುಮಾರ್ ಆಕೃತಿಗೆ ನವರೂಪ ನೀಡುವ ಆಲೋಚನೆ ನಡೆಸಿದ್ದಾರೆ.

ಐದು ಗ್ಯಾರಂಟಿ: ರಾಜ್ಯ ಸರ್ಕಾರದ ಐದು ಗ್ಯಾರಂಟಿಗಳಾದ 200 ಯುನಿಟ್ ಉಚಿತ ವಿದ್ಯುತ್‌ನ 'ಗೃಹ ಜ್ಯೋತಿ', ಮನೆಯ ಯಜಮಾನಿಗೆ ತಿಂಗಳಿಗೆ ಎರಡು ಸಾವಿರ ರೂನ 'ಗೃಹಲಕ್ಷ್ಮೀ', ಎಪಿಎಲ್ ಕಾರ್ಡ್‌ದಾರರಿಗೆ 10 ಕೆ.ಜಿ ಪಡಿತರ ವಿತರಣೆಯ 'ಅನ್ನಭಾಗ್ಯ', ರಾಜ್ಯದಲ್ಲಿ ಮಹಿಳೆಯರಿಗೆ ಉಚಿತ ಬಸ್ ಸಂಚಾರ 'ಶಕ್ತಿ' ಯೋಜನೆ ಮತ್ತು ಪಧವೀಧರರು ಡಿಪ್ಲೊಮಾದಾರರಿಗೆ ಕ್ರಮವಾಗಿ 3 ಸಾವಿರ ರೂ., 1500 ರೂ. ನಿರುದ್ಯೋಗ ಭತ್ಯೆಯ 'ಯುವ ನಿಧಿ' ಯೋಜನೆಗಳು ಈಗಾಗಲೇ ಮರಳಿನಲ್ಲಿ ಅರಳಿದ್ದು, ಬಣ್ಣದ ರೂಪ ನೀಡಬೇಕಿದೆ.

ಚಂದ್ರಯಾನ–3: ಇಡೀ ವಿಶ್ವದ ಗಮನ ಸೆಳೆದ ಭಾರತದ ವಿಜ್ಞಾನಿಗಳ ಮಹತರ ಸಾಧನೆ ಚಂದ್ರಯಾನ–3 ಯಶಸನ್ನು ಇಡೀ ವಿಶ್ವವೇ ಕೊಂಡಾಡಿತು. ಈ ಹಿನ್ನೆಲೆಯಲ್ಲಿ ಚಂದ್ರಯಾನ–3ರ ವಿಕ್ರಮ್, ಪ್ರಗ್ಯಾನ್ ರೋವರ್ ಮರಳಿನ ಕಲಾಕೃತಿಯನ್ನು ನಿರ್ಮಿಸಲು ಮುಂದಾಗಿದ್ದು, ಈಗಾಗಲೇ ಗೌರಿ ಮತ್ತು ತಂಡದಿಂದ ಈ ಕೆಲಸ ಭರದಿಂದ ಸಾಗಿದೆ.

ಎಂ ಸ್ಯಾಂಡ್ ಮತ್ತು ಬಣ್ಣ ಬಳಕೆ : ಇಲ್ಲಿ ನಿರ್ಮಾಣವಾಗುತ್ತಿರುವ ಕಲಾಕೃತಿಗಳಿಗೆ ಬೇಕಿರುವಷ್ಟು ಮರಳು ಸಿಗದ ಹಿನ್ನೆಲೆಯಲ್ಲಿ ಎಂ ಸ್ಯಾಂಡ್ ಬಳಸಲು ಮುಂದಾಗಿದ್ದು, ಇಂದು 10 ಲೋಡ್ ಎಂ ಸ್ಯಾಂಡ್ ಪೂರೈಕೆಯಾಗಿದೆ. ಆಕೃತಿ ನಿರ್ಮಾಣಕ್ಕೂ ಮೊದಲು ನೀರಿನಲ್ಲಿ ಸಂಪೂರ್ಣ ನೆನೆಸಿ ನಂತರ ಹಂತ ಹಂತವಾಗಿ ಅದನ್ನು ಬಳಸಲಾಗುತ್ತಿದೆ. ಮರಳಿನಲ್ಲಿ ಕಲಾಕೃತಿ ನಿರ್ಮಾಣವಾಗಿದ್ದರೆ, ಅದಕ್ಕೆ ಬಣ್ಣ ಬಳಸುವ ಅಗತ್ಯವಿರಲಿಲ್ಲ. ಆದರೆ, ಎಂ ಸ್ಯಾಂಡ್‌ನಲ್ಲಿರುವ ನೀರು ಒಣಗಿದ ನಂತರ ಕಲಾಕೃತಿಗಳು ಬಿಳಿಯಾಗಿ ಕಾಣುವ ಸಾಧ್ಯತೆ ಇರುವುದರಿಂದ ಅದು ಅಷ್ಟು ಆಕರ್ಷಕವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸ್ಪ್ರೇ ಪೇಂಟ್ ಬಳಸುವ ಮೂಲಕ ಮತ್ತಷ್ಟು ಆಕರ್ಷಣೆ ನೀಡಲು ಮುಂದಾಗಿದ್ದಾರೆ.

> ಮತ್ತೊಮ್ಮೆ ಅವಕಾಶ ದೊರೆತಿರುವುದು ಸಂತಸದ ವಿಚಾರ. ಕಳೆದ ಹತ್ತು ದಿನಗಳಿಂದ ಆಕೃತಿಗಳ ನಿರ್ಮಾಣ ಆರಂಭವಾಗಿದ್ದು, ಐದು ಗ್ಯಾರಂಟಿಗಳ ಆಕೃತಿ ಪೂರ್ಣವಾಗಿವೆ. ಆದರೆ, ಬಣ್ಣದ ಕೆಲಸ ಬಾಕಿ ಇದೆ. ಚಂದ್ರಯಾನ–3 ಆಕೃತಿಗಳ ನಿರ್ಮಾಣ ಕಾರ್ಯವೂ ನಡೆಯುತ್ತಿದ್ದು, ಎರಡ್ಮೂರು ದಿನಗಳಲ್ಲಿ ಪೂರ್ಣಗೊಳ್ಳಲಿದೆ. ಕಳೆದ ಬಾರಿ ನಿರ್ಮಾಣ ಮಾಡಿದ ಪುನೀತ್ ರಾಜ್‌ಕುಮಾರ್ ಅವರ ಆಕೃತಿಗೆ ನವರೂಪ ನೀಡುವ ಸಣ್ಣಪುಟ್ಟ ಕೆಲಸ ಬಾಕಿ ಇದೆ.
> -ಗೌರಿ, ಮರಳು ಕಲಾವಿದೆ

> ಪುನೀತ್ ರಾಜ್‌ಕುಮಾರ್ ಅವರ ಆಕೃತಿಯನ್ನು ಈ ಬಾರಿಯೂ ಪ್ರದರ್ಶನದಲ್ಲಿ ಉಳಿಸಿಕೊಳ್ಳಲಾಗುತ್ತಿದೆ. ಇದರ ಅಕ್ಕ-ಪಕ್ಕದಲ್ಲಿ ಸ್ಥಳವಕಾಶವಿದ್ದ ಹಿನ್ನೆಲೆಯಲ್ಲಿ ಸರ್ಕಾರದ ಐದು ಗ್ಯಾರಂಟಿ ಮತ್ತು ಚಂದ್ರಯಾನ-3ರ ಆಕೃತಿಯನ್ನು ನಿರ್ಮಾಣ ಮಾಡಿ, ಜನರನ್ನು ಆಕರ್ಷಿಸಲಾಗುತ್ತಿದೆ.
> -ರಾಜೇಶ್.ಜಿ.ಗೌಡ, ಸಿಇಓ, ವಸ್ತುಪ್ರದರ್ಶನ ಪ್ರಾಧಿಕಾರ

ಪಿಎಂ ಸ್ವ-ನಿಧಿಗೆ ಪತ್ರಿಕಾ ವಿತರಕರು ಸೇರ್ಪಡೆ

ಮಾಸಾಚರಣೆ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಎಸ್.ಎ. ರಾಮದಾಸ್ ಮಾಹಿತಿ



ತಿ.ನರಸೀಪುರ, ಅ.6– ಪ್ರಧಾನ ಮಂತ್ರಿ ಸುರಕ್ಷಾ ಯೋಜನೆಯಡಿ ವ್ಯಾಪಾರಿಗಳು, ಅಸಂಘಟಿತ ವಲಯದ ಸಣ್ಣಪುಟ್ಟ ವ್ಯಾಪಾರಸ್ಥರು ಹಾಗೂ ಪತ್ರಿಕಾ ವಿತರಕರಿಗೆ ಸಾಲ ಸೌಲಭ್ಯ ಕಲ್ಪಿಸಲಾಗುತ್ತಿದ್ದು, ಫಲಾನುಭವಿಗಳು ಈ ಯೋಜನೆಯ ಸದುಪಯೋಗ ಪಡೆಯುವಂತೆ ಮಾಜಿ ಸಚಿವ ಹಾಗೂ ಸ್ವನಿಧಿ ಸಮ್ಮಾನ್ ಯೋಜನೆಯ ರಾಜ್ಯ ಸಂಚಾಲಕ ಎಸ್.ಎ.ರಾಮದಾಸ್ ಕರೆ ನೀಡಿದರು.

ಪಟ್ಟಣದ ಸ್ತ್ರೀಶಕ್ತಿ ಭವನದಲ್ಲಿ ಪುರಸಭೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಪಿಎಂ ಸ್ವನಿಧಿ ಮತ್ತು ಸ್ವನಿಧಿಸೇ ಸಮೃದ್ಧಿ ಮಾಸಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಧಾನ ನರೇಂದ್ರ ಮೋದಿ ಅವರ ಸ್ವನಿಧಿ ಯೋಜನೆಗೆ ದೋಬಿ, ಇಸ್ತ್ರಿ ಸೇವೆ, ಹಳೆ ಪಾತ್ರೆ ವ್ಯಾಪಾರಿಗಳು, ಬಡಗಿ, ಚಮ್ಮಾರರು, ಬಿದಿರಿನ ಬುಟ್ಟಿ, ಬೊಂಬು, ಬ್ಯಾಸ್ಕೆಟ್, ಪಣಿ ವ್ಯಾಪಾರಸ್ಥರು, ಹೂವಿನ ಕುಂಡ, ಎಳನೀರು ಮಾರಾಟಗಾರರು, ದಿನಪತ್ರಿಕೆ ವಿತರಕರು, ಆಹಾರ ತಯಾರಿಕಾ ಮಾರುವವರು, ಬೀದಿಬದಿ ವ್ಯಾಪಾರಿಗಳನ್ನು ಸೇರ್ಪಡೆ ಮಾಡಿಕೊಳ್ಳಲಾಗಿದೆ. ಇವರು ಸ್ವನಿಧಿ ಯೋಜನೆಯಡಿಯ ಸಾಲಸೌಲಭ್ಯ ಪಡೆಯಲು ಅರ್ಹರಾಗಿದ್ದಾರೆ ಎಂದರು.

ಅ.15ರವರೆಗೆ ಪಿಎಂ ಸ್ವನಿಧಿ ಮತ್ತು ಸ್ವನಿಧಿಸೇ ಸಮೃದ್ಧಿ ಮಾಸ ಆಚರಿಸಲಾಗುತ್ತಿದ್ದು, ಅರ್ಹ ಫಲಾನುಭವಿಗಳು ಹೆಸರನ್ನು ನೋಂದಾಯಿಸಿ ಯೋಜನೆಯ ಸವಲತ್ತು ಪಡೆದು ಆರ್ಥಿಕವಾಗಿ ಮುನ್ನಡೆ ಸಾಧಿಸುವಂತೆ ಸಲಹೆ ನೀಡಿದರು.

ಕಿರುಸಾಲ ಸೌಲಭ್ಯಕ್ಕೆ ಬೀದಿಬದಿ ವ್ಯಾಪಾರಿಗಳ ನೋಂದಣಿ ಹಾಗೂ ಹಾಲು, ದಿನಪತ್ರಿಕೆ ವಿತರಕರನ್ನು ಯೋಜನೆಗೆ ಸೇರ್ಪಡೆ ಮಾಡಿ ಸಾಲಸೌಲಭ್ಯ ಕಲ್ಪಿಸಲಾಗುತ್ತಿದೆ. ಈ ಯೋಜನೆಯಡಿ ರಸ್ತೆಬದಿ ವ್ಯಾಪಾರಿಗಳು ಮತ್ತು ಸಣ್ಣ ಉದ್ಯಮಿಗಳಿಗೆ ಮುದ್ರಾ ಮೂಲಕ 10 ಸಾವಿರದಿಂದ 10 ಲಕ್ಷ ರೂ. ವರೆಗೆ ಬಂಡವಾಳ ಒದಗಿಸಿಕೊಡಲಾಗುವುದು. ಪಿಎಂ ಸುರಕ್ಷಾ ಜೀವನ್ ಜ್ಯೋತಿ ಯೋಜನೆಯಡಿ ವಾರ್ಷಿಕ 330 ರೂ. ಜಮೆ ಮಾಡಿದರೆ ಸ್ವಾಭಾವಿಕ ಸಾವು ಸಂಭವಿಸಿದ್ದಲ್ಲಿ 2 ಲಕ್ಷ ರೂ. ಪರಿಹಾರ ಸಿಗಲಿದೆ ಎಂದು ತಿಳಿಸಿದರು.

ಪಿಎಂ ಮಾತೃವಂದನ ಸ್ಕೀಂನಲ್ಲಿ ಗರ್ಭಿಣಿಯರ ಪಾಲನೆಗೆ 5 ಸಾವಿರ ರೂ. ನೀಡಲಾಗುತ್ತದೆ. ಶ್ರಮಯೋಗಿ ಮನ್‌ಧನ್ ಯೋಜನೆಯಡಿ ಅಸಂಘಟಿತ ಕಾರ್ಮಿಕರಿಗೆ 60 ವರ್ಷ ನಂತರ ಮಾಸಿಕ 3 ಸಾವಿರ ರೂ. ನೀಡಲಾಗುವುದು. ತಾಲೂಕಿನ ಪತ್ರಿಕಾ ವಿತರಕರು, ಏಜೆಂಟರು, ಬೀದಿ ಬದಿ ವ್ಯಾಪಾರಸ್ಥರು, ಹಾಲು ಮಾರಾಟಗಾರರು ಮುಂತಾದವರಿಗೆ ಈ ಯೋಜನೆ ಬಗ್ಗೆ ಅರಿವು ಮೂಡಿಸಿ ಆರ್ಥಿಕವಾಗಿ ಸಬಲರಾಗುವ ಮೂಲಕ ಸ್ವಾವಲಂಬಿಯಾಗಿ ಬದುಕಲು ಪಣ ತೊಟ್ಟು ಕಾರ್ಯನಿರ್ವಹಿಸುತ್ತಿದ್ದೇವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪುರಸಭೆ ಮುಖ್ಯಾಧಿಕಾರಿ ವಸಂತಕುಮಾರಿ, ಸಮುದಾಯ ಸಂಘಟಕ ಕೆ.ಮಹದೇವ್, ನಾಮ ನಿರ್ದೇಶಿತ ಸದಸ್ಯ ಎಸ್.ಲೋಕೇಶ್, ಬಿಜೆಪಿ ಮುಖಂಡ ಡಾ.ರೇವಣ್ಣ, ಸಿ.ಆರ್.ಪಿ. ಮಂಜುಳಾ, ನಳಿನಿ, ಸಿಬ್ಬಂದಿ ಹಾಜರಿದ್ದರು.

> ಪಿಎಂ ಸ್ವನಿಧಿ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿರುವುದರಿಂದ 'ಬಡವ ನೀ ಇಟ್ಟಾಂಗಿರು' ಎಂಬ ಗಾದೆ ಮಾತು ಹೋಗಿ 'ಬಡವ ನೀ ಸ್ವಾಭಿಮಾನಿಯಾಗಿರು' ಎನ್ನುವಂತಾಗಿದೆ. ಅಷ್ಟರ ಮಟ್ಟಿಗೆ ಈ ಯೋಜನೆ ಉಪಯೋಗವಾಗುತ್ತಿದೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿಯೇ ತಿ.ನರಸೀಪುರ ತಾಲೂಕು ಯೋಜನೆಯ ಸೌಲಭ್ಯ ಪಡೆಯುವಲ್ಲಿ ಮೊದಲ ಸ್ಥಾನದಲ್ಲಿರುತ್ತದೆ ಹಾಗೂ ಉಪಯುಕ್ತ ಈ ಸ್ಕೀಂ ಮೂಲಕ ಬೀದಿಬದಿ ವ್ಯಾಪಾರಿಗಳು, ಪತ್ರಿಕೆ ವಿತರಕರು ಸೇರಿದಂತೆ ಸಣ್ಣಪುಟ್ಟ ವ್ಯಾಪಾರಿಗಳಿಗಾಗಿ ಸ್ವಾಭಿಮಾನಿಗಳಾಗಿ ಬದುಕು ಕಟ್ಟಿಕೊಳ್ಳಬಹುದು.
> –ಅರ್ಜುನ್ ರಮೇಶ್, ಪುರಸಭಾ ಸದಸ್ಯ

ವಿಭಾಗ ಮಟ್ಟಕ್ಕೆ ಬೀಚನಹಳ್ಳಿ ಪ್ರೌಢಶಾಲೆ ಆಯ್ಕೆ



ಹೆಚ್.ಡಿ.ಕೋಟೆ, ಅ.6– ತಾಲೂಕಿನ ಬೀಚನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಬಾಲಕಿಯರ ತಂಡ ಬಾಲ್‌ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಜಯಗಳಿಸಿ ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದೆ.

ಮೈಸೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಬಾಲಕಿಯರ ಬಾಲ್‌ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಬೀಚನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಬಾಲಕಿಯರ ತಂಡ ಪ್ರಥಮ ಸ್ಥಾನ ಗಳಿಸಿ ಸತತ ಎರಡನೇ ಬಾರಿಗೆ ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದೆ.

ಇದೇ ವೇಳೆ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶಿವಕುಮಾರ್, ವೆಂಕಟೇಶ್, ದೈಹಿಕ ಶಿಕ್ಷಣ ಶಿಕ್ಷಕರಾದ ರಮೇಶ್, ಜಯಪ್ಪ ಧನಂಜಯ್, ರಮೇಶ್, ನಂಜುಂಡನಾಯಕ ಸೋಮಣ್ಣ, ನಾಗರಾಜು, ಶಿಕ್ಷಕಿ ಮಮತಾ ಹಾಗೂ ಗ್ರಾಮಸ್ಥರು ತಂಡದ ನಾಯಕಿ ಐಶ್ವರ್ಯ, ಶಾಜಿಯ ಸಪುರ, ನಿಸರ್ಗ, ಸಿಂಚನಾ, ಜಯಲಕ್ಷ್ಮಿ, ವರ್ಷಿತಾ, ಅರ್ಪಿತಾ, ಅನು, ಸಂಜನಾ ಮತ್ತು ರೇವಮಣಿ ಅವರನ್ನು ಅಭಿನಂದಿಸಿದರು.


ಕುಸಿದು ಬಿದ್ದು ಕೂಲಿ ಕಾರ್ಮಿಕ ಸಾವು

ಮೂಗೂರು: ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಕೂಲಿ ಕಾರ್ಮಿಕ ಕುಸಿದು ಬಿದ್ದು ಮೃತಪಟ್ಟಿರುವ ಘಟನೆ ಶುಕ್ರವಾರ ಮಧ್ಯಾಹ್ನ ತಿ.ನರಸೀಪುರ ತಾಲೂಕಿನ ಮೂಗೂರು ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಮಲ್ಲಯ್ಯನವರ ಮಗ ಮಹದೇವಯ್ಯ (50) ಮೃತಪಟ್ಟ ಕೂಲಿ ಕಾರ್ಮಿಕ. ಈತ ಎಂದಿನಂತೆ ಬೆಳಗ್ಗೆ ಜಮೀನಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದಾಗ ಕುಸಿದು ಬಿದ್ದಿದ್ದಾರೆ. ತಕ್ಷಣ ಸ್ಥಳೀಯರು ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿ ಮೃತಪಟ್ಟಿದ್ದಾರೆ. ಮೃತರಿಗೆ ಪತ್ನಿ ಸೇರಿದಂತೆ ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ.

ಹೊಮ್ಮರಗಳ್ಳಿಯ ಖಾಸಗಿ ಕ್ಲಿನಿಕ್‌ಗೆ ಬೀಗ



ಹಂಪಾಪುರ, ಅ.6– ಹೊಮ್ಮರಗಳ್ಳಿ ಗ್ರಾಮದ ರಕ್ಷಾ ಖಾಸಗಿ ಕ್ಲಿನಿಕ್‌ಗೆ ಹೆಚ್.ಡಿ.ಕೋಟೆ ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಶುಕ್ರವಾರ ಪರವಾನಗಿ ಹಾಗೂ ಸ್ವಚ್ಛತೆ ಇಲ್ಲದಿರುವ ಕಾರಣ ಬೀಗ ಹಾಕಿಸಿದರು.

ಕ್ಲಿನಿಕ್‌ಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿದಾಗ ಪರವಾನಗಿ ಮತ್ತು ಸ್ವಚ್ಛತೆ ಇರಲಿಲ್ಲ. ಆದ್ದರಿಂದ ಕ್ಲಿನಿಕ್ ಮುಚ್ಚುವಂತೆ ಆದೇಶಿಸಿದರು.

ನಂತರ ಮಾತನಾಡಿದ ತಾಲೂಕು ಆರೋಗ್ಯಾಧಿಕಾರಿ, ಜಿಲ್ಲಾಧಿಕಾರಿ ಆದೇಶದಂತೆ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಎಲ್ಲಾ ಖಾಸಗಿ ಕ್ಲಿನಿಕ್ ಹಾಗೂ ಆಸ್ಪತ್ರೆಯನ್ನು ಲೈಸೆನ್ಸ್ ಇಲ್ಲದೆ ನಡೆಸುವಂತಿಲ್ಲ. ಆಸ್ಪತ್ರೆ ಮುಖ್ಯಸ್ಥರು ತಮ್ಮ ಆಸ್ಪತ್ರೆಯ ಸೌಲಭ್ಯಗಳ ವಿವರ ಮತ್ತು ಚಿಕಿತ್ಸೆಯ ದರ ಪಟ್ಟಿಯನ್ನು ಕಡ್ಡಾಯವಾಗಿ ಹಾಕಬೇಕು. ಇನ್ನು ಮುಂದೆ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಎಲ್ಲಾ ಖಾಸಗಿ ಕ್ಲಿನಿಕ್ ಮತ್ತು ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ಹುಲ್ಲಹಳ್ಳಿಯಲ್ಲಿ ಚಿರತೆ ದಾಳಿಗೆ ಹಸು ಬಲಿ




ಹುಲ್ಲಹಳ್ಳಿ: ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ಚಿರತೆ ದಾಳಿಗೆ ಹಸು ಮೃತಪಟ್ಟಿದೆ.

ಗ್ರಾಮದ ಮರಿಕಾಳನಾಯಕ ಅವರಿಗೆ ಸೇರಿದ ಹಸು ಬಲಿಯಾಗಿದೆ. ಗ್ರಾಮದ ವೀರಶೈವ ಮಠದ ಹಿಂಭಾಗ ಮೇಯುತ್ತಿದ್ದ ಹಸುವಿನ ಮೇಲೆ ಚಿರತೆ ದಾಳಿ ನಡೆಸಿ, ಅರ್ಧ ಭಾಗವನ್ನು ತಿಂದು ಹಾಕಿದೆ. ಚಿರತೆ ದಾಳಿಯಿಂದ ಗ್ರಾಮಸ್ಥರು ಭಯಗೊಂಡಿದ್ದು, ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಂಡು ಸಾರ್ವಜನಿಕರ ಹಾಗೂ ಸಾಕುಪ್ರಾಣಿಗಳ ಜೀವ ಉಳಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಇತ್ತೀಚೆಗೆ ಕ್ಷೀಣಿಸುತ್ತಿರುವ ಕುಲಕಸುಬು

● ತಹಶೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ● ತಿ.ನರಸೀಪುರದಲ್ಲಿ ವಿಶ್ವಕರ್ಮ ಜಯಂತೋತ್ಸವ ಆಚರಣೆ



ತಿ.ನರಸೀಪುರ, ಅ.6– ವಿಶ್ವಕರ್ಮ ಸಮಾಜದವರು ಹೆಚ್ಚಿನ ವಿದ್ಯಾಭ್ಯಾಸ ಪಡೆಯುವ ಮೂಲಕ ಮುಖ್ಯವಾಹಿನಿಗೆ ಬರಬೇಕು ಎಂದು ತಹಶೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಹೇಳಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗು ವಿಶ್ವಕರ್ಮ ಜಯಂತೋತ್ಸವ ತಾಲೂಕು ಸಮಿತಿಯ ಸಂಯುಕ್ತಾಶ್ರಯದಲ್ಲಿ ನಡೆದ ವಿಶ್ವಕರ್ಮ ಜಯಂತೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಶ್ವಕರ್ಮ ಸಮಾಜದವರು ತಮ್ಮ ಮೂಲ ಕುಲಕಸುಬನ್ನು ನಂಬಿಕೊಂಡು ಜೀವನ ನಡೆಸುತ್ತಿದ್ದಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ಕುಲಕಸುಬು ಕ್ಷೀಣಿಸುತ್ತಿದೆ. ಹಾಗಾಗಿ ಸಮುದಾಯದ ಎಲ್ಲರೂ ವಿದ್ಯಾಭ್ಯಾಸದ ಕಡೆ ಹೆಚ್ಚಿನ ಗಮನ ಹರಿಸಿ, ಉನ್ನತ ಶಿಕ್ಷಣ ಪಡೆದು ಬದುಕು ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಿಶ್ವಕರ್ಮ ಸಮುದಾಯದವರು ಸಮಾಜದ ಏಳಿಗೆ ಹಾಗೂ ಎಲ್ಲಾ ವರ್ಗದ ಜನತೆಯ ಅನುಕೂಲಕ್ಕೆ ಶ್ರಮಿಸುತ್ತಿದ್ದಾರೆ. ಜತೆಗೆ ಸಮಾಜದಲ್ಲಿ ಐಕ್ಯತೆ, ಸಂತೋಷ ಹಾಗೂ ಸಹಬಾಳ್ವೆಯಿಂದ ಜೀವನ ನಡೆಸುತ್ತಿದ್ದಾರೆ. ಇತರೆ ಜನಾಂಗಗಳಂತೆ ಮುಖ್ಯವಾಹಿನಿಗೆ ಬಂದು ಯಶಸ್ಸು ಸಾಧಿಸಬೇಕೆಂದು ತಿಳಿಸಿದರು.

ವಿಶ್ವಕರ್ಮ ಜಯಂತೋತ್ಸವ ಸಮಿತಿಯ ಕಾನೂನು ಸಲಹೆಗಾರ ಬನ್ನೂರು ಪ್ರಭಾಕರ್ ಮಾತನಾಡಿ, ಸರ್ಕಾರ ವಿಶ್ವಕರ್ಮರಿಗೆ ಅನೇಕ ಸವಲತ್ತುಗಳನ್ನು ನೀಡುತ್ತಿದೆ. ಆದರೆ, ಆ ಸವಲತ್ತುಗಳು ಬಂಡವಾಳ ಶಾಹಿಗಳ ಪಾಲಾಗುತ್ತಿದೆ. ಅದನ್ನು ನಾವೇ ಪಡೆದುಕೊಳ್ಳುವ ಮೂಲಕ ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಮುನ್ನಡೆ ಸಾಧಿಸಬೇಕು. ಕುಲಕಸುಬನ್ನು ಯಾರೂ ಬಿಡದೇ ಮುಂದುವರೆಸುವಂತೆ ಮನವಿ ಮಾಡಿದರು.

ಇದೇ ವೇಳೆ ಸಮಾಜದ ಮುಖಂಡರು ತಹಶೀಲ್ದಾರ್ ಸುರೇಶ್ ಆಚಾರ್ ಅವರನ್ನು ಸನ್ಮಾನಿಸಿದರು. ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ, ವಿಶ್ವಕರ್ಮ ಜಯಂತೋತ್ಸವ ಸಮಿತಿಯ ಅಧ್ಯಕ್ಷ ಕೆಬ್ಬೇಹುಂಡಿ ಸಿದ್ದಪ್ಪಾಜಿ, ಗೌರವಾಧ್ಯಕ್ಷ ಬಸವರಾಜಾಚಾರ್, ಉಪಾಧ್ಯಕ್ಷ ಹುಣಸೂರು ಮಹೇಶ್, ಕೃಷಿ ಅಧಿಕಾರಿ ಸಿದ್ದಾಚಾರ್, ಗ್ಯಾರೇಜ್ ಸೋಮಣ್ಣ, ಪ್ರಕಾಶಾಚಾರಿ, ಶ್ರೀನಿವಾಸಾಚಾರಿ, ಸಾಮಿಲ್ ಸಿದ್ದಪ್ಪಾಜಿ, ಪ್ಲೈನಿಂಗ್ ಮಿಷನ್ ಕೆಂಪಾಚಾರ್, ಹೆಗ್ಗೂರು ಈಶ್ವರಾಚಾರ್, ಮೂಗೂರು ಪ್ರಭಾಕರ್, ಚಿಟಗಯ್ಯನ ಕೊಪ್ಪಲು ರವಿ, ತಲಕಾಡು ಗಜೇಂದ್ರ ವಿಜೇಂದ್ರ ಕುಮಾರ್, ಹೆಳವರಹುಂಡಿ ಚೆಲುವಾಚಾರ್, ರಾಜಣ್ಣ, ಕೊತ್ತೇಗಾಲ ಕೆಂಪಾಚಾರ್, ಕೆಪುಟ್ಟಸೋಮಾಚಾರ್, ಬೆನಕನಹಳ್ಳಿ ಚೆಲುವರಾಜು, ಯಜಮಾನ್ ಸಿದ್ದಪ್ಪಾಜಿ ಹಾಜರಿದ್ದರು.

ಕೆ.ಎಂ.ಕೃಷ್ಣಗೆ ಪಿಹೆಚ್‌ಡಿ ಪದವಿ

ಬನ್ನೂರು: ಮೈಸೂರಿನ ಮಹಾರಾಜ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಎಸ್.ಟಿ. ರಾಮಚಂದ್ರ ಅವರ ಮಾರ್ಗದರ್ಶನದಲ್ಲಿ ಬನ್ನೂರಿನ ವಿವೇಕಾನಂದ ಪಿಯು ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕ ಕೆ.ಎಂ.ಕೃಷ್ಣ ಸಾದರ ಪಡಿಸಿದ 'ಸೆಲ್ಫ್‌ಹೆಲ್ಪ್ ಗ್ರೂಪ್ ಆ್ಯಂಡ್ ಎಂಪವರ್‌ಮೆಂಟ್ ಆಫ್ ದ ಶೆಡ್ಯೂಲ್ಡ್ ಟ್ರೈಬ್ಸ್ ವುಮೆನ್ ಇನ್ ಕರ್ನಾಟಕ ಸ್ಟೇಟ್' ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾಲಯ ಪಿಹೆಚ್‌ಡಿ ಪದವಿಗೆ ಅಂಗೀಕರಿಸಿದೆ.





ಬಾಲಕರ ಜಿಲ್ಲಾ ಮಟ್ಟದ ಕಬ್ಬಡ್ಡಿ ಪಂದ್ಯಾವಳಿಯಲ್ಲಿ ವಿಜೇತರಾಗಿ ವಿಭಾಗ ಮಟ್ಟಕ್ಕೆ ಆಯ್ಕೆಯಾದ ಬನ್ನೂರಿನ ವಿವೇಕಾನಂದ ಪ್ರೌಢಶಾಲೆ ವಿದ್ಯಾರ್ಥಿಗಳನ್ನು ಶಿಕ್ಷಣ ಸಂಸ್ಥೆಯ ಧರ್ಮದರ್ಶಿ ಎಂ.ಪ್ರಕಾಶ್ ಅಭಿನಂದಿಸಿದರು. ಮುಖ್ಯ ಶಿಕ್ಷಕ ದೇವರಾಜೇಗೌಡ, ಮಹದೇವಸ್ವಾಮಿ, ಸೂರ್ಯನಾರಾಯಣ, ದೈಹಿಕ ಶಿಕ್ಷಕ ಅತ್ತಳ್ಳಿ ಮಹೇಶ್ ಇದ್ದರು.

ಪಿ.ಪಿ. ಸಂತೋಷ್ ಅಧಿಕಾರ ಸ್ವೀಕಾರ

ಕೆ.ಆರ್.ನಗರ, ಅ.6– ಪಟ್ಟಣದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಅಗತ್ಯ ಕ್ರಮ ಕೈಗೊಳ್ಳುವ ಜತೆಗೆ ಬಸ್ ನಿಲ್ದಾಣ, ಪಾರ್ಕ್‌ಗಳಲ್ಲಿ ಕಳ್ಳತನ ಹಾಗೂ ಮಹಿಳೆಯರನ್ನು ಚುಡಾಯಿಸುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ವೃತ್ತ ನಿರೀಕ್ಷಕ ಪಿ.ಪಿ. ಸಂತೋಷ್ ಹೇಳಿದರು.



ಪಟ್ಟಣ ಪೊಲೀಸ್ ಠಾಣೆಯಲ್ಲಿ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು, ಈಗಾಗಲೇ ಸಾರ್ವಜನಿಕರು, ಪತ್ರಕರ್ತರು, ವರ್ತಕರು, ಬುದ್ಧಿಜೀವಿಗಳಿಂದ ಸಲಹೆ ಸೂಚನೆ ಪಡೆದಿದ್ದೇನೆ. ಪಟ್ಟಣದ ಕೆಲವು ಕಡೆ ಮಾದಕ ವಸ್ತುಗಳ ಮಾರಾಟದ ಬಗ್ಗೆ ಮಾಹಿತಿ ಇದ್ದು, ಶೀಘ್ರ ಪತ್ತೆ ಹಚ್ಚುವ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು.

ಪಟ್ಟಣದಲ್ಲಿ ಇತ್ತೀಚೆಗೆ ಜನಸಂಖ್ಯೆ ಹೆಚ್ಚಾಗಿದ್ದು, ವಾಹನಗಳ ನಿಲುಗಡೆ ಮತ್ತು ಸಂಚಾರ ಹೆಚ್ಚಾಗಿರುವುದರಿಂದ ಪುರಸಭೆಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು. ಅಗತ್ಯವಿದ್ದಲ್ಲಿ ಏಕಮುಖ ಸಂಚಾರ ಸೇರಿದಂತೆ ಪಾರ್ಕಿಂಗ್‌ಗೆ ಪರ್ಯಾಯ ವ್ಯವಸ್ಥೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕುಡಿತ ಬಿಟ್ಟು ಬದುಕು ರೂಢಿಸಿಕೊಳ್ಳಿ



ನಂಜನಗೂಡು, ಅ.6–ಕುಡಿತದ ಚಟದಿಂದ ಮಾನಸಿಕ ಹಾಗೂ ದೈಹಿಕ ಆರೋಗ್ಯ ಹಾಳಾಗುವುದಲ್ಲದೆ, ಕುಟುಂಬಗಳು ಬೀದಿ ಪಾಲಾಗುತ್ತವೆ. ಹೀಗಾಗಿ ಕುಡಿತ ಬಿಟ್ಟು ಬದುಕುವುದನ್ನು ರೂಢಿಸಿಕೊಳ್ಳಬೇಕು ಎಂದು ತಹಶೀಲ್ದಾರ್ ಶಿವಕುಮಾರ್ ಕಾಸ್ನೂರ್ ಹೇಳಿದರು.

ನಗರದ ಮಂಗಳ ಮಂಟಪದಲ್ಲಿ ಶುಕ್ರವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಆಯೋಜಿಸಿದ್ದ ಮದ್ಯವರ್ಜನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಕುಡಿತದಿಂದ ಕುಟುಂಬದ ನೆಮ್ಮದಿ ಹಾಳಾಗುವ ಜತೆಗೆ ಘನತೆಗೂ ಧಕ್ಕೆಯಾಗಲಿದೆ. ಮದ್ಯವ್ಯಸನಿಯ ಕುಟುಂಬದ ಸದಸ್ಯರು ನೆಮ್ಮದಿಯಿಂದ ಬದುಕಲು ಸಾಧ್ಯವಿಲ್ಲ. ಹೀಗಾಗಿ ಕುಡಿತದ ಚಟದಿಂದ ಹೊರಬಿದ್ದು ಹೊಸ ಜೀವನ ರೂಪಿಸಿಕೊಳ್ಳಲು ಮದ್ಯವ್ಯಸನಿಗಳು ಮುಂದಾಗಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಮದ್ಯ ಸೇವನೆಯಿಂದ ಆಗುವ ಅನಾಹುತದ ಬಗ್ಗೆ ಉಪನ್ಯಾಸ ನೀಡಲಾಯಿತು. ಕಾರ್ಯಕ್ರಮದಲ್ಲಿ ಮಕ್ಕಳ ಮನೆ ಸಂಸ್ಥೆಯ ಅಧ್ಯಕ್ಷ ಡಿ.ಜೆ.ಸೋಮಶೇಖರ್, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಗಂಗಾಧರ್, ಜನಜಾಗೃತಿ ಸಮಿತಿ ಉಪಾಧ್ಯಕ್ಷ ಎಸ್‌ಎಲ್‌ಎಸ್ ಮೂರ್ತಿ, ಲಕ್ಷ್ಮಣ್, ಗೋವಿಂದಾಚಾರ್, ಡಾ.ಅನಿತಾ, ಕಸಾಪ ಅಧ್ಯಕ್ಷೆ ಲತಾ ಮುದ್ದುಮೋಹನ್ ಉಪಸ್ಥಿತರಿದ್ದರು.

ಸರಗೂರು ಅಭಿವೃದ್ಧಿಗೆ ಒತ್ತು ನೀಡಿ

ಪಪಂ ಮುಖ್ಯಾಧಿಕಾರಿಗೆ ಶಾಸಕ ಅನಿಲ್ ಚಿಕ್ಕಮಾದು ಸೂಚನೆ



ಸರಗೂರು, ಅ.6– ಪಟ್ಟಣದ ವಾರ್ಡ್‌ಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿ ಎಂದು ಶಾಸಕ ಅನಿಲ್ ಚಿಕ್ಕಮಾದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಂಜುನಾಥ್‌ಗೆ ಸೂಚಿಸಿದರು.

ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ಪಟ್ಟಣದ ಅಭಿವೃದ್ಧಿ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪಟ್ಟಣದಲ್ಲಿ ನಗರೋತ್ಥಾನ ಕಾಮಗಾರಿ ಪ್ರಾರಂಭ, ಆಶ್ರಯ ನಿವೇಶನ ಜಾಗದ ಅಭಿವೃದ್ಧಿ, ಕುಡಿಯುವ ನೀರು ಪೂರೈಕೆ, ವಿವಿಧ ಕಾಮಗಾರಿ ಪೂರ್ಣಗೊಳಿಸಬೇಕು ಹಾಗೂ ವಾರ್ಡ್ ನಿವಾಸಿಗಳ ಮೂಲ ಸೌಕರ್ಯಕ್ಕೆ ಹೆಚ್ಚು ಒತ್ತು ನೀಡಲು ಮುಂದಾಗಿ ಎಂದು ತಿಳಿಸಿದರು.

ಸರಗೂರಿನಲ್ಲಿ ನಡೆಯುತ್ತಿದ್ದ ಸಾಂಪ್ರದಾಯಿಕ ಮಾರಮ್ಮ, ದೊಡ್ಡಹಬ್ಬ, ಚಂದ್ರವಮೌಳೇಶ್ವರ ರಥೋತ್ಸವ ಆಚರಣೆಗೆ ಮುಂದಿನ ದಿನಗಳಲ್ಲಿ ಸಭೆ ಕರೆಯಲಾಗುವುದು. ಸಭೆಯಲ್ಲಿ ಎಲ್ಲರೂ ಭಾಗವಹಿಸಿ, ಹಿಂದಿನಿಂದ ನಡೆದುಕೊಂಡು ಬರುತ್ತಿದ್ದ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗಲು ಪಟ್ಟಣದ ಜನತೆ ಮುಂದಾಗಬೇಕು ಎಂದು ಮನವಿ ಮಾಡಿದರು.

ರಸ್ತೆಬದಿ ವ್ಯಾಪಾರಿಗಳಿಗೆ ಬೇರೆಡೆ ಸ್ಥಳ ಗುರುತಿಸಿ, ಅಲ್ಲಿಯೇ ವ್ಯಾಪಾರ ನಡೆಸಲು ಅನುಕೂಲ ಮಾಡಿಕೊಡಬೇಕು. ಪಟ್ಟಣದ ವಿವಿಧ ವಿವಿಧ ಕಾಮಗಾರಿಗಳ ಟೆಂಡರ್ ಕರೆಯಬೇಕು ಎಂದು ಸದಸ್ಯರು ತಮ್ಮ ವಾರ್ಡ್‌ಗಳ ಅಭಿವೃದ್ಧಿ ಕುರಿತು ಶಾಸಕರ ಗಮನಕ್ಕೆ ತಂದರು. ಪಪಂ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸ್ಥಾಯಿ ಸಮಿತಿ ಅಧ್ಯಕ್ಷೆ ಉಮಾ ರಾಮು, ಸದಸ್ಯರಾದ ಎಸ್.ಎಲ್.ರಾಜಣ್ಣ, ಶ್ರೀನಿವಾಸ್, ಶಿವಕುಮಾರ್, ಚಲುವಕೃಷ್ಣ, ನೂರಾಳಸ್ವಾಮಿ, ದಿವ್ಯಾ ನವೀನ್, ಸಣ್ಣತಾಯಮ್ಮ, ವೃತ್ತ ನಿರೀಕ್ಷಕ ಲಕ್ಷ್ಮೀಕಾಂತ್, ಪಿಎಸ್‌ಐ ನಂದೀಶ್ ಕುಮಾರ್, ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್, ಸೆಸ್ಕ್ ಎಂಜಿನಿಯರ್ ಅಶೋಕ್, ಸಿಬ್ಬಂದಿ ಪಳನಿಸ್ವಾಮಿ, ಮಹದೇವಸ್ವಾಮಿ, ರಾಮು, ಸತೀಶ್, ಅರುಣಾರಾಧ್ಯ ವಾಟರ್ ಮನ್ ನಾಗೇಶ್ ಇತರರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ತಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಮಿಷನ್ ರಾಣಿಗಂಜ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಫೈಟರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಜೈಲರ್ (ತ)	4 ಪ್ರದರ್ಶನಗಳು
ಸಂಗಂ	
ರಾಜ ಮಾರ್ತಾಂಡ (ಕ)	4 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಜ ಮಾರ್ತಾಂಡ (ಕ)	4 ಪ್ರದರ್ಶನಗಳು
ಪ್ರಭಾ	
ಲವ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿಗ್ವಿಜಯ (ಕ): ಬೆ.10.40ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಜವಾನ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11.30ಕ್ಕೆ, ಒಲವೇ ಮಂದಾರ 2 (ಕ): ಮ.2ಕ್ಕೆ, ಡೆಮಾನ್ (ತ): ಸಂ.4.30ಕ್ಕೆ, ಸುಖೀ (ಹಿಂ): ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಎಕ್ಸ್‌ಪೆಂಡಬಲ್ಸ್ (ಇಂ): ಬೆ.11.30ಕ್ಕೆ, ರಾ.9.40ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಸಂ.4.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜವಾನ್ (ಹಿಂ): ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಮ.2.10ಕ್ಕೆ, ರಾ.8.05ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ (ಕ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.9.10ಕ್ಕೆ, ಮ.12.45ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಸಂ.4.20ಕ್ಕೆ, ರಾ.9.50ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ):** ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ):** ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ):** ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ರಾ.9.45ಕ್ಕೆ, **ಆಚಾರ್ & ಕೋ (ಕ):** ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ):** ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ):** ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ):** ಸಂ.6.35ಕ್ಕೆ, **ಭೋಳಾ ಶಂಕರ್ (ತೆ):** ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ):** ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶೌರ್ಯ ಜಾಗರಣಾ ರಥಯಾತ್ರೆ ಮೆರವಣಿಗೆ



ಹುಣಸೂರು, ಅ.6– ವಿಶ್ವ ಹಿಂದೂ ಪರಿಷತ್ ಮತ್ತು ಭಜರಂಗದಳ ವತಿಯಿಂದ ರಾಜ್ಯಾದ್ಯಂತ ಸಂಚರಿಸುತ್ತಿರುವ ಶೌರ್ಯ ಜಾಗರಣಾ ರಥಯಾತ್ರೆ ಶುಕ್ರವಾರ ತಾಲೂಕಿನ ಬಿಳಿಕೆರೆಗೆ ಆಗಮಿಸಿದಾಗ ಸಾರ್ವಜನಿಕರು ಪುಷ್ಪಾರ್ಚನೆ ಮಾಡಿ ಸ್ವಾಗತಿಸಿ, ಮುಖ್ಯಬೀದಿಯಲ್ಲಿ ಮೆರವಣಿಗೆ ನಡೆಸಿದರು.

ಮಾದಳ್ಳಿ ಮಠಾಧ್ಯಕ್ಷರಾದ ಶ್ರೀ ಸಾಂಬ ಸದಾಶಿವಸ್ವಾಮೀಜಿ, ಮೈಸೂರಿನ ಹಿರಿಯ ನ್ಯಾಯವಾದಿ ಸಿ.ವಿ.ಕೇಶವಮೂರ್ತಿ, ರಾ. ಸತೀಶ, ರಘು ಸಕಲೇಶಪುರ, ಮಹದೇವಪ್ಪ ಇದ್ದರು. ಸಂಜೆ 5 ಗಂಟೆಗೆ ಹುಣಸೂರಿಗೆ ಆಗಮಿಸಿದ ರಥವನ್ನು ಗಾವಡಗೆರೆ ಮಠದ ಶ್ರೀ ಶ್ರೀನಟರಾಜ ಸ್ವಾಮೀಜಿ, ಶ್ರೀ ಸ್ವರೂಪಾನಂದಸ್ವಾಮೀಜಿ, ಭಜರಂಗದಳದ ರಾಷ್ಟ್ರೀಯ ಸಂಯೋಜಕ ಸೂರ್ಯನಾರಾಯಣ, ಜಿಲ್ಲಾಧ್ಯಕ್ಷ ಸೋಮಣ್ಣ ಬೈಲುಕುಪ್ಪೆ, ಉಪಾಧ್ಯಕ್ಷ ವಿ.ಎನ್.ದಾಸ್, ಡಾ.ಮೋದಿ ಸೇರಿದಂತೆ ನೂರಾರು ಯುವಕರು ಸ್ವಾಗತಿಸಿದರು.

ಬಳಿಕ ಚೆಂಡೆವಾದ್ಯ, ವೀರಗಾಸೆ, 100ಕ್ಕೂ ಹೆಚ್ಚು ಬೈಕ್ ಸವಾರರು ಮೆರವಣಿಗೆ ನಡೆಸಿದರು. ನಗರಸಭೆ ಮೈದಾನದಲ್ಲಿ ಶ್ರೀ ನಟರಾಜಸ್ವಾಮೀಜಿ ಸಾನಿಧ್ಯದಲ್ಲಿ ಸಭಾ ಕಾರ್ಯಕ್ರಮ ನಡೆಯಿತು.

ಭಜರಂಗದಳದ ಮಂಡ್ಯ ಜಿಲ್ಲಾ ಕಾರ್ಯದರ್ಶಿ ಬಾಲು ಮಾತನಾಡಿ, ಹಿಂದೂ ಯುವಕರನ್ನು ಸಂಘಟಿಸುವುದು, ದಬ್ಬಾಳಿಕೆಯನ್ನು ಮೆಟ್ಟಿ ನಿಲ್ಲುವುದು ಮತ್ತು ನಿರ್ಮೂಲನೆ ಮಾಡಬೇಕು. ಇದನ್ನು ಭಜರಂಗದಳ ಕಾರ್ಯರೂಪಕ್ಕೆ ತರಲಿದೆ ಎಂದರು.

ಭಜರಂಗದಳದ ರಾಷ್ಟ್ರೀಯ ಸಂಯೋಜಕ ಸೂರ್ಯನಾರಾಯಣ ಮಾತನಾಡಿ, ವಿಶ್ವ ಹಿಂದೂ ಪರಿಷತ್ ಸ್ಥಾಪನೆಯಾಗಿ 59 ವರ್ಷ ಕಳೆದಿದೆ. ಸಾಮೂಹಿಕ ವಿವಾಹ, ಹನುಮಾನ್ ಚಾಲಿಸ್ ಪಠಣ, ಶೌರ್ಯ ಜಾಗರಣಾ ರಥಯಾತ್ರೆ ಸೇರಿದಂತೆ ಮತ್ತಿತರ ಕಾರ್ಯಕ್ರಮಗಳನ್ನು ದೇಶಾದ್ಯಂತ ಹಮ್ಮಿಕೊಳ್ಳಲಾಗಿದೆ. ಇಂದಿನ ಯುವಕರು ಅನೇಕ ದುಶ್ಚಟ ಹಾಗೂ ವೈಭವದ ಜೀವನಕ್ಕೆ ಮಾರು ಹೋಗಿದ್ದಾರೆ. ಇವರಿಗೆ ಸನಾತನ ಧರ್ಮದ ವಿಷಯ ತಿಳಿಸಲಾಗುತ್ತಿದೆ ಎಂದು ತಿಳಿಸಿದರು.


ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆ ಮಾಜಿ ನಿರ್ದೇಶಕರು
ಜನಹಿತ ವಿವಿದೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ
ಟಿ.ಸೋಮು ಅವರಿಗೆ
ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು
ಶುಭಕೋರುವವರು: ವಾರ್ಡ್‌ನಂ. 22 ಪಡುವಾರಹಳ್ಳಿ, ಸ್ನೇಹಿತರು